SCARCITY CONDITIONS PREVALING IN CERTAIN AREAS OF THE STATE AND RELIEF MEASURES ADOPTED AND TO BE ADOPTED.

(Debate Continued).

Mr. SPEAKER.—Before I call upon anybody, I wish to assess the situation. I think that we have spent the bulk of the time. I have got 30 names more with me. Some of the members request that if time permits they may be permitted to speak. Under that category there are 12. The time allotted for this Debate is 9 hours. We have already spent 6 hours 38 minutes—3 hours and 8 minutes by the Congress Party, 1 hour 27 minutes for PSP—I do not know if Sri Gopala Gowda comes under that—time taken by other opposition members 2 hours 7 minutes—and the time left is 2 hours 22 minutes. The Hon'ble Minister wants about 45 minutes.....

Sri M. V. KRISHNAPPA (Minister for Revenue).—The Hon'ble Chief Minister wants to speak.

Mr. SPEAKER.—The Chief Minister will require half-an-hour. So, it will go up to 3 O'clock or perhaps 15 minutes more. By 3-30 P.M. the debate will be over.

Sri V. M. DEO (Gubbi).—Let the whole day be taken, Sir.

Mr. SPEAKER.—Then, what is the Business Advisory Committee for? Why should it spurt up after one day is over?

Sri C. J. MUCKANNAPPA (Sira).—Sir, a special situation has arisen about food problem. The Chair is also a little elastic.....

Mr. SPEAKER.—That is my difficulty.

Sri C. J. MUCKANNAPPA.—Let the whole day be spent on this subject, Sir.

Mr. SPEAKER.—I thought the members would appreciate my elasticity. We will have tea-break at 3-00 P.M. The Debate will continue till 3-00 P.M. The Hon'ble Ministers may commence the reply from 3-30 P.M. I hope this will be alright.

Sri SANJEEVANATH AIKALA (Suratkal).—That will not be alright, Sir.

Mr. SPEAKER.—We will make it alright.

ಶ್ರೀ ಎಸ್. ಗೋಪಾಲ ಗೌಡ.—ಸರಕಾರದವರು 2 ಲಕ್ಷ ಪಲ್ಲದಷ್ಟು ಗೋಧಿ ಬಂತು ಎಂದು ಹೇಳಿದರು. ಆದರೆ ನಾನು ಭಟ್ಕಳ್ ಹೋಗಿ ಎಲ್ಲಿ ಕೇಳಿದರೂ ಸಿಕ್ಕದೇ ಇದೆ. ಇದರ ಬಗ್ಗೆ ಸರಕಾರದವರು ಏನು ಹೇಳುತ್ತಾರೆ?

Mr. SPEAKER.—He should wait for the reply.

ಶ್ರೀ ಎಂ. ವಿ. ಕೃಷ್ಣಪ್ಪ.—ನಿನ್ನೆ ರಾತ್ರಿ ಅವಡಿಯಿಂದ ಗೋಧಿ ತುಂಬಿದ ರಾರಿಗಳು ಭಟ್ಕಳ್ ಬಂದಿವೆ. ಮಾನ್ಯ ಸದಸ್ಯರಿಗೆ ಎಷ್ಟು ಗೋಧಿ ಬೇಕೆಂದು ತಿಳಿಸಿದರೆ ಅದನ್ನು ಒದಗಿಸುವ ಏರ್ಪಾಡು ಮಾಡಬಹುದು. ಮದರಾಸಿನಿಂದ ಅವಡಿ ಎಷ್ಟು ದೂರ ಎನ್ನುವುದೂ ಮಾನ್ಯ ಸದಸ್ಯರಿಗೇ ಗೊತ್ತು.

Mr. SPEAKER.—Now, this bargaining should not be done in the House. That is not proper.

Sri C. J. MUCKANNAPPA.—May take 10 minutes.

† ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮಾನ್ಯ ಅಧ್ಯಕ್ಷರೇ, ಈಗೆರಡು ದಿನಗಳಿಂದ ಮೈಸೂರು ಸಂಸ್ಥಾನದಲ್ಲಿ ಪ್ರಕೃತಿಯ ವಿಕೋಪಕ್ಕೆ ತುತ್ತಾಗಿರುವ ಅನೇಕ ಹಳ್ಳಿಗಳಲ್ಲಿ ಅನ್ನಾಹಾರಗಳು ಮತ್ತು ದನಕರುಗಳಿಗೆ ಮೇವು ಇಲ್ಲದೆ ಒದಗಿರುವಂತಹ ದಾರುಣ ಪರಿಸ್ಥಿತಿಯನ್ನು ಈ ಸಭೆಯಲ್ಲಿ ಚರ್ಚೆ

ಮಾಡುತ್ತಿದ್ದೇವೆ. ಈ ವರ್ಷ ನಮ್ಮ ನಮ್ಮ ರಾಜ್ಯದಲ್ಲಿ ಸಕಾಲದಲ್ಲಿ ಮಳೆಬೆಳೆಗಳು ಆಗದೆ ಇಪ್ಪೊತ್ತು ನಾವು ಬಹಳ ಕಷ್ಟ ಪರಿಸ್ಥಿತಿಯಲ್ಲಿ ತೊಳಲಾಡುತ್ತ ಬರಗಾಲದ ಅಡಿಯಲ್ಲಿ ಇದ್ದೇವೆ. ಈ ವಿಷಯವನ್ನು ಈ ಸಭೆ ಪ್ರಾರಂಭವಾದ ಕೂಡಲೇ ಸರಕಾರದ ಗಮನಕ್ಕೆ ತಂದಾಗ ತಾವು ಮತ್ತು ಸರಕಾರದವರು ಚರ್ಚೆಮಾಡಿ ಸರಿಯಾದ ಸೂಕ್ತವಾದ ಒಂದು ಮಾರ್ಗವನ್ನು ಕಂಡು ಹಿಡಿಯಲು ಮತ್ತು ಕ್ಷಾಮ ಪರಿಹಾರಕ್ಕಾಗಿ ಏನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು ಎನ್ನುವ ಒಂದು ನಿಶ್ಚಯವನ್ನು ಮಾಡೋಣ ಎಂದು ಹೇಳಿದರು. ಈ ನಿಂದರ್ಭದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು, ಆಹಾರ ಮಂತ್ರಿಗಳು ಮತ್ತು ವ್ಯವಸಾಯ ಮಂತ್ರಿಗಳು ಇತ್ತೀಚೆಗೆ ದೆಹಲಿಗೆ ಹೋಗಿ ಅಲ್ಲಿ ಎಲ್ಲ ವಿಚಾರಗಳನ್ನು ವಿನಿಮಯ ಮಾಡಿಕೊಂಡು ನಮ್ಮ ರಾಜ್ಯದಲ್ಲಿ ಈಗ ಒದಗಿರುವ ಕಷ್ಟ ಪರಿಸ್ಥಿತಿಯನ್ನು ಸರಿಯಾದ ರೀತಿಯಲ್ಲಿ ಪರಿಹರಿಸಿ ಜನ ಮತ್ತು ದನಕ್ಕೆ ಆಹಾರವೂ ಇಲ್ಲದೆ, ಮೇವಿಲ್ಲದೆ ಪ್ರಾಣವನ್ನು ನೀಗದಂತೆ ನೋಡಿಕೊಳ್ಳುತ್ತೇವೆಂದು ಹೇಳಿದ್ದಾರೆ ಮತ್ತು ಅವರುಗಳು ದೆಹಲಿಗೆ ಹೋಗಿ ಬಂದ ಮೇಲೆ ಆಹಾರ ಮಂತ್ರಿಗಳು ಮತ್ತು ಮುಖ್ಯ ಮಂತ್ರಿಗಳು ಜಿಲ್ಲಾಧಿಕಾರಿಗಳ ಸಭೆಯನ್ನು ಕೂಡಿಸಿ ಅಲ್ಲಿ ಅವರು ಹೇಳಿದ ಎಲ್ಲ ವಿಷಯಗಳನ್ನು ತಿಳಿದುಕೊಂಡ ಮೇಲೆ ನಮಗೆ ಅಷ್ಟು ಆಸೆಯೂ ಉಳಿದಿಲ್ಲ ಎಂದು ಹೇಳಿದರೆ ಅದು ಅತಿಶಯೋಕ್ತಿಯಾಗುವುದಿಲ್ಲ.

1-00 P.M.

ನೆನ್ನೆಯ ದಿನ ಅನೇಕ ಜನ ಮಾನ್ಯ ಸದಸ್ಯರು ದೇಶದೊಳಗಿರತಕ್ಕ ಹಾಗೂ ಅವರವರ ಜಿಲ್ಲೆಯಲ್ಲಿರತಕ್ಕ ಪರಿಸ್ಥಿತಿಯ ಬಗ್ಗೆ ಅವರೆಲ್ಲರೂ ಮಾತನಾಡಿದ್ದಾರೆ. ಜನಗಳಿಗೆ ಎಲ್ಲೆಲ್ಲಿ ಏನೇನು ಕಷ್ಟಗಳಿವೆ, ಮಳೆ ಎಲ್ಲಿ ಬಿಂದಿಲ್ಲ, ಎಲ್ಲಿ ಜನರಿಗೆ ಕುಡಿಯುವುದಕ್ಕೆ ನೀರಿಲ್ಲ, ದನಗಳಿಗೆ ತಿನ್ನಲು ಮೇವಿಲ್ಲ ಎಂಬ ವಿಷಯಗಳನ್ನೆಲ್ಲಾ ತಿಳಿಸಿರುತ್ತಾರೆ. ನಾವು ಈ ವಿಚಾರವನ್ನು ಪರಿಶೀಲಿಸಲು ಬಹಳ ದೂರ ಕೂಡ ಹೋಗಬೇಕಾಗಿಲ್ಲ. ನಮ್ಮ ತುಮಕೂರು ಜಿಲ್ಲೆ ಮತ್ತು ಬೆಂಗಳೂರು ಜಿಲ್ಲೆಗಳು ಒಂದಕ್ಕೊಂದು ಹೊಂದಿಕೊಂಡಿವೆ. ಇವೆರೆಡೂ ಬರಗಾಲದ ಹಂಚಿನಲ್ಲವೆ. ಇಲ್ಲಿಯ ಜನರು ಬಹಳ ಕಷ್ಟದಲ್ಲಿದ್ದಾರೆ. ಆದರೆ ನಾನು ಯಾವುದೋ ಒಂದು ಪೇಪರಿನಲ್ಲಿ ಓದಿದೆ. ಸರ್ಕಾರದವರೂ ಕೂಡ ನಮ್ಮ ಜಿಲ್ಲೆಯ ಬಗ್ಗೆ ಒಂದು ಅನುಕಂಪ ಸೂಚಿಸುತ್ತಾರೆಂದು ನಾನು ಭಾವಿಸಿದ್ದೆನು. ಆದರೆ ಆ ಪತ್ರಿಕೆಯನ್ನು ಓದಿದ ನಂತರ ನನ್ನ ಮನಸ್ಸೇ ಕಲಕಿ ಹೋಯಿತು. ಅದರಲ್ಲಿ ತುಮಕೂರು ಮತ್ತು ಬೆಂಗಳೂರು ಜಿಲ್ಲೆಗಳಿರದರಲ್ಲೂ ಪರಿಸ್ಥಿತಿ ಎಲ್ಲಾ ಸರಿಯಾಗಿದೆಯೆಂದು ಅದರಲ್ಲಿ ತಿಳಿಸಿದೆ. ನನಗೆ ನನ್ನ ಕ್ಷೇತ್ರದಲ್ಲಿರತಕ್ಕ ಎಲ್ಲಾ ಪಂಚಾಯಿತಿಗಳ ಛೇರ್ಮನ್ನರೂ ಮತ್ತು ಸದಸ್ಯರುಗಳೂ ಒಟ್ಟಾಗಿ ಸೇರಿ ನನಗೆ ಒಂದು ಮೆಮೊರಾಂಡಂ ಕಳುಹಿಸಿದ್ದಾರೆ. ಅದರಲ್ಲಿ ಅವರೇನು ತಿಳಿಸಿದ್ದಾರೆಂದರೆ—ತುಮಕೂರು ಜಿಲ್ಲೆಯ ಸಿರಾ ತಾಲ್ಲೂಕಿನಲ್ಲಿ ಇಲ್ಲಿಯವರೆಗೆ ಎರಡು ಇಂಚಿಗಿಂತ ಹೆಚ್ಚಿಗೆ ಮಳೆ ಬಿದ್ದಿಲ್ಲ, ಮಾರ್ಚಿಯಿಂದ ಇಲ್ಲಿಯವರೆಗೂ ಬಂದಿರತಕ್ಕ ಮಳೆಯೇ ಇಷ್ಟು. ಅಲ್ಲಿ ದನಕರುಗಳಿಗೆ ಕುಡಿಯುವುದಕ್ಕೆ ನೀರಿಲ್ಲ, ಜನರಿಗೆ ಕಾಳಿಲ್ಲ ಎಂದು ತಿಳಿಸಿದ್ದಾರೆ. ಅಲ್ಲಿ ದನಗಳಿಗೆ ತಿನ್ನಲು ಆಲದಮರದ ಎಲೆ ಸಹಿತ ಇಲ್ಲ ಎಂದು ಹೇಳಿದ್ದಾರೆ. ಈ ವಿಷಯವನ್ನು ವಿಧಾನ ಸಭೆಯಲ್ಲಿರತಕ್ಕ ಎಲ್ಲ ಮಾನ್ಯ ಸದಸ್ಯರುಗಳೂ ಮತ್ತು ಮಂತ್ರಿಗಳೂ ಮನಗಾಣಬೇಕೆಂದು ಈ ಅರ್ಜಿಯನ್ನು ಬೆಂಗಳೂರು ವಿಧಾನಸಭೆಗೆ—ಎಂದು ಅಡ್ರೆಸ್ ಮಾಡಿದ್ದಾರೆ. ಆ ಅರ್ಜಿಯಲ್ಲಿರತಕ್ಕ ಎಲ್ಲ ಅಹವಾಲುಗಳನ್ನೂ ಮಾನ್ಯ ಮಂತ್ರಿಗಳ ಗಮನಕ್ಕೆ ತರಬೇಕೆಂದು ಅವರು ಅದರಲ್ಲಿ ಪ್ರಾರ್ಥನೆ ಮಾಡಿಕೊಂಡಿದ್ದಾರೆ. ಆದರೆ ತುಮಕೂರು ಜಿಲ್ಲೆಯಲ್ಲಿ ಮಳೆಬೆಳೆಗಳೆಲ್ಲ ಸರಿಯಾಗಿ ಆಗಿರುತ್ತವೆಂದು ಸರ್ಕಾರದವರಿಗೆ ಯಾವ ಆಧಾರಗಳು ಅಂಕಿ ಅಂಶಗಳು ಹೇಗೆ ಅವರಿಗೆ ದೊರೆತವೋ ಅದು ನನಗೆ ತಿಳಿಯದಾಗಿದೆ. ತುಮಕೂರು ಜಿಲ್ಲೆಯಲ್ಲಿ ಇಲ್ಲಿಯವರೆಗೂ ಎರಡು ಇಂಚಿಗಿಂತ ಹೆಚ್ಚಿಗೆ ಮಳೆಯಾಗಿಲ್ಲ. ಈ ದಿವನ ಅಲ್ಲಿ ಬಿತ್ತದ ಹುಲ್ಲು ಹೊರೆಯೊಂದಕ್ಕೆ ಎರಡೂವರೆ ರೂಪಾಯಿ ಆಗಿದೆ. ಆದರೂ ಅದು ಸಿಕ್ಕುತ್ತಿಲ್ಲ. ಆದರೆ ಇದೇ ಪರಿಸ್ಥಿತಿ ಇನ್ನೂ ಹೀಗೇ 15-20 ದಿವನ ನಡೆದರೆ ಈ ಹಿಂದೆ 1945ರಲ್ಲಿ ಜನರು ಹೇಗೆ ಗೆಡ್ಡೆ ಗೆಣಸುಗಳನ್ನು, ನೀರನ್ನು, ಮತ್ತು ಸ್ಯಾಂಡರ್ಡ್ ಬಟ್ಟೆಯೆನ್ನೂ ಹಂಚಿಕೊಂಡು ಜೀವನ ಮಾಡಿದರೋ ಅದಕ್ಕಿಂತಲೂ ಹೆಚ್ಚಿಗೆ ಭಯಂಕರವಾದ ಭೀಕರ ಪರಿಸ್ಥಿತಿ ಈ ನಾರ್ತಿ ಅಲ್ಲಿ ತಲೆದೋರುವಂತೆ ಕಂಡು ಬರುತ್ತಿದೆ. ಆದರೆ ತುಮಕೂರು ಜಿಲ್ಲೆಯ ಕೆಲವು ಭಾಗಗಳಲ್ಲಿ ಅಂದರೆ ಬೆಂಗಳೂರು ಜಿಲ್ಲೆಯ ಗಡಿಯಲ್ಲಿರತಕ್ಕ ಭಾಗದಲ್ಲಿ ಕೆಲವು ಜಮೀನುಗಳ ಗೆಯಿಮೆ ಕೆಲಸವಾಗಿದೆ. ಇನ್ನು ಉಳಿದ ಕಡೆ ಗಳಲ್ಲೆಲ್ಲಾ ಜಮೀನಿಗೆ ರೈತರು ಗೊಬ್ಬರವನ್ನೂ ಕೂಡ ಚೆಲ್ಲಿಲ್ಲ. ಇಂಥಾ ಒಂದು ಭೀಕರ ಪರಿಸ್ಥಿತಿ ಇಂದು ನಮ್ಮ ರಾಜ್ಯದಲ್ಲಿ ಉಂಟಾಗಿದೆ. ಅಲ್ಲಿಯ ಸ್ಥಳ ವಿದ್ಯಮಾನಗಳನ್ನು ಅರಿಯದೆ ನಮ್ಮ ಜಿಲ್ಲೆಯ ಡಿ.ಸಿ. ಅವರು ಅಲ್ಲಿ ಪರಿಸ್ಥಿತಿಯಲ್ಲಾ ಚೆನ್ನಾಗಿದೆಯೆಂದು ಅವರು ಹೇಗೆ ತಿಳಿಸಿದರೋ ನನಗದು ತಿಳಿಯದಾಗಿದೆ. ಆ ಅಧಿಕಾರಿಗಳು ಕಳೆದ ತಿಂಗಳು 28 ಅಥವಾ 29ನೇ ತಾರಿಖಿನ ದಿನ ನಮ್ಮ ತಾಲ್ಲೂಕಿಗೆ ಆರೂವರೆ ಗಂಟೆಗೆ ಅಲ್ಲಿಗೆ ಬಂದರು. ಬಂದವರು ಅಲ್ಲಿಂದ 10 ಮೈಲುಗಳನ್ನು

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಪಶ್ಚಿಮಕ್ಕೂ, 10 ಮೈಲಿಗಳನ್ನು ಪೂರ್ವಕ್ಕೂ ಮತ್ತು 10 ಮೈಲಿಗಳನ್ನು ಉತ್ತರಕ್ಕೂ, 10 ಮೈಲಿಗಳನ್ನು ದಕ್ಷಿಣಕ್ಕೂ ಹೋಗಿ ಆ ಇಡೀ ಜಿಲ್ಲೆಯಲ್ಲಿ ಪರಿಸ್ಥಿತಿಯೆಲ್ಲಾ ಚೆನ್ನಾಗಿದೆಯೆಂದು ತಿಳಿಸಿದ್ದಾರೆ. ಅವರಿಗೆ ಜಿಲ್ಲೆಯಲ್ಲಿ ಹಳ್ಳಿಗಳು ಎಲ್ಲಿಯವರೆಗೆ ಇರುತ್ತವೆಂಬ ಅಂಶವೇ ಗೊತ್ತಿಲ್ಲ. ಹಾಗಿರುವಾಗ ಅವರಿಗೆ ಧಾರಣಪರಿಸ್ಥಿತಿ ಎಲ್ಲೆಲ್ಲಿದೆ ಎಂಬುದು ಹೇಗೆ ಗೊತ್ತಾಗಬೇಕು? ಮೇಲಾಗಿ ಅವರಿಗೆ ಜೀಪಿನಲ್ಲಿ ಪ್ರವಾಸಮಾಡತಕ್ಕ ಅಭ್ಯಾಸ ಬೇರೆ ಇಲ್ಲ. ಇದರಿಂದಲೇ ಅವರು ಅಲ್ಲಿಯ ಪರಿಸ್ಥಿತಿಯೆಲ್ಲಾ ಸರಿಯಾಗಿದೆ ಎಂದು ಹೇಳಿದಾರೆ. ಆದರೆ ನಮ್ಮ ಜಿಲ್ಲೆಯ ವಿಚಾರದಲ್ಲಿ ಮಾನ್ಯ ರೆವಿನ್ಯೂ ಸಚಿವರು ನಮ್ಮ ಜಿಲ್ಲೆಯಲ್ಲೆಲ್ಲಾ ಪೂರ್ಣವಾಗಿ ಸಂಚಾರ ಮಾಡಿ ಅಲ್ಲಿಯ ಜನರ ಸ್ಥಿತಿಗತಿಗಳನ್ನು ನೋಡಿಕೊಂಡು ಅಲ್ಲಿಗೆ ತಕ್ಕ ಪರಿಹಾರೋಪಾಯಗಳನ್ನು ಒದಗಿಸುವುದಾಗಿ ಹೇಳಿದ್ದರು. ಆದರೆ ರೆವಿನ್ಯೂ ಮಂತ್ರಿಗಳು ತಮ್ಮ ಉತ್ತರ ಕರ್ನಾಟಕದ ಪ್ರವಾಸವನ್ನು ಮುಗಿಸಿಕೊಂಡು ಹರಿಹರಕ್ಕೆ ಬರುವುದರೊಳಗಾಗಿಯೇ ಮಾನ್ಯ ಮುಖ್ಯ ಮಂತ್ರಿಗಳು ಅವರಿಗೆ ಅರ್ಜೆಂಟಾಗಿ ಅವರು ಯಾರನ್ನೋ ಬೆಂಗಳೂರಿನಲ್ಲಿ ಮೀಟ್ ಮಾಡಬೇಕಾಗಿದೆ ಎಂದು ತಿಳಿದ್ದರಿಂದ ಅವರು ನಮ್ಮ ಜಿಲ್ಲೆಗೆ ಬರಲಾಗಲಿಲ್ಲ. ನಮ್ಮ ತಾಲ್ಲೂಕನ್ನು ಅವರು ಪರಿಶೀಲನೆಮಾಡಲು ಅವಕಾಶವಾಗಲಿಲ್ಲ. ನಾನು ನಮ್ಮ ತಾಲ್ಲೂಕಿನ ವಿಚಾರದಲ್ಲಿ ಹೇಳುತ್ತಿರುವ ವಿಷಯಗಳು ಸತ್ಯಕ್ಕೆ ಹೊಂದಿರತಕ್ಕವುಗಳೇ ಅಥವಾ ಅಲ್ಲವೇ ಎಂಬುದನ್ನು ಈ ಮಾನ್ಯ ಸಭೆಯ ಸದಸ್ಯರು ಯಾರು ಬೇಕಾದರೂ ಹೋಗಿ ಅಲ್ಲಿಯ ಪರಿಸ್ಥಿತಿಯನ್ನು ಕಣ್ಣಾರೆ ನೋಡಿಕೊಂಡು ಬರಲಿ. ನಾನು ಹೇಳತಕ್ಕದ್ದು ಸತ್ಯಕ್ಕೆ ದೂರವಾಗಿದ್ದರೆ ಅವರೇನೂ ಅಲ್ಲಿಗೆ ಉಪಕಾರಮಾಡುವುದು ಬೇಡ. ಆದರೆ ನಾನು ಹೇಳತಕ್ಕದ್ದೆಲ್ಲಾ ಸತ್ಯವಾಗಿದ್ದರೆ ಸರ್ಕಾರದವರು ಅಲ್ಲಿಗೆ ಅನುಕೂಲ ಮಾಡಲಿ. ಈ ಹಿಂದೆ ಅಲ್ಲಿಗೆ ಪೌರನಭಾಸಚಿವರು ದಯಮಾಡಿಸಿದ್ದಾಗ್ಗೆ ಅಲ್ಲಿಯ ಜನರು ಅಲ್ಲಿ ಕುಡಿಯುವುದಕ್ಕೆ ನೀರಿಲ್ಲವೆಂಬ ಅಂಶವನ್ನು ಅವರಿಗೆ—ಆ ಪಾವಗಡ, ಮಧುಗಿರಿ ಮತ್ತು ಸಿರಾ ತಾಲ್ಲೂಕಿನ ಜನರು ಕಣ್ಣಾರೆ ತೋರಿಸಿದ್ದಾರೆ. ಈ ಮೂರು ತಾಲ್ಲೂಕುಗಳೂ ರಾಯರ್ ಸೀಮಾ ಚಾರ್ಡ್‌ರಲ್ಲಿರುತ್ತವೆ. ಈ ಮೂರು ತಾಲ್ಲೂಕುಗಳಲ್ಲಿ ಯಾವ ವರ್ಷವೇ ಆಗಲೀ 15 ರಿಂದ 18 ಇಂಚಿಗಿಂತ ಜಾಸ್ತಿ ಮಳೆ ಬಂದಿಲ್ಲ. ಇತ್ತೀಚೆಗೆ ಈ ಅರಣ್ಯಗಳು ನಾಶವಾದಮೇಲಂತೂ ಅಲ್ಲಿ ವರ್ಷ 10 ಇಂಚಿಗಿಂತ ಜಾಸ್ತಿ ಮಳೆ ಎಂದೂ ಬಂದಿಲ್ಲ. ಅಂಥಾ ಪ್ರದೇಶದಲ್ಲಿರತಕ್ಕ ಜನರು ಜೀವನ ಹೇಗೆ ಮಾಡಬೇಕು? ಈ ಹಿಂದೆ 1945ರಲ್ಲಿ ಇಲ್ಲಿ ಶ್ರೀಮಾನ್ ಎಸ್. ಮಾಧುವರಾಯರು ದಿವಾನರಾಗಿದ್ದಾಗ ಶ್ರೀ ಎಂ. ವಿ. ಕೃಷ್ಣಪ್ಪನವರೂ ಮತ್ತು ಶ್ರೀ ಎಲ್. ಎಸ್. ವೆಂಕಾಜಿರಾಯರೂ ಕ್ಷಾಮ ಪರಿಹಾರ ಕಾರ್ಯದಲ್ಲಿ ತೊಡಗಿದ್ದಾಗ ಇವರು ಕೋರಾರ ಜಿಲ್ಲೆಯಲ್ಲಿ ಮತ್ತು ಚಿತ್ರದುರ್ಗ ಜಿಲ್ಲೆಯಲ್ಲಿ ಸಾವಿರಾರು ಗಂಜೀ ಕೇಂದ್ರಗಳನ್ನು ತೆರೆದು ಅವುಗಳನ್ನು ನಡೆಸುತ್ತಿದ್ದರು. ಆಗ ಶ್ರೀ ಎಂ. ವಿ. ಕೃಷ್ಣಪ್ಪನವರು ಕಾಂಗ್ರೆಸ್ ಪಾರ್ಟಿಯ ವಿಪ್ ಆಗಿದ್ದರು. ಅಂಥವರೇ ಇಂದು ಆಹಾರ ಸಚಿವರಾಗಿದ್ದಾರೆ. ಇವರಿಗೆ ಪರಿಸ್ಥಿತಿ ಚೆನ್ನಾಗಿ ಗೊತ್ತಿದೆ. ಇಂಥವರ ಅಡಳಿತದಲ್ಲೇ ಹೀಗೆ ಸತ್ಯಕ್ಕೆ ದೂರವಾದ ಒಂದು ಹೇಳಿಕೆ ಸರ್ಕಾರೀ ಅಧಿಕಾರಿಗಳಿಂದ ಹೊರಟಿರುವುದು ತುಂಬಾ ಶೋಚನೀಯ. ಆದರೆ ಈ ಹಿಂದೆ ಮಾತನಾಡಿದ ಶ್ರೀ ಕಡಿದಾಳ್ ಮಂಜಪ್ಪನವರು ಹೇಳಿದ ಹಾಗೆ ಇಲ್ಲಿರತಕ್ಕ ಸರ್ಕಾರಿ ಅಧಿಕಾರಿಗಳಿಗೆ ಜನರಮೇಲೆ ಪ್ರೇಮವಾಗಲೀ, ಪ್ರೀತಿ ವಿಶ್ವಾಸಗಳಾಗಲೀ ಇರುವುದಿಲ್ಲ. ಇಂಥ ಭಾವನೆಗಳನ್ನು ಬೆಳಸಿಕೊಂಡಿರತಕ್ಕ ಅಧಿಕಾರಿಗಳು ಇಲ್ಲಿದ್ದಾರೆ. ಈ ದಿವಸ ನಮ್ಮ ಜಿಲ್ಲೆಗೆ ಬಂದಿರತಕ್ಕ ಜಿಲ್ಲಾಧಿಕಾರಿಗಳು ಅಲ್ಲಿಗೆ ಬಂದು ಎರಡು ವರ್ಷ ಮೂರು ತಿಂಗಳಾಯಿತು. ಅಲ್ಲಿಯ ನಮ್ಮ ಜಿಲ್ಲಾಧಿಕಾರಿಗಳು ಇಂಗ್ಲೀಷಿನಲ್ಲಿ ಅರ್ಜಿಯನ್ನು ಕೊಟ್ಟರೆ ಮಾತ್ರ ಅವರು ನೋಡುತ್ತಾರೆ. ಇಲ್ಲದಿದ್ದರೆ ಇಲ್ಲ. ಏಕೆಂದರೆ ಅವರಿಗೆ ಕನ್ನಡ ತಿಳಿಯುವುದಿಲ್ಲ. ಯಾರು ಎಂದೂ ಕನ್ನಡವನ್ನೇ ಅರಿಯದಂತಿದ್ದರೋ ಅಂಥವರೊಬ್ಬರು ಇಲ್ಲಿಗೆ ಚೀಫ್ ಸೆಕ್ರೆಟರಿಗಳಾಗಿ ಬಂದಮೇಲೆ ಅವರೀಗ ಕನ್ನಡವನ್ನು ಕಲಿತಿದ್ದಾರೆ. ಆದರೆ ನಮ್ಮ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಇನ್ನೂ ಕನ್ನಡ ಬರುತ್ತಿಲ್ಲ. ಆದರೂ ಅಂಥವರೇ ಇಡೀ ಜಿಲ್ಲೆಯ ಆಡಳಿತವನ್ನು ನಡೆಸುತ್ತಿದ್ದಾರೆ. ಈ ವಿಚಾರಕ್ಕೆ ಕೂಡಲೇ ಸರ್ಕಾರದವರು ಗಮನಕೊಡಬೇಕು. ಆದರೆ ಈ ಗಂಜೀ ಕೇಂದ್ರಗಳನ್ನು ತೆರೆಯತಕ್ಕ ವಿಚಾರದಲ್ಲಿ ಈ ಮಾನ್ಯ ಸಭೆಯ ಸದಸ್ಯರೂ ಮತ್ತು ಸರ್ಕಾರಿ ಅಧಿಕಾರಿಗಳೂ ಹೇಳತಕ್ಕದ್ದನ್ನು ಸರ್ಕಾರದವರು ಕೇಳಿ ಆನಂತರ ಅವರು ಒಂದು ಅಂತಿಮ ತೀರ್ಮಾನಕ್ಕೆ ಬರಬೇಕೆಂದು ಹೇಳುತ್ತೇನೆ.

ಈ ಹಿಂದೆ ಒಂದಾವರ್ತಿ ನಮ್ಮ ತಾಲ್ಲೂಕಿನಲ್ಲೂ ಮತ್ತು ಚಿತ್ರದುರ್ಗ ಜಿಲ್ಲೆಯಲ್ಲೂ ಜನ ಮತ್ತು ಧನಗಳು ಹೊಟ್ಟೆಗಿಲ್ಲದೆ ಸಾಯುತ್ತಿದ್ದಂಥ ಕಾಲದಲ್ಲಿ ಅಮೇರಿಕಾ ದೇಶದ ವರಲ್ಡ್ ಲೈಫ್ ಮ್ಯಾಗ್ಜೈನಿನವರು ಸುಮಾರು 450 ಫೋಟೋಗಳನ್ನು, ಆಗ ಅಲ್ಲಿಯ ಜನರು ಹೇಗೆ ಕ್ಯೂನಲ್ಲಿ ಅರಬಟ್ಟೆಯಲ್ಲಿ ನಿಂತು ಆಹಾರವನ್ನು ತೆಗೆದುಕೊಂಡು ಹೋಗುತ್ತಿದ್ದರೆಂಬುದನ್ನು ಅವರು ತೆಗೆದು

ಕೊಂಡು ಆ ಫೋಟೋಗಳನ್ನು, ಆಗ ಇಲ್ಲಿ ದಿವಾನರಾಗಿದ್ದ ಶ್ರೀಮಾನ್ ಮಾಧವರಾಯರಲ್ಲಿ ಕೊಟ್ಟಿದ್ದರು. ಅವು ಬಹುಶಃ ಈಗಲೂ ಇಲ್ಲಿಯ ಸರ್ಕಾರದಲ್ಲಿ ರೆಕಾರ್ಡಿನಲ್ಲಿರಬಹುದು. ಆಗ ನಡೆದಂಥ ಒಂದು ವಿಚಾರವನ್ನು ಈಗ ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ನಮ್ಮ ತಾಲ್ಲೂಕಿನಲ್ಲಿ ಇಂದು ಇರತಕ್ಕ ಪರಿಸ್ಥಿತಿ ಹೀಗೆಯೇ ಇನ್ನು 15 ದಿನಗಳು ಮುಂದುವರಿದಲ್ಲಿ ಈ ಭೀಕರ ಪರಿಸ್ಥಿತಿ ಹಿಂದಿನದಕ್ಕಿಂತಲೂ ಉಗ್ರವಾಗಿರುತ್ತದೆಂದು ನಾನು ಸರ್ಕಾರಕ್ಕೆ ತಿಳಿಸಲಿಚ್ಛಿಸುತ್ತೇನೆ. ಇಂಥಾ ಒಂದು ಘೋರ ಪರಿಸ್ಥಿತಿ ಈ ದಿನ ನಮ್ಮ ಸಿರಾ, ಪಾವಗಡ ಮತ್ತು ಮಧುಗಿರಿಯ ತಾಲ್ಲೂಕಿಗೆ ಉಂಟಾಗಿದೆ. ಸರ್ಕಾರದವರು ಹೇಳಿರಿನಲ್ಲಿರತಕ್ಕ ಅಭಿಪ್ರಾಯವನ್ನು ಗಮನಕ್ಕೆ ತೆಗೆದು ಕೊಂಡರೆ ಅಲ್ಲಿ ಅತಿ ಉಗ್ರವಾದ ಹಾಗೂ ಭಯಂಕರವಾದ ಕ್ರೌರ್ಯದೃಶ್ಯಗಳನ್ನು ನೋಡಬೇಕಾಗಿ ಬರುತ್ತೆ, ಅದನ್ನು ನಾನೀಗಲೇ ಸರ್ಕಾರಕ್ಕೆ ಮುನ್ಸೆಚ್ಚರಿಕೆಯನ್ನು ಕೊಡುತ್ತಿದ್ದೇನೆ.

ಇನ್ನು ನಮ್ಮ ಸರ್ಕಾರ ಇಲ್ಲಿಯವರೆಗೆ ಮೂರು ಯೋಜನೆಗಳನ್ನು ಕೈಗೊಂಡಿದ್ದಾಯಿತು. ಆದರೆ ಪರಿಣಾಮವೇನೆಂಬುದು ಗೊತ್ತಾಗುವುದಿಲ್ಲ. ಏನು ಇಲ್ಲಿಯವರೆಗೂ ಇವರು ಸಾಧನೆ ಮಾಡಿದ್ದಾರೆಂಬುದು ತಿಳಿಯದಂತಾಗಿದೆ. ಇಷ್ಟು ಕೋಟ್ಯಾನುಗಟ್ಟಲೆ ಹಣ ಖರ್ಚಾಗಿದ್ದರೂ ಧಾನ್ಯವನ್ನು ತ್ಪಾದನೆ ಮಾಡತಕ್ಕ ಕಾರ್ಯದಲ್ಲಿ ಸರ್ಕಾರದವರು ಸಂಪೂರ್ಣವಾಗಿ ವಿಫಲರಾಗಿದ್ದರೆಂದು ಹೇಳದೆ ವಿಧಿಯಿಲ್ಲ. ಈ ವಿಚಾರ ಎತ್ತಿದರೆ ಸರ್ಕಾರದವರು ಕಿವುಡರಾಗುತ್ತಾರೆ ಮೂಗರಾಗುತ್ತಾರೆ. ಶ್ರೀಮಾನ್ ವೀರೇಂದ್ರ ಪಾಟೀಲರು ಹಣವಿಲ್ಲದೆ ನಾವೇನು ಮಾಡೋಣ ಎಂದು ಹೇಳುತ್ತಿದ್ದಾರೆ. ಆದರೆ ಈ ದಿವಸದ ಪರಿಸ್ಥಿತಿ ಹಾಗಿಲ್ಲ. ದೇಶದಲ್ಲಿ ನಾನಾ ಭಾಗಗಳಲ್ಲಿ ಜನರಿಗೆ ತಿನ್ನಲು ಅನ್ನವಿಲ್ಲ. ದನಗಳಿಗೆ ಮೇವಿಲ್ಲ. ನಮ್ಮ ಹೋಬಳಿಯಲ್ಲಿಂತೂ ಈ ಕಷ್ಟವನ್ನು ಮೂರು ಹೋಬಳಿಗಳಲ್ಲಿ ಹೇಳತೀರದಾಗಿದೆ. ಸಿರಾಕ್ಕೆ ಒಂದು ಮೈಲಿ ದೂರದಲ್ಲಿ ನಾಲ್ಕು-ಐದು ತೋಟಗಳಿವೆ. ಅದನ್ನು ನೋಡಿ ಆ ತಾಲ್ಲೂಕ್ ಬಹಳ ಸಮೃದ್ಧಿಯಾದ್ದು ಎಂದು ಲೆಕ್ಕ ಹಾಕಿದ್ದಾರೆ. ಇದು ಖಂಡಿತ ಸರಿಯಲ್ಲ. ಇದನ್ನು ಸರ್ಕಾರದವರು ಮತ್ತೊಮ್ಮೆ ಸರಿಯಾಗಿ ಪರಿಶೀಲನೆ ಮಾಡಬೇಕು.

ಇವೊತ್ತಿನ ದಿವಸ ತಾವು ಯೋಚನೆ ಮಾಡಬೇಕು. 1916ನೇ ಇಸವಿಯಿಂದ 1964ನೇ ಇಸವಿಯವರೆಗೆ 18 ವರ್ಷಗಳ ಕಾಲದಲ್ಲಿ ನಮ್ಮ ತಾಲ್ಲೂಕಿನಲ್ಲಿ ಮಳೆ ಬಿದ್ದಿರುವುದನ್ನು ತೆಗೆದು ನೋಡಿದರೆ ಸರಾಸರಿ ವರ್ಷಕ್ಕೆ 9 ಇಂಚು ಮಳೆಯಾಗಿದೆ. ಅಲ್ಲಿ ಸುಮಾರು ಒಂದು ಲಕ್ಷ ಎಕರೆ ಫಾರೆನ್ಸ್‌ನ್ನು ಕಡಿದು ಹಾಕಿದ್ದಾರೆ. ಇವೊತ್ತೂ ಕೂಡ ನಮ್ಮ ತಾಲ್ಲೂಕಿನ ಫಾರೆಸ್ಟಿನಿಂದ ಬೆಂಗಳೂರಿಗೆ ಇದ್ದಿಲು ಬರುತ್ತದೆ. ಹೀಗಾದರೆ ಮಳೆ ಹೇಗೆ ಬರುತ್ತದೆ ಎಂಬುದನ್ನು ಯೋಚನೆ ಮಾಡಬೇಕು. ಅದಕ್ಕೋಸ್ಕರವಾಗಿ ನಮ್ಮ ತಾಲ್ಲೂಕನ್ನು ನಮ್ಮ ಜಿಲ್ಲೆಯನ್ನು ಅಭಾವ ಪೀಡಿತ ಪ್ರದೇಶಗಳ ಪಟ್ಟಿಯಿಂದ ತೆಗೆದುಹಾಕಬಾರದು ಎಂದು ನಾನು ಕೇಳಿಕೊಳ್ಳುತ್ತೇನೆ. ಈ ಬಾಗಾಲ ಪೀಡಿತ ಪ್ರದೇಶದಲ್ಲಿ ಯಾವುದೋ ಒಂದು ಪರಿಹಾರ ಕಾರ್ಯಕ್ರಮವನ್ನು ತೆಗೆದುಕೊಂಡು ಒಂದು ರಸ್ತೆಯನ್ನು ಮಾಡಿಸಿದರೆ ನಾನು ಅದನ್ನ ಒಪ್ಪುವುದಿಲ್ಲ. ಶ್ರೀಮಾನ್ ಕಡಿದಾಳ್ ಮಂಜಪ್ಪನವರು ಹೇಳಿದರು ಈ ಅಭಾವ ಪರಿಸ್ಥಿತಿಯ ಬಗ್ಗೆ ಒಂದು ಪರ್ಮನೆಂಟ್ ಪೆಜರ್ಸ್ ತೆಗೆದುಕೊಳ್ಳಬೇಕೆಂದು. ಯಾವುದೋ ರಸ್ತೆಯನ್ನ ಮಾಡಿಸಿದರೆ ಅದರಮೇಲೆ ಮಳೆ ಬಂದರೆ 15 ದಿವಸಗಳಲ್ಲಿ ಅದರ ಹೆಸರು ಕುಲ ಏನೂ ಇರುವುದಿಲ್ಲ. ಅಂಥಾ ಕೆಲಸವನ್ನು ಮಾಡುವುದಕ್ಕಿಂತ ಜನಗಳಿಗೆ ಹಣವನ್ನು ದಾನವಾಗಿ ಕೊಟ್ಟುಬಿಡಿ. ತಾವು ಖರ್ಚು ಮಾಡತಕ್ಕ ಹಣ ಜನತೆಗೆ ಸರಿಯಾಗಿ ಉಪಯೋಗವಾಗಬೇಕು. ಶಾಶ್ವತವಾದ ಒಂದು ಕೆಲಸವನ್ನು ಮಾಡಬೇಕು ಎಂದು ನಾನು ಹೇಳುತ್ತೇನೆ. ಈ ರಸ್ತೆಗಳನ್ನು ಮಾಡುವ ವಿಷಯದಲ್ಲಿ ನಾನು ಬಹಳ ವಿರೋಧ ಇದ್ದೇನೆ. ಮೈನರ್ ಇರಿಗೇಷನ್ ಸಂಬಂಧದಲ್ಲಿ ನನ್ನ ಒಂದು ತಾಲ್ಲೂಕಿಗೆ ಸಂಬಂಧಪಟ್ಟ ಹಾಗೆ 45 ಎಸ್ಟಿಮೇಟನ್ನು ತಯಾರು ಮಾಡಿದ್ದಾರೆ. ಆದರೆ ಅವುಗಳಿಗೆ ಸರ್ಕಾರದವರು ಇನ್ನೂ ಮಂಜೂರಾತಿಯನ್ನು ಕೊಟ್ಟಿಲ್ಲ. ಅವುಗಳನ್ನು ಮಂಜೂರು ಮಾಡುವುದಕ್ಕೆ ಸರ್ಕಾರದವರು ಹಿಂದೂ ಮುಂದೂ ನೋಡುತ್ತಿದ್ದಾರೆ. ನಮ್ಮ ತಾಲ್ಲೂಕಿನಲ್ಲಿ ಯಾವ ದೊಡ್ಡ ನದಿಯೂ ಹರಿಯುತ್ತಿಲ್ಲ. ಯಾವ ನಮೋವರವೂ ಇಲ್ಲ. ಈ ವಿಷಯವನ್ನು ನಾನು ಸರ್ಕಾರದವರ ಗಮನಕ್ಕೆ ಸಾರಿ ಸಾರಿ ತಂದಿದ್ದೇನೆ. ನಮ್ಮ ತಾಲ್ಲೂಕಿಗೆ ಮೈನರ್ ಇರಿಗೇಷನ್ ಬಿಟ್ಟರೆ ಇನ್ನೂ ಯಾವುದರಿಂದಲೂ ಸರ್ಕಾರದವರು ನಮ್ಮ ತಾಲ್ಲೂಕಿಗೆ ಸಹಾಯ ಮಾಡುವುದಕ್ಕೆ ಸಾಧ್ಯವಿಲ್ಲ. ಅದಕ್ಕೋಸ್ಕರ ನಾನು ಹೇಳುತ್ತೇನೆ. ಈಗ ಎಸ್ಟಿಮೇಟ್ ತಯಾರು ಮಾಡಿರತಕ್ಕ 40-45 ಕೆಲಸಗಳೇನಿವೆ ಅವುಗಳನ್ನು ತಕ್ಷಣ ಕಾರ್ಯಗತ ಮಾಡುವುದಾದರೆ ಇವೊತ್ತಿನ ದಿವಸ ನಮ್ಮ ತಾಲ್ಲೂಕಿನಲ್ಲಿ 7-8 ಸಾವಿರ ಜನಗಳಿಗೆ ಕೆಲಸವನ್ನು ಒದಗಿಸುವುದಕ್ಕೆ ಸಾಧ್ಯವಾಗುತ್ತದೆ. ಇವೊತ್ತು ಆಹಾರವನ್ನು ಕೊಂಡುಕೊಳ್ಳುವಂತಹ ಶಕ್ತಿ ಜನಗಳಿಗೆ ಇಲ್ಲ. ಅವರು ಆಹಾರವನ್ನು ಕೊಂಡುಕೊಳ್ಳಲು ಹಣವನ್ನು ಸಂಪಾದನೆ ಮಾಡಬೇಕಾದರೆ ಅವರಿಗೆ ಒಂದು ಕೆಲಸವನ್ನು ತೋರಿಸಬೇಕು. ಅದಕ್ಕೋಸ್ಕರ ಮೈನರ್ ಇರಿಗೇಷನ್ ಕೆಲಸವನ್ನು ಪ್ರಾರಂಭ ಮಾಡಬೇಕು. ಇಲ್ಲದೆ ಹೋದರೆ ಜನಗಳಿಗೆ ರಿಲೀಫ್ ಕೊಡುವುದಕ್ಕೆ ಸಾಧ್ಯವಿಲ್ಲ. ತಕಾವಿ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಸಾಲವನ್ನು ಕೊಡಿ ಎತ್ತು ಕೊಂಡುಕೊಳ್ಳುತ್ತೇವೆಂದು ಹೇಳಿದರೆ ಅದು ಮೋಸ ಆಗುತ್ತದೆ. ಮಳೆ ಇಲ್ಲ. ನೇಗಿಲನ್ನು ಈಚೆಗೆ ತೆಗೆಯುವುದಿಲ್ಲ. ಮಳೆ ಇಲ್ಲದೆ ಇರುವಾಗ ಎತ್ತನ್ನು ಕೊಂಡುಕೊಂಡು ಯಾವ ಹೊಲವನ್ನು ಗೆಯ್ಯಬೇಕು ? ಅದಕ್ಕೋಸ್ಕರ ರೈತರಿಗೆ ತಕಾವಿ ಸಾಲವನ್ನು ಕೊಡಬಾರದು. ಬೇರೆ ಯಾವುದಾದರೂ ಒಂದು ಸಾಲವನ್ನು ಕೊಡಿ. ತಕಾವಿ ಸಾಲವನ್ನು ಕೊಡುವುದರಲ್ಲಿ ಅರ್ಥವಿಲ್ಲ. ಮಳೆ ಇಲ್ಲದೆ ಇರುವಾಗ ರೈತ ಎತ್ತುಗಳನ್ನು ಕೊಂಡುಕೊಳ್ಳುವುದಕ್ಕೆ ಎಂದು ತಕಾವಿ ಸಾಲವನ್ನು ತೆಗೆದುಕೊಂಡು ತನಗೆ ಬೇಕಾದ್ದಕ್ಕೆ ಉಪಯೋಗಿಸಿಕೊಂಡು ಜೀವನ ನಡೆಸುವುದಕ್ಕೆ ಪ್ರಯತ್ನ ಮಾಡುತ್ತಾನೆ. ನಣ್ಣ ನೀರಾವರಿ ಬಾವಿಗಳನ್ನು ತೆಗೆಯಿಸುವುದರ ಮೂಲಕ ಜನಗಳಿಗೆ ಕೂಲಯನ್ನು ಒದಗಿಸಿ. ಆದರೆ ಮಣ್ಣು ರಸ್ತೆಯನ್ನು ಮಾತ್ರ ಮಾಡಿಸಬೇಡಿ. ಬಾವಿಗಳನ್ನಾದರೂ ತೆಗೆಸುವುದಾದರೆ ಒಂದು ಆಸ್ತಿಯಾಗುತ್ತದೆ. ಅದು ಬಿಟ್ಟು ಮಣ್ಣು ರಸ್ತೆ ಮಾಡಿಸುವುದು ಇಂಥಾ ಬೇರೆ ಬೇರೆ ಕೆಲಸಗಳಿಗೆ ಕೇಳಿದ್ದಕ್ಕೆಲ್ಲಾ ಸರ್ಕಾರದವರು ಹಣವನ್ನು ಕೊಡುತ್ತಾ ಹೋದರೆ ನೋಟುಗಳನ್ನು ಪ್ರಿಂಟ್ ಮಾಡಿಸಬೇಕಾದ ಪ್ರಸಂಗ ಒದಗುತ್ತದೆ.

ಇನ್ನೂ ಶ್ರೀಮಾನ್ ಗೋಪಾಲ ಗೌಡರು ಹೇಳಿದ ಹಾಗೆ ಈ ಆಹಾರ ಧಾನ್ಯಗಳ ವ್ಯಾಪಾರವನ್ನು ವರ್ತಕರ ಕೈಯಲ್ಲಿ ಕೊಡಬೇಡಿ. ಹಿಂದೆ ವರ್ತಕರ ಕೈಯಲ್ಲಿ ಈ ಆಹಾರ ಧಾನ್ಯಗಳ ವ್ಯಾಪಾರವನ್ನು ಕೊಟ್ಟು ಏನಾಯಿತು ಎಂಬುದು ಗೊತ್ತಿದೆ. ಸಾವಿರಾರು ಮೂಟೆ ಆಹಾರ ಧಾನ್ಯಗಳು ಮೈನೂರು ಮತ್ತು ಮಹಾರಾಷ್ಟ್ರದ ಬಾರ್ಡರ್‌ನಲ್ಲಿ ಕೊಳೆತುಹೋಯಿತು. ಸರ್ಕಾರದವರೇ ಆಹಾರ ಧಾನ್ಯಗಳ ವ್ಯಾಪಾರವನ್ನು ವಹಿಸಿಕೊಂಡು ಮಾಡಿದರೆ, ಅದರಲ್ಲಿ ಯಾರೋ ಒಬ್ಬ ಗುಮಾಸ್ತ ಒಂದು ಮೂಟೆಯನ್ನೋ ಎರಡು ಮೂಟೆಯನ್ನೋ ಮಾರಿಕೊಂಡರೆ ಅದರಿಂದ ಏನೂ ಆಗುವುದಿಲ್ಲ. ಅದಕ್ಕೋಸ್ಕರ ಸರ್ಕಾರದವರು ಫೇರ್ ಪ್ರೈಜ್ ಡಿಪೋಗಳನ್ನು ತೆರೆದು ಅವುಗಳ ಮುಖಾಂತರ ಜನಗಳಿಗೆ ಆಹಾರ ಧಾನ್ಯವನ್ನು ಒದಗಿಸಬೇಕು. ಮತ್ತು ಪರಿಹಾರ ಕಾರ್ಯಕ್ರಮಗಳನ್ನ ತುಮಕೂರು ಜಿಲ್ಲೆಯಲ್ಲಿಯೂ ಪ್ರಾರಂಭ ಮಾಡಬೇಕು. ಈಗ ನಾನು ಹೇಳಿರತಕ್ಕ ಎಲ್ಲಾ ವಿಷಯಗಳನ್ನೂ ಗಮನದಲ್ಲಿಟ್ಟುಕೊಂಡು ಸರ್ಕಾರದವರು ಆ ಬಗ್ಗೆ ನೂಕ್ತ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ನಮ್ಮ ತಾಲ್ಲೂಕಿನಲ್ಲಿ ಅನೇಕ ಜನಗಳಿಂದ ಬಂದಿರತಕ್ಕ ಅರ್ಜಿಗಳಿಗೆ ಪಂಚಾಯಿತಿಯ ಅಧ್ಯಕ್ಷರು ರುಜುಮಾಡಿ ಒಂದು ಕಾಗದವನ್ನು ಬರೆದು ಅದನ್ನು ನನಗೆ ಕಳುಹಿಸಿ ಕೊಟ್ಟಿದ್ದಾರೆ. ಮಾನ್ಯ ಅಧ್ಯಕ್ಷರ ಅಪ್ಪಣೆಯನ್ನು ಪಡೆದು ಅದನ್ನು ಮಾನ್ಯ ರೆವಿನ್ಯೂ ಮಂತ್ರಿಗಳಿಗೆ ಕಳುಹಿಸುತ್ತೇನೆ. ಇಷ್ಟು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎ. ಜಿ. ಡೊಡ್ಡಮೇಟಿ (ರೋಣ್).—ಸ್ವಾಮಿ, ನಮ್ಮ ಸರ್ಕಾರದವರು ಬಹಳ ತ್ವರಿತವಾಗಿ ಕೇಂದ್ರದಿಂದ ಆಹಾರ ಧಾನ್ಯವನ್ನು ನಮ್ಮ ರಾಜ್ಯಕ್ಕೆ ತರುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಅದಕ್ಕಾಗಿ ನಾನು ಸರ್ಕಾರದವರನ್ನು ಅಭಿನಂದಿಸುತ್ತೇನೆ. ಆದರೆ ಇಷ್ಟರಿಂದಲೇ ನಮ್ಮ ಒಂದು ಕೆಲಸ ಪೂರ್ತಿ ಆಯಿತು ಎಂದು ನಮಗೆ ಕಾಣುವುದಿಲ್ಲ. ಹೆಚ್ಚಿನ ಆಹಾರ ಧಾನ್ಯಗಳ ಪೂರೈಕೆ ಆಗಬೇಕಾದರೆ ನಾನು ಕೆಲವೊಂದು ಸೂಚನೆಯನ್ನು ಮಾಡುತ್ತೇನೆ. ಸರ್ಕಾರದ ಗೋಡೌನಿನಲ್ಲಿ ಸೊಸೈಟಿಗಳಲ್ಲಿ ಮತ್ತು ವರ್ತಕರಲ್ಲಿ ಏನೊಂದು ಆಹಾರ ಧಾನ್ಯದ ಸಂಗ್ರಹ ಇದೆ ಎನ್ನುವಂತಹ ಒಂದು ಮಾಹಿತಿಯನ್ನು ಸರ್ಕಾರದವರು ಸಂಗ್ರಹ ಮಾಡಬೇಕು. ಮತ್ತು ಒಳಗಡೆ ಇರತಕ್ಕ ಆಹಾರ ಧಾನ್ಯವನ್ನು ಹೊರಗಡೆಗೆ ತೆಗೆದು ಅದನ್ನು ವಿತರಣೆ ಮಾಡುವುದಕ್ಕೆ ಏನು ಕ್ರಮವನ್ನು ಅನುಸರಿಸಬೇಕು ಎನ್ನುವುದನ್ನು ವಿಚಾರ ಮಾಡಬೇಕು. ಸಹಕಾರ ಸಂಘಗಳ ಗೋಡೌನ್, ವರ್ತಕರ ಗೋಡೌನ್, ಇವುಗಳಲ್ಲಿ ಆಹಾರ ಧಾನ್ಯ ಏನಿದೆಯೋ ಅದನ್ನು ಅದಷ್ಟು ಜಾಗ್ರತೆ ಹೊರಗಡೆ ತೆಗೆಯುವುದಕ್ಕೆ ಸರ್ಕಾರದವರು ಏರ್ಪಾಡು ಮಾಡಬೇಕು. ಈಗ ಆಹಾರ ಧಾನ್ಯಗಳ ಬೆಲೆ ಏರಿಕೆ ಏನಿದೆಯೋ ಅದನ್ನು ಇಳಿಸಿ ಒಂದು ಅವರೇಜ್ ರೇಟ್ ನಿಗದಿ ಮಾಡುವುದಕ್ಕೆ ಸರ್ಕಾರದವರು ಏನಾದರೂ ಯೋಚನೆ ಮಾಡಿದ್ದಾರೆಯೇ ಹೇಗೆ ಎಂಬುದನ್ನು ಹೇಳಬೇಕು. ಏತಕ್ಕೆಂದರೆ ಇದರಲ್ಲಿ ಎರಡು ಮಗ್ಗುಲೂ ಹರಿಯುತ್ತವೆ. ಆಹಾರ ಧಾನ್ಯಗಳ ಬೆಲೆಗಳನ್ನು ಇಳಿಸಿದರೆ ರೈತನಿಗೆ ತೊಂದರೆಯಾಗುತ್ತದೆ. ಇನ್ನೊಂದು ಕಡೆ ಆಹಾರ ಧಾನ್ಯಗಳ ಬೆಲೆಗಳನ್ನು ಏರಿದರೆ ಬಡಬಗ್ಗರಿಗೆ ತೊಂದರೆಯಾಗುತ್ತದೆ. ಇದರಲ್ಲಿ ಯಾರಿಗೂ ಉತ್ಸಾಹವಿಲ್ಲ. ರೈತನಿಗೆ ಆದಾಯ ಕಡಿಮೆಯಾಗಬಾರದು. ಉತ್ಪತ್ತಿ ಕಡಿಮೆಯಾಗಬಾರದು ಎಂದು ಎಷ್ಟೋ ಜನ ಮಾನ್ಯ ಸದಸ್ಯರು ಹೇಳಿದ್ದಾರೆ. ಆಹಾರ ಧಾನ್ಯಗಳ ಬೆಲೆ ಎಷ್ಟೇ ಏರಿದರೂ ಸಹ ಅದು ರೈತನಿಗೆ ಸಿಕ್ಕುವುದಿಲ್ಲ. ಒಂದು ವೇಳೆ ಅದು ಸಿಕ್ಕಿದರೂ ಕೂಡ ವ್ಯವಸಾಯ ಉದ್ಯೋಗ ಎನ್ನುವುದು ಲಾಭದಾಯಕವಾದ ಉದ್ಯೋಗವಾಗಿದೆಯೇ ಎಂಬುದನ್ನು ಸರ್ಕಾರದವರು ಸಂಪೂರ್ಣವಾಗಿ ವಿಚಾರ ಮಾಡಬೇಕು. ಈಗ ನಾವು ಅಭಾವ ದೃಷ್ಟಿಯಿಂದ ವಿಚಾರ ಮಾಡುವುದಾದರೆ ಯಾವ

ಯಾವ ಹಳ್ಳಿಯಲ್ಲಿ ಮಳೆ ಆಗಿದೆ, ಯಾವ ಯಾವ ಹಳ್ಳಿಯಲ್ಲಿ ಮಳೆ ಆಗಿಲ್ಲ ಎನ್ನುವುದನ್ನು ನೋಡುವುದಾದರೆ ಇದು ಬಹಳ ವಿಚಿತ್ರವಾದ ಮಾತಾಗುತ್ತದೆ. ಕೆಲವು ಕಡೆ ಮಳೆ ಆಗಿದೆ. ಕೆಲವು ಕಡೆ ಮಳೆ ಆಗಿಲ್ಲ. ರೋಣ ತಾಲ್ಲೂಕಿನಲ್ಲಿ ಪಶ್ಚಿಮ ಭಾಗದಲ್ಲಿ ವಿಶೇಷವಾಗಿ ಮಳೆ ಆಗಿದೆ ಎಂದು ವರದಿ ಬಂದಿದೆ. ಆದರೆ ದಕ್ಷಿಣ ಭಾಗದಲ್ಲಿ 10-18 ಹಳ್ಳಿಗಳಲ್ಲಿ ಪೂರ್ತಿ ಮಳೆ ಆಗಿಲ್ಲ. ಬತ್ತನೆ ಸಹ ಸರಿಯಾಗಿ ಆಗಿಲ್ಲ ಎಂದು ನನಗೆ ಕೆಲವಾರು ಕಾಗದಗಳು ಬಂದಿವೆ. ಈ ಮಾತನ್ನು ಸರಿಯಾಗಿ ವಿಚಾರ ಮಾಡಬೇಕು. ಸರ್ಕಾರಿ ಅಧಿಕಾರಿಗಳು ಏನು ಮಾಡುತ್ತಾರೆ ಎಂದರೆ ತಾಲ್ಲೂಕು ಕೇಂದ್ರಗಳಲ್ಲಿ ಮಳೆಯು ಬಿದ್ದಾಗ ಅದನ್ನು ಅಳೆಯತಕ್ಕಂಥ ಮಾಪಕಗಳನ್ನು ಇಟ್ಟಿರುತ್ತಾರೆ. ಅಲ್ಲಿ ಒಂದು ವೇಳೆ ಮಳೆ ಬಿದ್ದರೆ ಅದನ್ನು ನೋಡಿಕೊಂಡು ಇಡೀ ತಾಲ್ಲೂಕಿನಲ್ಲಯೇ ಮಳೆಯಾಗಿದೆ ಎಂದು ಇಡೀ ತಾಲ್ಲೂಕಿಗೇ ಅದನ್ನು ಅನ್ವಯಿಸುವುದು ಸರಿಯಲ್ಲ. ಈ ದೃಷ್ಟಿಯಿಂದ ಅಲ್ಲಿ ಏನು ನಿಜವಾದ ಪರಿಸ್ಥಿತಿಯಿದೆ ಎನ್ನುವ ವಿವರಗಳನ್ನು ತರಿಸಿಕೊಂಡು ಅದನ್ನು ಸರ್ಕಾರದವರು ಪರಿಶೀಲನೆ ಮಾಡಬೇಕು. ಈಗ ಬರಗಾಲ ಕಾಮಗಾರಿಗಳನ್ನು ತೆಗೆದುಕೊಳ್ಳುವಾಗ ಹೊಸ ಮಾರ್ಗಗಳನ್ನು ತೆಗೆದುಕೊಳ್ಳುವುದಕ್ಕಿಂತ ಹಳೆಯ ಮಾರ್ಗಗಳು ಎಂದರೆ ಪಬ್ಲಿಕ್ ವರ್ಕ್ಸ್ ರೋಡುಗಳು, ಮತ್ತು ತಾಲ್ಲೂಕು ಬೋರ್ಡ್ ರಸ್ತೆಗಳು ಏನಿವೆ ಅವುಗಳನ್ನು ಹೆಚ್ಚು ಸುಧಾರಣೆ ಮಾಡಬೇಕು. ಹೆಚ್ಚು ಅಗಲ ಮಾಡಿಸಬೇಕು. ಆ ರೀತಿ ಮಾಡುವುದಾದರೆ ಸರ್ಕಾರ ಪೆಚ್ಚು ಹಾಡಿದಂತಹ ಹಣ ಉಪಯೋಗ ಆದೀತು. ನನ್ನ ತಾಲ್ಲೂಕಿನ ಮಟ್ಟಿಗೆ ನಾನು ಹೇಳುವುದಾದರೆ, ಬರಗಾಲದಲ್ಲಿ ಮಾಡಿರತಕ್ಕಂಥ ಕೆಲವು ರೋಡುಗಳು ಏನಿದೆ ಅವುಗಳೆಲ್ಲವೂ ನಾಶವಾಗಿವೆ. ಅವುಗಳನ್ನು ಮೇಂಟೇನ್ ಮಾಡುವ ದೃಷ್ಟಿಯಿಂದ ವಿಸ್ತೀರ್ಣ ಮಾಡುವ ದೃಷ್ಟಿಯಿಂದ, ಸುಧಾರಣೆ ಮಾಡುವ ದೃಷ್ಟಿಯಿಂದ ಅವಶ್ಯಕವಾದ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು.

ಈ ವಿಷಯದಲ್ಲಿ ಸರ್ಕಾರಕ್ಕೆ ಒಂದು ತಿಳುವಳಿಕೆಯನ್ನು ಹೇಳುತ್ತೇನೆ. ಎಲ್ಲಾ ವಿಷಯಗಳನ್ನು ಹೇಳುವುದಕ್ಕೆ ಬಹಳ ವಿಳಂಬ ವಾಗುತ್ತದೆ.

ಇನ್ನು ಗಜೇಂದ್ರಘಡ ಭಾಗದೊಳಗೆ ಬಹಳ ಭೀಕರ ಪರಿಸ್ಥಿತಿ ಇದೆ. ಅದು 15 ಸಾವಿರ ಜನಸಂಖ್ಯೆ ಇರತಕ್ಕ ಊರು. ಕೇವಲ ನೇಕಾರರು ಅಲ್ಲ ಸಾವಿರಾರು ಜನ ಕೂಡಿಕೊಂಡು ಪೋಲೀಸ್ ಕಚೇರಿ ಮೇಲೆ ದಾಂಡ್ ಹೋದುದು ಆಗಿದೆ. ಇದು 20 ದಿವಸಗಳ ಕೆಳಗೆ ನಡೆದ ಸಂಗತಿ. ಈಗ ಆಹಾರ ಧಾನ್ಯಗಳ ಪೂರ್ಯೆಕೆ ಸ್ವಲ್ಪಮಟ್ಟಿಗೆ ಸಮಾಧಾನಕರವಾದ ಸ್ಥಿತಿಯಿಲ್ಲದೆ. ಆದರೆ ಆಹಾರ ಧಾನ್ಯಗಳ ಸರಬರಾಜು ಪೂರ್ಯೆಕೆ ಚೆನ್ನಾಗಿಲ್ಲವೆಂದು ನನ್ನೆ ಕಾಗದ ಬಂದಿದೆ. ಈಗ ವಿಳಂಬವೇನೋ ಜಾಸ್ತಿಯಾಗುತ್ತಿದೆ. ದೊಡ್ಡ ದೊಡ್ಡ ನಗರಗಳಿಗೇನೋ ಬಹಳ ಬೇಗ ಆಹಾರಧಾನ್ಯಗಳನ್ನು ಪೂರ್ಯೆಸುತ್ತಿದ್ದಾರೆ. ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಸ್ಥಳಗಳಿಗೆ ಸರ್ಕಾರದವರು ಹೆಚ್ಚಿಗೆ ಲಕ್ಷ್ಯ ಕೊಡದಿದ್ದರೆ ಅಲ್ಲಿ ಅಸಮಾಧಾನ ನಿರ್ಮಾಣವಾದೀತು ಎಂದು ಹೇಳುತ್ತೇನೆ. ಆದ್ದರಿಂದ ಸರ್ಕಾರದವರು ಇದನ್ನು ಸಾಕಷ್ಟು ಗಂಭೀರತೆಯಿಂದ ವಿಚಾರಮಾಡಬೇಕು. ಇದುವರೆಗೆ ಸಾಮಾನ್ಯವಾಗಿ ವರ್ಷೇವರ್ಷೇ ಮಳೆ ಬೆಳೆ ಚೆನ್ನಾಗಿ ನಡೆದಿದ್ದರೆ ನರಗುಂದ, ನವಲಗುಂದ್ ಪ್ರದೇಶಗಳಿಗೆ ಹೆಚ್ಚಿನ ಅನುಕೂಲವಿರುತ್ತಿತ್ತು. ಏಕೆಂದರೆ ಅಲ್ಲಿ ಮೆಲಪ್ರಭದಿಂದ ಅವಶ್ಯಕತೆ ಹೆಚ್ಚು ಇರುವಾಗ ಅದರ ಕೆಲಸ ನಿಶ್ಚಯವಾಗಿ ಚೆನ್ನಾಗಿ ನಡೆದಿಲ್ಲ. ಈಗಾಗಲೇ ಅಲ್ಲಿನ ಕಾಲುವೆ ಕಟ್ಟುವ ಕೆಲಸವನ್ನು ಏಕೆ ಪ್ರಾರಂಭಮಾಡಬಾರದು ಎಂಬುದಾಗಿ ನಾನು ಈಗ ಸರ್ಕಾರದವರನ್ನು ಕೇಳುತ್ತೇನೆ. ಇದರಿಂದ ಸರ್ಕಾರದ ಕೆಲಸವೂ ಆಗುತ್ತದೆ. ಜನರಿಗೆ ಕೂಲಿ ಸಹ ಸಿಗುತ್ತದೆ. ಆದ್ದರಿಂದ ಈ ರೀತಿ ಏಕೆ ಮಾಡಬಾರದು ? ಈ ದೃಷ್ಟಿಯಿಂದ ನಿಶ್ಚಯವಾಗಿ ಮಲಪ್ರಭ ಯೋಜನೆ ಯಾವ ಯಾವ ಹಂತದಲ್ಲಿದೆ, ಯಾವ ಮಟ್ಟದಲ್ಲಿದೆ ಎಂಬುದನ್ನು ಪ್ರಗತಿ ನಕ್ಷೆಯನ್ನು ನಮಗೆ ತಿಳಿಸಬೇಕು. ಅದರಿಂದ ಆಗ ನಮಗೆ ಬಹಳ ಉಪಕಾರವಾಗುತ್ತದೆ. ಇವತ್ತು ನಾವು ಬೇರೆ ಬೇರೆ ಸೊಸೈಟಿಗಳ ಮೂಲಕ ಕೇವಲ ವ್ಯಾಪಾರ ಮಾಡಬೇಕೆಂಬ ವಿಚಾರ ಎನಿದೆ ಅದು ಅಷ್ಟು ಸರಿಯಾದ ವಿಚಾರವಲ್ಲ. ಕೆಲವು ಸಣ್ಣ ಪುಟ್ಟ ವರ್ತಕರಿಗೆ ಲೈಸೆನ್ಸ್ ಕೊಟ್ಟು ಸರ್ಕಾರದವರೇ ಫೇರ್ ಪ್ರೈಸ್ ಡಿಪೋಗಳನ್ನು ತೆಗೆಯಬೇಕು. ಸೊಸೈಟಿ ಎಂದಾಕ್ಷಣಕ್ಕೆ ಸ್ವರ್ಗವೆಂದು ನಾನು ತಿಳಿಯುವುದಿಲ್ಲ. ಇದರಲ್ಲಿ ಅನೇಕ ರೀತಿಯ ಲೋಪದೋಷಗಳಿವೆ. ಒಬ್ಬನೇ ಕೂತರೆ ಗಾಡಿಯನ್ನು ಸುಲಭವಾಗಿ ಎಳೆಯಬಹುದು 10 ಮಂದಿ ಕೂತಿರುವ ಗಾಡಿಯನ್ನು ಎಳೆಯಬೇಕಾದರೆ ಶಕ್ತಿ ಕಡಿಮೆಯಾಗುತ್ತದೆ. ಹೀಗೆಯೆ ಸಕ್ಕರೆ ಹಂಚುವ ವಿತರಣೆಯಲ್ಲಿ ಅನೇಕ ಲೋಪದೋಷಗಳು ಕಂಡು ಬಂದಿವೆ. ಆ ಕಾರಣದಿಂದ ಇದನ್ನು ಒಂದೇ ದೃಷ್ಟಿಯಿಂದ ವಿಚಾರ ಮಾಡಬೇಕು. ಸಣ್ಣ ಪುಟ್ಟ ವರ್ತಕರು ಫೇರ್‌ಪ್ರೈಸ್ ಡಿಪೋಗಳನ್ನು ತೆರೆಯುವಾಗ ವಿವಿಧ ಮುಖಗಳಿಂದ ಆಹಾರ ಧಾನ್ಯಗಳು ವಿತರಣೆಯಾಗಬೇಕು. ಸಂಗ್ರಹಣಾ ಕಾರ್ಯವನ್ನೂ ಸಹ ಚೆನ್ನಾಗಿಮಾಡಬೇಕು. ವಿತರಣೆಯ ಬಗ್ಗೆ ಹೆಚ್ಚಿನ ಸಾಮರ್ಥ್ಯತೆ ಮತ್ತು ದೃಢತೆ ಇರಬೇಕು. ಇದು ಒಂದು ಯಶಸ್ವಿಯಾಗಿ ನಡೆದರೆ ಸರ್ಕಾರ ಈಗ ಮಾಡುತ್ತಿರುವ ಪ್ರಯತ್ನಕ್ಕೆ ಒಂದು ಒಳ್ಳೆಯ ಪರಿಣಾಮವಾಗುತ್ತದೆ. ಮುಖ್ಯವಾಗಿ ಈ ಪ್ರಶ್ನೆಯಲ್ಲಿ ವಿಳಂಬವಾಗದಂತೆ ತಕ್ಕ ಕಾರ್ಯಕ್ರಮವನ್ನು ಕೈಗೊಳ್ಳಬೇಕು.

(ಶ್ರೀ ಎ. ಜಿ. ದೊಡ್ಡಮೇಟಿ)

ಕೇವಲ ಆಹಾರ ಧಾನ್ಯಗಳ ಅಭಾವ, ಮಳೆ ಬೆಳೆಗಳ ಅಭಾವ—ಇವುಗಳಿಂದ ಬರಗಾಲ ಬರುತ್ತದೆಂದು ಹೇಳುವುದಕ್ಕಾಗುವುದಿಲ್ಲ. ಹೆಚ್ಚು ಮಳೆಯಾದರೂ ಅನೇಕರಿಗೆ ನಾನಾರೀತಿಯ ತೊಂದರೆಗಳಾಗುತ್ತವೆ. ಹೋದಸಾರಿ ಮಳೆ ಇಲ್ಲದೆಯೇ ಬೆಳೆಗಳಿಗೆ ಬಹಳ ತೊಂದರೆಯಾಯಿತು. 8—10 ದಿವಸಗಳಿಂದ ಬೆಳೆಗಳಿಗೆ ದೋಗ ತಗುಲಿ ಬೆಳೆಯಿಲ್ಲವೂ ಹಾಳಾಗಿ ಹೋಗಿದೆ. ಈ ದೃಷ್ಟಿಯಿಂದ ಸರ್ಕಾರ ಏನು ಮಾಡುತ್ತದೆಂಬುದನ್ನು ಯೋಚನೆಮಾಡಬೇಕು. ಇನ್ನು ಬೀಜಗಳ ದೋಷ ನೆಲದ ದೋಷ ಮತ್ತು ಭೂಗುಣ ದೋಷಗಳಿಂದ ಬೆಳೆಗಳಿಗೆ ಹೆಚ್ಚು ನಷ್ಟವುಂಟಾಗುವುದೂ ಉಂಟು. ಇವನ್ನೆಲ್ಲಾ ಸರ್ಕಾರದವರು ಆಲೋಚನೆಮಾಡಬೇಕು. ಈ ದೃಷ್ಟಿಯಿಂದ ಆಹಾರನಿಬರಾಜು ಮತ್ತು ರೆವಿನ್ಯೂ ಇಲಾಖೆಗಳು ಯಾವರೀತಿ ಮುಂದುವರಿಯುವುದಕ್ಕೆ ಸಹಾಯವನ್ನು ಕೊಡುತ್ತಿದ್ದಾರೋ ಅದೇ ರೀತಿ ವ್ಯವಸಾಯ ಇಲಾಖೆಯೂ ಬೆಳೆಯುವುದಕ್ಕೆ ತಕ್ಕ ಸಹಾಯವನ್ನು ಕೊಟ್ಟರೆ ಚೆನ್ನಾಗಿರುತ್ತದೆ. ಇದು ಬಹಳ ದೊಡ್ಡ ಕೆಲಸ. ಈ ವಿಚಾರದಲ್ಲಿ ಸಾಕಷ್ಟು ಏನಾದರೂ ಪರಸ್ಪರ ಸಹಾಯ ಮಾಡಿಕೊಂಡು ಮುಂದುವರಿಸುವುದು ಒಳ್ಳೆಯದು ಎಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಜಿ. ಎ. ಗೌಡ (ಪಾಳ್ಯ).—ಮಾನ್ಯ ಅಧ್ಯಕ್ಷರೇ, ಈ ಚರ್ಚೆ ಆರಂಭವಾಗುವುದಕ್ಕೆ ಮುಂಚೆ ನಮ್ಮ ರಾಜ್ಯದಲ್ಲಿ ಯಾವ್ಯಾವ ಭಾಗದಲ್ಲಿ ಆಹಾರ ಪರಿಸ್ಥಿತಿ ಭೀಕರವಾಗಿದೆ ಏನು ಪರಿಹಾರ ಸರ್ಕಾರ ತೆಗೆದುಕೊಳ್ಳುವುದಕ್ಕೆ ಯೋಚನೆಮಾಡಿದೆ ಎನ್ನುವ ವಿಚಾರವನ್ನು ಕುರಿತು ಒಂದು ಹೇಳಿಕೆಯನ್ನು ಕೊಟ್ಟಿದ್ದರೆ ಬಹಳ ಚೆನ್ನಾಗಿತ್ತು. ಆಯಾಯ ಸದಸ್ಯರು ತಮ್ಮ ತಮ್ಮ ಭಾಗದಲ್ಲಿ ಇಂತಿಂಥ ಪರಿಸ್ಥಿತಿ ಇದೆಯೆಂದು ಹೇಳುವುದಕ್ಕೆ ಬದಲಾಗಿ ಮಾನ್ಯ ಮಂತ್ರಿಗಳು ತಮ್ಮ ಅಭಿಪ್ರಾಯವನ್ನು ಈ ವಿಚಾರದ ಬಗ್ಗೆ ಈಗಿನ ನಿಜಸ್ಥಿತಿಯನ್ನು ಇಟ್ಟಿದ್ದರೆ ಬಹುಪಾಲು ಯಶಸ್ವಿಯಾಗುತ್ತಿತ್ತೆಂದು ನಾನು ಅಂದುಕೊಂಡಿದ್ದೇನೆ.

ಸ್ವಾಮಿ, ಇಷ್ಟೊಂದು ವರ್ಷಗಳು ನಾವು ಯೋಜನೆಗಳ ಮೂಲಕ ಅನೇಕ ಕೆಲಸಕಾರ್ಯಗಳನ್ನು ಮಾಡಿನುತ್ತಿದ್ದೇವೆ, ಈಗಾಗಲೇ 1, 2, 3 ನೇ ಪಾಂಚವಾರ್ಷಿಕ ಯೋಜನೆಗಳನ್ನು ಮುಗಿನುತ್ತಾ ಬಂದಿದ್ದೇವೆ. ಬೇಕಾದಷ್ಟು ಹಣವನ್ನು ಖರ್ಚುಮಾಡುತ್ತಿದ್ದೇವೆ. ಆದರೂ ಸಾಮಾನ್ಯ ಜನತೆಗೆ ಮೂಲಭೂತವಾಗಿ ಬೇಕಾದ ಬೇಡಿಕೆಗಳು ಏನು, ಅವುಗಳ ಅವಶ್ಯಕತೆಯನ್ನು ಪೂರೈಕೆ ಮಾಡುವುದಕ್ಕೆ ಸಾಧ್ಯವಾಗುತ್ತಾ ಇಲ್ಲ. ಅಂದ ಮೇಲೆ ಈ ಯೋಜನೆಗಳು ಎಷ್ಟರವಟ್ಟಿಗೆ ಯಶಸ್ವಿಯಾಗಿದೆ ಎನ್ನುವುದರಲ್ಲಿ ಪ್ರತಿಯೊಬ್ಬರಿಗೂ ಒಂದು ಅನುಮಾನ ಬರುವ ಸಂದರ್ಭ ಬಂದಿದೆ, ಇಷ್ಟೊಂದು ಯೋಜನೆಗಳನ್ನು ಅಳವಡಿಸಿಕೊಂಡರೂ ಮೂಲಭೂತವಾದ ಬೇಡಿಕೆಗಳನ್ನು ಪೂರೈಕೆ ಮಾಡುವುದಕ್ಕೆ ಸಾಧ್ಯವಾಗುತ್ತಾ ಇಲ್ಲವೆಂಬ ವಿಚಾರ ವಾಸ್ತವಾಂಶವಾಗಿದೆ. ಸರ್ಕಾರದನೆರವು ಈ ಕಡೆ ಸಾಧ್ಯವಾದಮಟ್ಟಿಗೆ ಇದೆಯೆಂಬುದನ್ನು ಅವರು ವಿಮರ್ಶೆಮಾಡುವುದು ಬಹಳ ಅಗತ್ಯ. ಖರ್ಚುಮಾಡಿದ ಹಣಕ್ಕೆ ತಕ್ಕಂಥ ಪ್ರತಿಫಲ ದೊರಕುತ್ತದೆಯೇ ಎನ್ನುವ ವಿಚಾರವನ್ನು ಆಗಿಂದಾಗ್ಗೆ ವಿಮರ್ಶೆ ಮಾಡುವುದು ಬಹಳ ಮುಖ್ಯವಾದುದು ಎಂಬುದಾಗಿ ನಾನು ಈ ಸಂದರ್ಭದಲ್ಲಿ ಒತ್ತಿ ಹೇಳಬೇಕಾಗಿದೆ. ವರ್ಷೇವರ್ಷೇ ಪರಿಹಾರಕಾರ್ಯವಾಗಬೇಕು ಮತ್ತು ಸ್ಥಿರವಾದ ಕಾರ್ಯ ಮಾಡಬೇಕು ಇಂತಹ ಪರಿಸ್ಥಿತಿ ಆಗಾಗ್ಗೆ ಬಾರದೇಯಿರುವ ಹಾಗೆ ಅಭಾವ ಪರಿಸ್ಥಿತಿಯನ್ನು ನಿವಾರಣೆ ಮಾಡುವುದಕ್ಕೆ ಖಾಯಂ ಪರಿಹಾರ ಮಾಡಬೇಕೆಂದು ಹೇಳುತ್ತಾ ಇದ್ದೇವೆ. ಈ ಬಗ್ಗೆ ಸರ್ಕಾರ ಸಹಾನುಭೂತಿ ಮಾತ್ರ ವ್ಯಕ್ತಪಡಿಸುತ್ತಿದೆ. ತಕ್ಕ ಕ್ರಮವನ್ನು ತೆಗೆದು ಕೊಳ್ಳುತ್ತೇವೆಂದು ಹೇಳುತ್ತಿದ್ದೇರೆಯೇ ಹೊರತು ಇಲ್ಲಿಯವರೆಗೂ ಯಾವ ಕಾರ್ಯಕ್ರಮವನ್ನು ಅವರು ಕೈಗೊಂಡಂತೆ ಗೋಚರವಾಗುತ್ತಿಲ್ಲ. 150 ಕೋಟಿ ರೂಪಾಯಿಗಳ ಯೋಜನೆಯನ್ನು ಹಾಕಿದ್ದೇವೆಂದು ಕೇಂದ್ರದ ನೀರಾವರಿ ಮಂತ್ರಿಗಳು ಹೇಳಿದ್ದಾರೆ. ಹೋದಸಾರಿ 40 ಕೋಟಿ ರೂಪಾಯಿಗಳ ಸಮಗ್ರ ಯೋಜನೆಯೊಂದನ್ನು ಹಾಕಿದ್ದಾರೆ. ಅದನ್ನು ಕಾರ್ಯಗತ ಮಾಡಿದರೆ ಬೇಕಾದಷ್ಟು ಕೆಲಸವಾಗುತ್ತದೆ. ಎನ್ನುವ ಭರವಸೆಯನ್ನು ಮಾನ್ಯ ಮುಖ್ಯ ಮಂತ್ರಿಗಳು ಕೊಟ್ಟಿದ್ದರು. ಆ ಯೋಜನೆಯನ್ನು ಕೈಗೊಂಡಿದ್ದಾರೋ ಇಲ್ಲವೋ ಗೊತ್ತಿಲ್ಲ. ಇವತ್ತಿನ ದಿವಸ 1964-65 ನೇ ಸಾಲಿನ ವರ್ಷದಲ್ಲಿಯೂ ಹಿಂದಿನ ವರ್ಷದ ಹಣವನ್ನು ತೆಗೆದುಕೊಂಡು ಬಾವಿಗಳನ್ನು ಪೂರ್ಣಮಾಡುವುದಕ್ಕೆ ಸಾಕಾದಷ್ಟು ಪ್ರಯತ್ನವನ್ನು ಮಾಡಲಿಲ್ಲ. ಈ ವರ್ಷದಲ್ಲಿ ನೀರಾವರಿ ಬಾವಿಗಳನ್ನು ತೆಗೆಯುವುದಕ್ಕೆ ಸಾಕಷ್ಟು ಹಣವನ್ನು ಕೊಟ್ಟಿಲ್ಲವೆಂದು ಹೇಳಿದಮೇಲೆ ಇನ್ನು ಹೊಸ ಬಾವಿಗಳನ್ನು ತೆಗೆಯುವದಕ್ಕೆ ಹೇಗೆ ಸಾಧ್ಯವೆಂಬುದನ್ನು ಯೋಚನೆಮಾಡಬಹುದು. ಇದು ಈಗಿನ ಸಂದರ್ಭದಲ್ಲಿ ಬಹಳ ಅವಶ್ಯಕವೆಂದು ನಾನು ಮಾನ್ಯ ಮಂತ್ರಿಗಳಿಗೆ ಹೇಳುತ್ತೇನೆ. ಇನ್ನು ಬಿಡಿಯಂ ಪ್ರಮಾಣ ನೀರಾವರಿ ಯೋಜನೆಗಳನ್ನು ಈಗಾಗಲೇ ತೆಗೆದುಕೊಳ್ಳಬೇಕೆಂದು ಹೇಳುತ್ತಿದ್ದೇವೆ. ಇದು ಬಹಳ ತ್ವರಿತವಾದ ಮತ್ತು

ಪ್ರಮುಖವಾದ ವಿಚಾರವೆಂದು ನಾನು ಹೇಳುತ್ತೇನೆ. ಆದ್ದರಿಂದ ಸಣ್ಣ ಮತ್ತು ಮೀಡಿಯಂ ನೀರಾವರಿ ಯೋಜನೆಗಳನ್ನು ತೆಗೆದುಕೊಳ್ಳಲು ಹಣ ವೆಚ್ಚಮಾಡಿ ರೈತರ ಸ್ಥಿತಿಯನ್ನು ಉತ್ತಮ ಮಾಡುವುದಕ್ಕೆ ತಕ್ಕ ಪ್ರಯತ್ನ ಮಾಡಬೇಕೆಂದು ನಾನು ಹೇಳುತ್ತೇನೆ. ಆದರೆ ಹಣದ ಅಭಾವದ ಪರಿಣಾಮವಾಗಿ ಹೆಚ್ಚಿನ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತಾ ಇಲ್ಲ. ಕೇಂದ್ರ ಸರ್ಕಾರದ ಮೇಲೆ ಒತ್ತಾಯಮಾಡಿ ಮಾಡಬೇಕೆಂಬ ಅಭಿಪ್ರಾಯ ಬರುತ್ತಾ ಇದೆ. ಇವರು ಈ ಬಗ್ಗೆ ಶಾಶ್ವತ ಪರಿಹಾರವನ್ನು ತೆಗೆದು ಕೊಳ್ಳುವುದರಲ್ಲಿ ವಿಫಲವಾಗಿದ್ದಾರೆಂದು ಹೇಳದೆ ವಿಧಿಯಿಲ್ಲ. ಮೈಸೂರು ಜಿಲ್ಲೆಯಲ್ಲಿರತಕ್ಕ ಅಭಾವ ಪರಿಸ್ಥಿತಿಯನ್ನು ಇದರಲ್ಲಿ ಚಿತ್ರಿಸಿದ್ದಾರೆ. ಬಹಳ ಭೀಕರ ಪರಿಸ್ಥಿತಿ ಇದೆ. ಮಾನ್ಯ ಆಹಾರ ಮಂತ್ರಿಗಳಿಗೆ ಈ ವಿಚಾರ ಚೆನ್ನಾಗಿ ಗೊತ್ತಿದೆ. ಮಳೆಬಾರದೆ ಪರಿಸ್ಥಿತಿ ಕಳವಳಕರ ವಾಗಿದೆ. ಮೈಸೂರು ಜಿಲ್ಲೆಯಲ್ಲಿ ಗುಂಡ್ಲು ಪೇಟೆ ತಾಲ್ಲೂಕಿನ ನುವರ್ಣಾನದಿ ಹತ್ತಿರ ಇರುವ ಪ್ರದೇಶಗಳಲ್ಲಿ ಬಹಳ ದಾರುಣವಾದ ಪರಿಸ್ಥಿತಿ ಉಂಟಾಗಿದೆಯೆಂದು ಮಾನ್ಯ ಮಂತ್ರಿಗಳು ಈಗಾಗಲೇ ಅದನ್ನು ಚೆನ್ನಾಗಿ ತಿಳಿದುಕೊಂಡು ತಕ್ಕ ಪರಿಹಾರ ಕ್ರಮಗಳನ್ನು ತೆಗೆದುಕೊಂಡಿದ್ದಾರೆ.
ಆ ಪರಿಹಾರ ಕಾರ್ಯ ಏತಕ್ಕೂ ಸಾಲದು ಎಂದು ತಿಳಿಸುತ್ತೇನೆ. ಆ ಭಾಗದಲ್ಲಿ ಬಹಳ ನೈಜವಾದ ಸಂಪತ್ತಿದೆ. ಅದನ್ನು ರಪ್ತು ಮಾಡುವ ದೃಷ್ಟಿಯಿಂದ ಕೆಲಸ ಆಗಬಲ್ಲದು ಎಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ.

1-30 P.M.

ನಮ್ಮ ತಾಲ್ಲೂಕಿನಲ್ಲಿ ಅನೇಕ ಹಳ್ಳಗಳಲ್ಲಿ ನೀರಿರುತ್ತದೆ. ಈ ವರ್ಷ ಮಳೆ ಬಾರದ ಕಾರಣ ದಿಂದ ಯಾವ ಹಳ್ಳದಲ್ಲಿಯೂ ನೀರಿಲ್ಲ. 100 ಕೆರೆಗಳನ್ನು ಅಲ್ಲಿ ಕಟ್ಟಬೇಕೆಂಬ ಅಭಿಪ್ರಾಯ ಸರ್ಕಾರದ ಕಡೆಯಿಂದ ಬಂದಿದೆ. 5-10 ವರ್ಷಗಳಲ್ಲಿ ಈ ಕೆರೆಗಳನ್ನು ಕಟ್ಟಿಸಲಿಕ್ಕೆ ಸಾಧ್ಯವಿದೆ. ನುಮಾರು 10 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುವುದಾದರೆ 10 ಸಾವಿರ ಎಕರೆ ಜಮೀನನ್ನು ಅಬಾದು ಮಾಡಲಕ್ಕೆ ಸಾಧ್ಯವೆಂದು ಅಭಿಪ್ರಾಯವಿದೆ. ಆದರೆ ಆ ಕಡೆ ಯಾವ ಕಾರ್ಯಕ್ರಮವನ್ನೂ ಹಾಕಿಕೊಂಡಿಲ್ಲ. ಈಗ ಇರತಕ್ಕ ಮಧ್ಯಮ ಪ್ರಮಾಣದ ಯೋಜನೆಗಳನ್ನು ಮಾಡಲಿಕ್ಕೆ ಸರ್ಕಾರ ಪ್ರಯತ್ನ ಮಾಡದೆ ಇರುವುದು ಬಹಳ ವಿಷಾದಕರ.

ಗುಂಡಾಲ್ ಯೋಜನೆಯನ್ನು ಸರ್ಕಾರ ತೆಗೆದುಕೊಂಡು ಪೂರೈಸಿದರೆ ಅದರಿಂದ 15 ಸಾವಿರ ಎಕರೆ ಜಮೀನನ್ನು ನೀರಾವರಿಗೆ ತರಬಹುದು. ಇದಲ್ಲದೆ ಇನ್ನೂ ಮಧ್ಯಮ ಪ್ರಮಾಣದ ನೀರಾವರಿ ಯೋಜನೆಗಳು ನಾಲ್ಕು ಇವೆ. ಅದುದರಿಂದ ಮೂರು ಮತ್ತು ನಾಲ್ಕನೆಯ ಯೋಜನೆಗಳಲ್ಲಿ ಈ ಕಾರ್ಯಗಳನ್ನು ಪೂರೈಸಿದರೆ ಶಾಶ್ವತವಾದ ಪರಿಹಾರಗಳನ್ನು ಕೊಡಲಿಕ್ಕೆ ಸಾಧ್ಯ. ಆದುದರಿಂದ ಈ ಕಾರ್ಯಗಳನ್ನು ತೆಗೆದುಕೊಳ್ಳಲಿಕ್ಕೆ ಹೆಚ್ಚಿನ ಪ್ರಾಶಸ್ತ್ಯವನ್ನು ಸರ್ಕಾರ ಕೊಡಬೇಕು ಎಂದು ಪ್ರಾರ್ಥನೆ ಮಾಡುತ್ತೇನೆ.

ತಾತ್ಕಾಲಿಕವಾಗಿ ಏನೋ ಒಂದು ಕೆಲಸವನ್ನು ಮಾಡುತ್ತಾರೆ. ಆದರಿಂದ ಸಾಕಾದಷ್ಟು ಪರಿಹಾರವಾಗುವುದಿಲ್ಲ ಎಂದು ನನ್ನ ಮಾನ್ಯ ಮಿತ್ರರು ಅಭಿಪ್ರಾಯಪಟ್ಟಿದ್ದಾರೆ. ತಾತ್ಕಾಲಿಕವಾಗಿ ಏನು ಕೆಲಸ ತೆಗೆದುಕೊಂಡರೂ ಅದು ಮುಂದೆ ಶಾಶ್ವತವಾದ ಪರಿಹಾರವನ್ನು ಕೊಡುವ ಹಾಗೆ ಮಾಡುವುದಾದರೆ ಜನಗಳಿಗೆ ತಕ್ಷಣ ಕೂಲಿ ಸಿಕ್ಕಿ ದೇಶಕ್ಕೆ ಒಂದು ಆಸ್ತಿಯನ್ನು ನಿರ್ಮಾಣಮಾಡಿದ ಹಾಗೆ ಆಗುತ್ತದೆ.

ಇವತ್ತಿನ ದಿವಸ ಜಾನುವಾರುಗಳಿಗೆ ಹುಲ್ಲನ್ನು ಒದಗಿಸಿಕೊಡುವುದರ ಮೂಲಕ, ಫೇರ್ ಪ್ರೈಸ್ ಷಾಪ್ಸ್ ತೆಗೆಯುವುದರ ಮೂಲಕ, ಅನೇಕ ಗೋಕಟ್ಟೆಗಳನ್ನು ಮತ್ತು ಇನ್ನಿತರ ಕಾಮಗಾರಿ ಗಳನ್ನು ತೆಗೆದುಕೊಳ್ಳುವುದರ ಮೂಲಕ ಹೆಚ್ಚು ಹೆಚ್ಚು ಕೆಲಸವನ್ನು ಕೊಡುವ ಆವಶ್ಯಕತೆ ಬಹಳ ಇದೆ. ಅಂಥ ಕೆಲಸವಾಗಬೇಕು ಎಂದು ಹೇಳುತ್ತೇನೆ.

ವಿದ್ಯುಚ್ಛಕ್ತಿಯನ್ನು ಒದಗಿಸುವುದರಲ್ಲಿ ಮತ್ತು ವಿದ್ಯುಚ್ಛಕ್ತಿ ಪಂಪು ಸೆಟ್‌ಗಳನ್ನು ವಿಲೇವಾರಿ ಮಾಡುವುದರಲ್ಲಿ ಸರಿಯಾದ ರೀತಿ ನಡೆಯುತ್ತಿಲ್ಲ ಎನ್ನುವ ವಾಸ್ತವಾಂಶವನ್ನು ಸರ್ಕಾರದ ಗಮನಕ್ಕೆ ತರಬೇಕಾಗಿದೆ. ರ್ಯಾಷನಲ್ ಬೇಸಿಸ್ ಮೇಲೆ ಇದರ ವಿಲೇವಾರಿಯಾಗಬೇಕು. ನಮ್ಮ ತಾಲ್ಲೂಕಿನಲ್ಲಿ ನುಮಾರು 300 ಬಾವಿಗಳಿಗೆ ಹಣವನ್ನು ಕಟ್ಟಿ ವಿದ್ಯುಚ್ಛಕ್ತಿಗಾಗಿ ಕಾದಿರುವಾಗ, ಅದಕ್ಕೆ ಬೇಕಾದ ಅಂದಾಜುಗಳು ತಯಾರಾಗಿ ಮಂಜೂರಾತಿ ಮಾತ್ರ ಆಗಿಲ್ಲ. ಜಿಲ್ಲಾಧಿಕಾರಿಗಳು ಮತ್ತು ವಿದ್ಯುಚ್ಛಕ್ತಿಯನ್ನು ಕೊಡತಕ್ಕ ಅಧಿಕಾರಿಗಳು ಯಾರು ಇದ್ದಾರೆ ಅವರಲ್ಲಿ ಒಬ್ಬರಿಗೊಬ್ಬರಿಗೆ ಕೋಆರ್ಡಿನೇಷನ್ ಬರಬೇಕಾದ್ದು ಅಗತ್ಯವೆಂದು ನಾನು ಹೇಳಬೇಕಾಗಿದೆ.

ವ್ಯವಸಾಯಕ್ಕೆ ಹೆಚ್ಚಿನ ಪ್ರಾಶಸ್ತ್ಯ ಕೊಡಬೇಕು ಎಂದು ಹೇಳುತ್ತಾರೆ. ಆದರೆ ವ್ಯವಸಾಯಕ್ಕೆ ಏನೊಂದು ಪ್ರಾಶಸ್ತ್ಯವನ್ನು ಕೊಡಬೇಕಾಗಿತ್ತೋ ಅಷ್ಟೊಂದು ಪ್ರಾಶಸ್ತ್ಯವನ್ನು ಸರ್ಕಾರ ಕೊಟ್ಟಿಲ್ಲವೆಂದು ಹೇಳದೆ ವಿಧಿ ಇಲ್ಲ.

(ಶ್ರೀ ಜಿ. ಎ. ಗೌಡ)

ಪ್ರಕೃತಿಯ ಏಕೋಪಕ್ಕೆ ರೈತರು ಸಿಕ್ಕಿದ್ದಾರೆ. ಅವರ ಸ್ಥಿತಿ ನುಧಾರಣೆ ಆಗಬೇಕಾದರೆ ರೈತರ ಸ್ಥಾನಮಾನವೇನು ಎನ್ನುತಕ್ಕ ಪರಿಸ್ಥಿತಿಯಲ್ಲಿ ನುಮಾರು 10-12 ವರ್ಷಗಳಿಂದ ಇದ್ದೇವೆ. ಗೇಣಿದಾರರಿಗೂ ಮಾಲೀಕರಿಗೂ ಇರತಕ್ಕ ಆಂತರಿಕ ಘರ್ಷಣೆ ನಿವಾರಣೆಯಾಗಬೇಕು. ಆದಾಗ ಬೇಕಾದರೆ ಭೂನುಧಾರಣೆ ಜಾರಿಗೆ ಬರಬೇಕು. ಆದರೆ ಭೂನುಧಾರಣೆ ಏನು ಆಗಬೇಕಾಗಿತ್ತೋ ಅದು ಆಗಿಲ್ಲ. ನಾನು ಹೆಚ್ಚು ಏಕೆ ದುಡಿಯಬೇಕು, ಹೆಚ್ಚು ಬಂಡವಾಳವನ್ನು ನಾನು ಏಕೆ ಹಾಕ ಬೇಕು ಎನ್ನುವ ನಂದಿಗ್ಧ ಪರಿಸ್ಥಿತಿಯಿಂದ ಆಹಾರ ಉತ್ಪಾದನೆಗೆ ಧಕ್ಕೆ ಬಂದಿದೆ. ಸರ್ಕಾರಈ ವಿಷಯಕ್ಕೆ ಗಮನಕೊಟ್ಟು ರೈತರ ಸ್ಥಾನಮಾನವೇನು ಎನ್ನುವುದಕ್ಕೆ ಒಂದು ನಿರ್ದಿಷ್ಟವಾದ ನಿಲುವನ್ನು ಕೊಟ್ಟು ಅವನಿಗೆ ಸೆಕ್ಯೂರಿಟಿ ಆಫ್ ಟೆನ್ಯೂರ್ ದೊರಕಿಸಿಕೊಡಬೇಕು. ಇಲ್ಲದೆ ಇದ್ದರೆ ಹೆಚ್ಚಿನ ಉತ್ಪಾದನೆಗೆ ಧಕ್ಕೆ ಬರುತ್ತದೆ. ಗೇಣಿದಾರರ ಮತ್ತು ಮಾಲೀಕರ ಮಧ್ಯೆ ಇರುವ ಆಂತರಿಕ ಘರ್ಷಣೆಯನ್ನು ನಿವಾರಣೆ ಮಾಡಲು ಪರಿಹಾರ ಕಾರ್ಯಕ್ರಮಗಳನ್ನು ತೆಗೆದುಕೊಂಡು ರೈತನು ಹೆಚ್ಚು ಉತ್ಪಾದನೆಯನ್ನು ಮಾಡಲಿಕ್ಕೆ ಅನುಗುಣವಾದ ವಾತಾವರಣವನ್ನು ಕಲ್ಪಿಸುವುದರ ಮೂಲಕ ರೈತನಲ್ಲಿ ಹೆಚ್ಚಿನ ಉತ್ಸಾಹವುಂಟಾಗುವಂತೆ ಮಾಡಬೇಕೆಂದು ತಿಳಿಸುತ್ತೇನೆ. ಎಲ್ಲಿಯವರೆಗೆ ರೈತರಿಗೆ ನಮಾಜದಲ್ಲಿ ಅನ್ಯಾಯವಾಗುತ್ತದೆ, ಅಸಮಾನತೆ ಇರುತ್ತದೆ ಅಲ್ಲಿಯವರೆಗೆ ಅವರು ಉದ್ಧಾರವಾಗುವುದಿಲ್ಲ ಮತ್ತು ದೇಶದಲ್ಲಿ ಅಭಾವ ಪರಿಸ್ಥಿತಿಯನ್ನು ಹೋಗಲಾಡಿಸಲು ಹೆಚ್ಚು ಉತ್ಪಾದನೆ ಮಾಡುವ ದೃಷ್ಟಿಯಿಂದ ಕೆಲಸ ಮಾಡುವುದಿಲ್ಲ. ಸರ್ಕಾರದವರು ಈ ಎಲ್ಲ ಸಲಹೆಗಳಿಗೂ ಹೆಚ್ಚಿನ ನಿಗಾ ಕೊಡುತ್ತಾರೆಂದು ನಂಬಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀಮತಿ ನುಶೀಲಾಬಾಯಿ ಹೀರಾಚಂದ್ ಷಾ (ಬಾಗೇವಾಡಿ).—ಮಾನ್ಯ ಸಭಾಪತಿಯವರೇ, ನಮ್ಮ ಮೈಸೂರು ರಾಜ್ಯದೊಳಗೆ ಕೆಲವು ಭಾಗದೊಳಗೆ ಹವಾಪರಿಸ್ಥಿತಿಯ ಮೂಲಕ ಆಹಾರ ಧಾನ್ಯಗಳ ಕೊರತೆಯಾಗಿದೆ. ಇಂಥ ಪರಿಸ್ಥಿತಿಯೊಳಗೆ ನಮ್ಮ ಮುಖ್ಯಮಂತ್ರಿಗಳು ಮತ್ತು ರೆವೆನ್ಯೂ ಮಂತ್ರಿಗಳು ಡೆಲ್ಲಿಗೆ ಹೋಗಿ 2 ಲಕ್ಷ ಟನ್ ಗೋಧಿ ಮತ್ತು ಒಂದು ಲಕ್ಷ ಟನ್ ಅಕ್ಕಿ ತಂದಿದ್ದಾರೆ. ಇದಕ್ಕಾಗಿ ಅವರನ್ನು ಅಭಿನಂದಿಸಿ ಬಿಜಾಪುರ ಜಿಲ್ಲೆಯ ವಿಷಯವಾಗಿ ಕೆಲವು ವಿಚಾರಗಳನ್ನು ಹೇಳುತ್ತೇನೆ.

ಬಿಜಾಪುರ ಜಿಲ್ಲೆಯಲ್ಲಿ ಎರಡು ಮೂರು ವರ್ಷಗಳಿಂದ ಅನಾವೃಷ್ಟಿಯಾಗಿದೆ. ಯಾವಾಗ ಬೇಕೋ ಆವಾಗ ಮಳೆಯಾಗಲಿಲ್ಲ. ಇದರಿಂದ ಬಾವಿಗಳಲ್ಲಿ ನೀರಿರುವುದಿಲ್ಲ. ನಮ್ಮ ಕಡೆ ಜೋಳದ ಬೆಳೆ ಬರುವುದು ಬಹಳ ಕಡಮೆಯಾಗಿ ನಾಲ್ಕಾಣೆ, ಆರಾಣೆ ಎಂಟಾಣೆ ಬೆಳೆ ಆಯಿತು. ನಮಗೆ ಜೋಳದ ಬೆಳೆ ಬಹಳ ಕಡಮೆ ಬಂದಿದೆ ನಮಗೆ ಜೋಳ ಬೇಕು ಎಂದರೆ ರೆವೆನ್ಯೂ ಮಂತ್ರಿಗಳೂ ಮತ್ತು ಡೆಪ್ಯುಟಿ ಕಮಿಷನರೂ ಲಕ್ಷ್ಯ ಕೊಡಲಿಲ್ಲ. ಜೋಳದ ಧಾರಣೆ ಬಗ್ಗೆ ಸರ್ಕಾರ ಅನಿಶ್ಚಿತ ಧೋರಣೆಯನ್ನು ಹೊಂದಿತ್ತು. ಬ್ಯಾಂಕುಗಳಿಂದ ಜನರಿಗೆ ಹಣ ಸಿಕ್ಕಲಿಲ್ಲ. ಜೋಳಕ್ಕೆ ಹೊರಗಡೆಯಿಂದ ಎಂದರೆ ಮಹಾರಾಷ್ಟ್ರದಿಂದ ಬಹಳ ಬೇಡಿಕೆ ಬಂದು, ಬೆಲೆ ಹೆಚ್ಚಾಗಿ ಬಂದುದರಿಂದ ಜನ ತಮ್ಮಲ್ಲಿದ್ದ ಜೋಳವನ್ನು ಮಾರಿದರು. ಈ ಕಾರಣದಿಂದ ಸಾವಿರಾರು ಚೀಲ ಜೋಳ ಮಹಾರಾಷ್ಟ್ರಕ್ಕೆ ಹೋಯಿತು. ನಮ್ಮ ಸರ್ಕಾರ ಇತ್ತ ಕಡೆಗೆ ಲಕ್ಷ್ಯ ಕೊಡಲೇ ಇಲ್ಲ. ರಾತ್ರಿ ಹಗಲೂ ಕೂಡ ಮಹಾರಾಷ್ಟ್ರಕ್ಕೆ, ಜೋಳ ಹೋಗಿಬಿಟ್ಟಿತು. ಮಹಾರಾಷ್ಟ್ರದ ಜನರು ಬಹಳ ಜಾಣತನ ಮಾಡಿದ್ದಾರೆ. ಅವರು ನಮಗೆ ಬೇಕಾದ ತೊಗರಿ ಬೇಳೆಯನ್ನು ಕಳಿಸಲಿಲ್ಲ. ಪಂಜಾಬಿನವರೂ ಕಳಿಸಲಿಲ್ಲ. ಮೈಸೂರು ಸರ್ಕಾರದವರೂ ಜಾಣತನವನ್ನು ಮಾಡಿದ್ದರೆ ನಮಗೆ ಜೋಳ ಈ ತರಹ ಕಡಮೆ ಬೀಳುತ್ತಿರಲಿಲ್ಲ. ಜೋಳ ಚೀಲಕ್ಕೆ 40 ರೂಪಾಯಿ ಇದ್ದದ್ದು ಸರ್ಕಾರದ ಧೋರಣೆ ಅನಿಶ್ಚಿತವಿದ್ದುದರಿಂದ 45 ರೂಪಾಯಿ ಬೆಲೆ ಆಯಿತು. ಹೆಚ್ಚು ರೊಕ್ಕ ಬರುತ್ತದೆಂದು ಜನ ತಮ್ಮಲ್ಲಿದ್ದ ಜೋಳವನ್ನು ಮಾರಿದರು. ವ್ಯಾಪಾರಗಾರರು ಬ್ಯಾಂಕಿನಿಂದ ಹಣವನ್ನು ತಂದು ಬಂಡವಾಳ ಹೂಡಿ ಜೋಳವನ್ನು ಕೊಂಡರು. ಮುಂದೆ ಇದರಿಂದ ರೊಕ್ಕ ಸಂಪಾದನೆ ಮಾಡಬಹುದೆಂದು ಹೀಗೆ ಮಾಡಿದರು. ಹೀಗೆ ದಾಸ್ತಾನು ಮಾಡಿದ್ದರ ನಲುವಾಗಿ ಜೋಳದ ಬೆಲೆ 40 ರೂಪಾಯಿ ಇದ್ದುದು 45 ರೂಪಾಯಿ ಆಗಿ 47 ರೂಪಾಯಿ ಆಯಿತು. ಈ ರೀತಿ ಆದುದರ ದೆಸೆಯಿಂದ 25 ಸಾವಿರ ಚೀಲ ಇದ್ದವರ ಕಡೆ 1000-500 ಚೀಲ ಕೂಡ ಇಲ್ಲದಂತಾಯಿತು. ಬ್ಯಾಂಕಿನವರು ಆಹಾರ ಧಾನ್ಯಗಳ ಮೇಲೆ ಹಣ ಕೊಡುವುದನ್ನು ಸರ್ಕಾರ ನಿಲ್ಲಿಸಬೇಕು. ಸರ್ಕಾರ ಇದರ ಕಡೆಗೆ ಲಕ್ಷ್ಯ ಕೊಡಬೇಕು ಮತ್ತು ಬಿಜಾಪುರ ಜಿಲ್ಲೆಯ ಜನಗಳಿಗೆ ಜೋಳ ಸಿಕ್ಕುವ ಹಾಗೆ ಮಾಡಬೇಕು.

ಬಿಜಾಪುರ ಜಿಲ್ಲೆಯೊಳಗೆ ಮೇ ತಿಂಗಳಿನಲ್ಲಿ ಮಳೆ ಬರುತ್ತದೆ. ಆಗ ಬಿತ್ತನೆ ನಡೆಯುತ್ತದೆ. ಮೇ ಮತ್ತು ಜೂನ್ ತಿಂಗಳಿನಲ್ಲಿ ಮಳೆ ಇಲ್ಲದ್ದರಿಂದ ಬಿತ್ತನೆಗೆ ಅನುಕೂಲವಾಗಲಿಲ್ಲ; ಇದಲ್ಲದೆ ದನಗಳಿಗೆ ಮೇವು ಸಿಕ್ಕದೆ ಬಹಳ ತೊಂದರೆಯಾಗಿದೆ. ಒಂದು ಗಾಡಿ ಹುಲ್ಲಿಗೆ 35 ರೂಪಾಯಿ ಆಗಿದೆ. 35

ರೂಪಾಯಿ ಕೊಟ್ಟು ನಾನು ನಮ್ಮ ಮನೆಗೆ ಒಂದು ಗಾಡಿ ಹುಲ್ಲು ತೆಗೆದುಕೊಂಡೆ. ಅದು ಎಂಟು ದಿನಗಳಿಗೂ ಆಗಲಿಲ್ಲ. ಹೀಗಿರುವುದರಿಂದ ದನಗಳಿಗೆ ಮೇವನ್ನು ಕೂಡ ಪೂರೈಕೆ ಮಾಡಿಕೊಡಬೇಕು.

ನಾನು ಆಲಮಟ್ಟಿಯಿಂದ ಬಾಗೇವಾಡಿಗೆ ಮೋಟಾರು ಕಾರಿನಲ್ಲಿ ಬಂದಾಗ ನೂರಾರು ಜನ ನನ್ನ ಕಾರನ್ನು ಸುತ್ತುಗಟ್ಟಿ ಹೊಟ್ಟೆಗೆ ಇದ್ದರೆ ಕೊಡಿ, ಕೆಲಸ ಕೊಡಿ, ನಮಗೆ ತಿನ್ನುವುದಕ್ಕೆ ಜೋಳ ಇಲ್ಲ, ಗೋಧಿಯನ್ನಾದರೂ ಕೊಡಿ ಎಂದು ಕೇಳಿದರು. ವಿಜಾಪುರ ಜಿಲ್ಲೆಯಲ್ಲ ಬಹಳ ಶೋಚನೀಯವಾದ ಪರಿಸ್ಥಿತಿ ಇದೆ. ನಮ್ಮ ಜಿಲ್ಲೆಯ ಕಡೆಗೆ ಲಕ್ಷ್ಯಕೊಟ್ಟು ಗೋಧಿ ಮತ್ತು ಅಕ್ಕಿಯನ್ನು ಸಪ್ಲೈಮಾಡಿರಿ. ಇದಲ್ಲದೆ ಬರಗಾಲ ಇರುವ ಕಾರಣ ತುರ್ತು ಕೆಲಸಗಳನ್ನು ತೆಗೆದುಕೊಳ್ಳಿರಿ, ಬಾವಿ ಕೆಲಸ ತೆಗೆದುಕೊಳ್ಳಿ, ರಸ್ತೆ ಕೆಲಸ ತೆಗೆದುಕೊಳ್ಳಿ.

ರೈತರಿಗೆ ತಕಾವಿ ಸಾಲಗಳನ್ನು ಕೊಟ್ಟು ಅವರು ಬಾವಿಗಳನ್ನು ತೆಗೆಯಲು ಅನುಕೂಲ ಮಾಡಬೇಕು. ಬಾಗೇವಾಡಿ ತಾಲ್ಲೂಕಿನಲ್ಲಿ ಬಾವಿಗಳಿಗಾಗಿ 600 ಅರ್ಜಿಗಳು ಬಂದಿದೆ. ಬಿ.ಡಿ.ಓ. ಅವರಿಗೆ ಆರು ಸಾವಿರ ರೂಪಾಯಿ ಬಂದಿದೆ, ರಾಷ್ಟ್ರೀಯ ವಿಸ್ತರಣಾ ಯೋಜನೆಗೆ ಮೂರು ಸಾವಿರ ರೂಪಾಯಿ ಬಂದಿದೆ. ಇದರಲ್ಲಿ 60 ಬಾವಿಗಳಿಗೆ ನಕಿತ ಹಣ ಕೊಡುವುದಕ್ಕೆ ಶಕ್ಯವಾಗಿಲ್ಲ.

ಇಂಥ ಪರಿಸ್ಥಿತಿಯಲ್ಲಿ ಎಲ್ಲೆಲ್ಲಿ ಯಾವ ಯಾವ ಕೆಲಸ ಮಂಜೂರು ಮಾಡಲಾಗಿದೆಯೋ ಅಂಥ ಕೆಲಸ ಮಾಡಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ರೆವಿನ್ಯೂ ಮಂತ್ರಿಗಳಿಗೆ ಇನ್ನೊಂದು ವಿನಂತಿ ಮಾಡಿಕೊಳ್ಳುತ್ತೇನೆ. ವಿಜಾಪುರ ಜಿಲ್ಲೆಯಲ್ಲಿ ಮೇಲಿಂದ ಮೇಲೆ ಬರಗಾಲ ಪರಿಸ್ಥಿತಿ ಇದ್ದೇ ಇರುತ್ತದೆ. ಅದುದರಿಂದ ಇದನ್ನು ತಡೆಗಟ್ಟುವುದಕ್ಕೆ ವಿಜಾಪುರ ಜಿಲ್ಲೆಯಲ್ಲಿ ನೀರಾವರಿ ಬಾವಿಗಾಗಿ ಹೆಚ್ಚು ತಗಾಯಿ ಸಾಲ ಕೊಡಿಸಬೇಕು. ಇದಲ್ಲದೆ ರೈತರಿಗೆ ಪಂಪು ಸೆಟ್ಟುಗಳನ್ನು ಒದಗಿಸಬೇಕು. ಪಂಪು ಸೆಟ್ಟುಕೊಟ್ಟ ಮೇಲೆ ಇಲೆಕ್ಟ್ರಿಸಿಟಿ ಒದಗಿಸಬೇಕಾಗುತ್ತದೆ. ಬಾಗಲಕೋಟೆವರೆಗೆ ಇಲೆಕ್ಟ್ರಿಸಿಟಿ ಬಂದಿದೆ. ನಮ್ಮ ಬಾಗೇವಾಡಿಗೆ ಇನ್ನೂ ಬಂದಿಲ್ಲ. ಪಂಪುಸೆಟ್ಟು ಇಲೆಕ್ಟ್ರಿಸಿಟಿ ಒದಗಿಸಿದರೆ ವಿಜಾಪುರ ಒಂದೇ ಜಿಲ್ಲೆಯಲ್ಲಿ ಇಡೀ ಮೈಸೂರು ರಾಜ್ಯಕ್ಕೆ ಸಾಕಾಗುವಷ್ಟು ಜೋಳ ಬೆಳೆಯಬಹುದು. ವಿಜಾಪುರ ಜಿಲ್ಲೆ ಮೊದಲಿನಿಂದ ಬರಗಾಲದ ತವರೂರು ಎಂದು ಹೆಸರುವಾಸಿಯಾಗಿದೆ. ಒಳ್ಳೆಳ್ಳ ಭೂಮಿ ಇದೆ. ಆದರೆ ನೀರಿನ ಸೌಕರ್ಯ ಇಲ್ಲ. ಆದುದರಿಂದ ಕೆರೆ ಬಾವಿ ಕೆಲಸ ತೆಗೆದುಕೊಳ್ಳಲೇಬೇಕೆಂದು ವಿನಂತಿ ಮಾಡುತ್ತೇನೆ. ನಮ್ಮ ತಾಲ್ಲೂಕಿನೆಲ್ಲ ಒಂದು ಕೆರೆಯ ಕೆಲಸ ಇದೆ. ಈ ಕೆರೆಯಿಂದ 200 ಎಕರೆ ಭೂಮಿ ನೀರಾವರಿಯಾಗುತ್ತದೆ. ಇದನ್ನು ಬೇಗನೆ ತೆಗೆದುಕೊಳ್ಳುವುದು ಅಗತ್ಯ. ಒಟ್ಟಿನಲ್ಲಿ ಬರಗಾಲ ಪ್ರದೇಶವೆಂದು ಪ್ರಸಿದ್ಧವಾದ ವಿಜಾಪುರ ಜಿಲ್ಲೆಯಲ್ಲಿ ಕೆರೆ ಬಾವಿ ಕೆಲಸಗಳ ಕಡೆ ಹೆಚ್ಚೆಚ್ಚು ಗಮನಕೊಟ್ಟು ಜನರ ಕಷ್ಟ ಪರಿಹರಿಸಬೇಕು. ಕೊನೆಯದಾಗಿ ವಿಜಾಪುರ ಜಿಲ್ಲೆಯ ಕಡೆ ಹೆಚ್ಚು ಗಮನಕೊಡಬೇಕೆಂದು ಮತ್ತೊಮ್ಮೆ ಹೇಳಿ ಅಭಾವ ಪರಿಸ್ಥಿತಿಯ ಬಗ್ಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತು ಮುಗಿಸುತ್ತೇನೆ.

†ಶ್ರೀ ವಿ. ಎಂ. ದೇವ್ (ಗುಬ್ಬಿ).—ಮಾನ್ಯ ಅಧ್ಯಕ್ಷರೇ, ನಮ್ಮ ತಾಲ್ಲೂಕಿನ ವಿಷಯದ ಬಗ್ಗೆ ನಾಲ್ಕು ಮಾತು ಹೇಳಲು ಬಯಸುತ್ತೇನೆ. ಬಿದರೆ, ಗೌರೀಪುರ, ಚಾಲೂರು, ಕನಬಾ ರಿಲೀಫ್ ವರ್ಕ್ಸ್ ಮಂಜೂರು ಮಾಡಿದ್ದರು. ಆದರೆ ಏನೋ ರಾಜಕೀಯ ನಡೆದು ಕೆಲಸ ನಿಂತುಹೋಯಿತು. ಇಂಥ ಕೆಲಸ ನಿಲ್ಲದೆ ಸ್ಯಾಂಕ್ಷನ್ ಆದ ಕೆಲಸಗಳಿಗೆ ಪ್ರಾಯಾರಿಟಿ ಕೊಟ್ಟು ಕೆಲಸ ಮಾಡಿಸಬೇಕು. ಜನರಿಗೆ ತಾತ್ಕಾಲಿಕ ಪರಿಹಾರ ಕೊಡಬೇಕಾದುದು ಅತ್ಯಗತ್ಯವಾಗಿದೆ. ಈ ದೃಷ್ಟಿಯಿಂದ ಕಂದಾಯ ಪೂರ್ತಿ ವಸೂಲ್ಮಾಡದೆ ರೆಮಿಷನ್ ಕೊಡಬೇಕು. ಮಧ್ಯಮ ಅವಧಿ ಸಾಲ ದೀರ್ಘಾವಧಿ ಸಾಲ ಕೊಟ್ಟು ಒಂದು ನಿರ್ದಿಷ್ಟವಾದ ಕೆಲಸ ಕೈಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಫೇರ್ ಪ್ರೈಸ್ ಡಿಪೋ ಪ್ರಾರಂಭಿಸಬೇಕು ಎಂದು ಸಲಹೆ ಮಾಡುತ್ತೇನೆ. ಶಾಶ್ವತ ಪರಿಹಾರ ಕಾರ್ಯ ನರಿಯಾಗಿ ನಡೆಯುವಂತೆ ಬಂದೋಬಸ್ತ್ ಮಾಡಬೇಕಾದುದು ಅಗತ್ಯ. ಸಾಗುವಳಿಗೆ ಯೋಗ್ಯವಾದ ಭೂಮಿ ನೀರಾವರಿಯಾಗಬೇಕು ಇದಲ್ಲದೆ ಒಂದು ಸಂಸಾರಕ್ಕೆ ಬೇಕಾಗುವಷ್ಟು ಹಿಡುವಳಿ ಒದಗಿಸಬೇಕು. ಕೊಟ್ಟಿರತಕ್ಕಂಥ ಜಮೀನು ಪರಭಾರೆಯಾಗದಂತೆ ಸೂಕ್ತ ಕ್ರಮ ತೆಗೆದುಕೊಂಡು ಬೆಳೆ ಹೆಚ್ಚು ಬರುವ ಹಾಗೆ ಆಗಬೇಕು.

ಒಟ್ಟಿನಲ್ಲಿ ನನ್ನ ಸಲಹೆಗಳು ಏನೆಂದರೆ ತಕ್ಷಣ ಫೇರ್‌ಪ್ರೈಸ್ ಡಿಪೋ ಪ್ರಾರಂಭ ಮಾಡಬೇಕು ಕೆರೆಗಳ ರಿಪೇರಿ ಕೆಲಸ ತೆಗೆದುಕೊಳ್ಳಬೇಕು, ಕಂದಾಯ ವಸೂಲಿ ಮಾಡುವುದರಲ್ಲಿ ರಿಯಾಯಿತಿ ಕೊಡಬೇಕು, ರೈತರಿಗೆ ಕೊಟ್ಟಿರತಕ್ಕಂಥ ಸಾಲದ ವಿಚಾರದಲ್ಲಿ ಕಂತು ವಸೂಲ್ಮಾಡುವುದನ್ನು ಎರಡು ಮೂರು ವರ್ಷ ಮುಂದಕ್ಕೆ ಹಾಕಿ ನದ್ಯಕ್ಕೆ ಈ ವರ್ಷ ಬಿಡ್ಡಿ ಆಷ್ಟನ್ನೇ ತೆಗೆದುಕೊಳ್ಳಬೇಕು. ತಾತ್ಕಾಲಿಕ ಪರಿಹಾರ ಕೊಡುವುದಲ್ಲದೆ ಶಾಶ್ವತವಾದ ಪರಿಹಾರದ ಬಗ್ಗೆ ಯೋಚನೆ ಮಾಡುವುದು ಅವಶ್ಯಕ. ಸಾಗುವಳಿಗೆಗೆ ಯೋಗ್ಯವಾದ ಭೂಮಿ ನೀರಾವರಿಯಾಗುವಂತೆ ಮಾಡಬೇಕು. ಇದಕ್ಕೆ ಸೂಕ್ತ ಕ್ರಮ ತೆಗೆದುಕೊಂಡು ನರಿಯಾಗಿ ಬಂದೋಬಸ್ತ್ ಮಾಡಬೇಕಾದುದು ಅಗತ್ಯ. ಒಂದು

(ಶ್ರೀ ಎಂ. ಎ. ದೇವ್)

ಸಂಸಾರಕ್ಕೆ ಬೇಕಾಗುವ ಹಿಡುವಳಿ ಜಮೀನು ಒದಗಿಸಬೇಕು. ಜಮೀನು ಪ್ರಭಾವಶಾಲಿಯಾಗದಂತೆ ನೋಡಿಕೊಳ್ಳಬೇಕು. ಆಹಾರ ಧಾನ್ಯಗಳಿಗೆ ಸರಿಯಾದ ಬೆಲೆ ರೈತನಿಗೆ ದೊರೆಯಬೇಕು. ರೈತನಿಗೆ ಸಾಗುವಳಿಗೆ ಅವಶ್ಯಕವಾಗಿ ಬೇಕಾಗುವ ಉಪಕರಣ ಅಂದರೆ ಇಂಪ್ಲೆಮೆಂಟ್ಸ್ ಆಫ್ ಪ್ರೊಡಕ್ಷನ್ ಸರಿಯಾಗಿ ಸುಲಭವಾಗಿ ಸಿಕ್ಕುವ ಹಾಗೆ ಆಗಬೇಕು. ನೀರಾವರಿ ಅಭಿವೃದ್ಧಿಪಡಿಸಲು ಕೆರೆ ಬಾವಿಗಳ ಕೆಲಸ ಡಿಪಾರ್ಟ್‌ಮೆಂಟಿನವರು ಮಾಡಬೇಕು. ರೈತನಿಗೆ ಕೆಮಿಕಲ್ ಫರ್ಟಿಲೈಜರ್ಸ್ ಬೇಕಾಗುತ್ತದೆ. ಅದು ಪ್ರೈವೇಟ್ ಸೆಕ್ಟರಿನಲ್ಲಿ ಸರಿಯಾಗಿ ಉತ್ಪಾದನೆಯಾಗುವುದಿಲ್ಲವಾದ್ದರಿಂದ ಪಬ್ಲಿಕ್ ಸೆಕ್ಟರಿನಲ್ಲಿ ಅದನ್ನು ತಯಾರಿಸಿ ಒದಗಿಸುವ ವ್ಯವಸ್ಥೆಯಾಗಬೇಕು. ಓವರ್ ಹೆಡ್ ಇರಿಗೇಷನ್ ಮಾಡಬೇಕೆಂಬ ಹಪ್ಪಾನ ಇಟ್ಟುಕೊಂಡಿರುವುದನ್ನು ಬಿಟ್ಟುಬಿಡಬೇಕು. ಯಾಕಂದರೆ 50 ರೂಪಾಯಿ ಕೆಲಸಕ್ಕೆ 100 ರೂಪಾಯಿ ಖರ್ಚಾಗುತ್ತದೆ. ಒಂದು ವರ್ಷದಲ್ಲಿ ಆಗುವ ಕೆಲಸ ಐದು ವರ್ಷದಲ್ಲಿ ಆಗುತ್ತದೆ. ಮಂತ್ರಿಗಳು ಪೆನ್‌ಶನ್ ಕೇಳುವ ಅಭ್ಯಾನ ಎಲ್ಲಿ ಕಲಿತುಕೊಳ್ಳುತ್ತಾರೋ ಎಂಬ ಭಯ ಬಂದಿದೆ. ಅವರು ದಯವಿಟ್ಟು ಪೆರ್ಷ್ ಕೇಳುವುದನ್ನು ಬಿಡಬೇಕು. ಇಷ್ಟು ಹೇಳಿ ನನ್ನ ಮಾತು ಮುಗಿಸುತ್ತೇನೆ.

†ಶ್ರೀ ಎ. ಎಸ್. ಪಾಟೀಲ (ನರಗುಂದ).—ಮಾನ್ಯ ಅಧ್ಯಕ್ಷರೆ, ಈಗ ಈ ಸಭೆಯ ಮುಂದೆ ಅಭಾವ ಪರಿಸ್ಥಿತಿಯಿಂದ ನಮಗೆ ತಲೆದೋರಿದ ಕೆಲವು ಕಷ್ಟಗಳನ್ನು ಹೇಗೆ ನಿವಾರಣೆ ಮಾಡಬೇಕು ಮತ್ತು ಏರಿದ ಬೆಲೆಗಳಲ್ಲಿ ಜನರಿಗೆ ಯೋಗ್ಯವಾದ ಧಾರಣೆಗೆ ಕಾಳುಕಡಿ ಸಿಗುವಹಾಗೆ ಮಾಡಬೇಕು ಎಂಬುದರ ಬಗ್ಗೆ ಚರ್ಚೆ ನಡೆದುದರಲ್ಲಿ ಭಾಗವಹಿಸಿ, ಕೆಲವು ವಿಚಾರಗಳನ್ನು ಇಡುವ ಬಯಸುತ್ತೇನೆ.

ಮೊದಲನೆಯದಾಗಿ, ಈ ಅಭಾವಪರಿಸ್ಥಿತಿ ಕಳೆದ ಐದಾರು ವರ್ಷದಿಂದದೇ ಅಲ್ಲ, ಅದಕ್ಕಿಂತ ಮುಂಚಿನಿಂದಲೂ ಸಹಿತ ನಮ್ಮ ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲೂ ಹಬ್ಬಿದ್ದು ಗೊತ್ತಿದೆ. ಇವುಗಳಲ್ಲಿ ಮುಖ್ಯವಾಗಿ ಬಿಜಾಪುರ, ಧಾರವಾಡ, ಚಿತ್ರದುರ್ಗ, ಕೋಲಾರಗಳಲ್ಲಿ ಇದ್ದದ್ದು, ಈಗ ಹೆಚ್ಚು ವ್ಯಾಪಕವಾಗಿ ಬರಗಾಲ ಬಂದಿದೆ. ಈ ವಿಚಾರದಲ್ಲಿ ರೆವಿನ್ಯು ಶಾಖೆಯಾಗಲಿ ಅಥವಾ ಸರಕಾರವಾಗಲಿ ಮುಂಜಾಗ್ರತೆ ಕ್ರಮಗಳನ್ನು ತೆಗೆದುಕೊಂಡದ್ದು ಹೆಚ್ಚಾಗಿ ನಮಗೆ ಕಂಡು ಬರುವುದಿಲ್ಲ. ಅಭಾವ ಪರಿಸ್ಥಿತಿ ಕುರಿತು ನಾವು ಅನೇಕ ಸಭೆಗಳಲ್ಲಿ ಏನೇನು ಮುಂಜಾಗ್ರತೆ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಎಷ್ಟೋ ವಿಷಯಗಳನ್ನು ಮುಂಡನೆ ಮಾಡಿದ್ದರೂ, ಅದಕ್ಕೆ ಬೇಕಾದ ಮುಂಜಾಗ್ರತೆ ಕ್ರಮ ತೆಗೆದುಕೊಂಡಿಲ್ಲವೆನ್ನುವುದು ಸಹಜವಾಗಿ ಓಡೆದು ಕಾಣುತ್ತಿದೆ.

ನಮ್ಮ ಭಾಗದೊಳಗೆ ಅಣೆವಾರಿ ನಡೆದದ್ದು ನೋಡಿದರೆ ದುಃಖವಾಗುತ್ತದೆ. ಧಾರವಾಡ ಜಿಲ್ಲೆಯೊಳಗೆ ಎಲ್ಲೆಲ್ಲ ಬೆಳೆಯಾಗಿಲ್ಲವೆನ್ನುವುದನ್ನು ನಮ್ಮ ರೆವಿನ್ಯು ಮಂತ್ರಿಗಳ ಎದುರಿಗೆ ಹೇಳಿದ್ದೇವೆ. ಕೆಲವರು ಏನೂ ಬೆಳೆದಿಲ್ಲ, ಪೂರ್ಣ ಪೆಟ್ಟು ಬಿದ್ದಿದೆ, ಬೆಳೆದಿದ್ದವರಿಗೂ ಎಷ್ಟೋ ಪೀಕು ಪೂರ್ಣ ತೆಟ್ಟುಹೋಯಿತು. ಅದನ್ನು ಅನೇಕ ರೀತಿಯಿಂದ ಹೇಳಿದ್ದೇವೆ. ಅವರೂ ಸ್ಥಳದ ಅಧಿಕಾರಿಗಳಿಗೆ ಎಷ್ಟೋರೀತಿಯಿಂದ ತಿಳಿಸಿದ್ದರು. ಆದರೆ ಸ್ಥಳೀಯ ಅಧಿಕಾರಿಗಳು ಅವರ ಸೂಚನೆಗೆ ಏನೂ ಗಮನ ಕೊಡಲಿಲ್ಲ. ಎಲ್ಲೆಲ್ಲಿ ಬೆಳೆಯಾಗಿಲ್ಲವೋ ಅಲ್ಲಿ ಹೆಚ್ಚು ಅಣೆವಾರಿ ಮಾಡಿ, ಸರ್ಚಾರ್ಜು ವಗೈರೆ ಹೆಚ್ಚು ವಸೂಲು ಮಾಡಿದ್ದಾರೆ: ಅದು ನಮ್ಮ ಕಣ್ಣು ಮುಂದಿದೆ. ಇದರಿಂದ ಅನೇಕ ಜನರಿಗೆ ಬಹಳ ತೊಂದರೆಯಾಗಿದೆ. ಈಗಿನ ದುರವಸ್ಥೆಯಲ್ಲಿ ತಕಾವಿ ಸಾಲವನ್ನು ಎಷ್ಟೋಜನರಿಗೆ ಹಿಂದಕ್ಕೆ ಕೊಡಲಾಗದೆ. ಅವರ ಜಮೀನು ಹರಾಜಿಗೆ ಬಂದಿದೆ. ಮಾನ್ಯ ಮಂತ್ರಿಗಳು ಈ ಸಾಲದ ವಸೂಲಿ ಬಗ್ಗೆ ಕೆಲವು ಹುಕುಮುಗಳನ್ನು ಕಳುಹಿಸಿದ್ದೇವೆಂದು ಹೇಳಿದರು. ಆ ಹುಕುಮನ್ನು ಯಾವ ತರಹ ಕಳುಹಿಸಿದ್ದಾರೆ. ಅನ್ನುವುದನ್ನು ತಿಳಿಸಲಿಲ್ಲ; ನಾವು ಏನನ್ನಾದರೂ ಕೇಳಿದರೆ ಸ್ಪಷ್ಟ ಮಾಡುವುದಿಲ್ಲ. ಸರಕಾರದ ಧೋರಣೆ ಸ್ಪಷ್ಟವಿರಬೇಕು, ಅದು ನಮಗೆ ತಿಳಿಯಬೇಕು. ಮುಂಬಯಿ ಸರಕಾರ ಡೊಳಗೆ ಇದ್ದಾಗ ಅಲ್ಲಿ ಬರಗಾಲ ಪರಿಸ್ಥಿತಿಯಿಂದ ಬಹಳ ತೊಂದರೆ ಪಡುತ್ತಿದ್ದರು. ಆ ವೇಳೆಗೆ ರೆವಿನ್ಯು ಅಧಿಕಾರಿಗಳಿಗೆ ಆ ವರ್ಷ ಯಾವ ಎಕ್ಸಿಕ್ಯೂಶನ್ ಪ್ರೊಸೀಡಿಂಗ್ಸು ತೆಗೆದುಕೊಳ್ಳಬಾರದು ಎಂದು ಸ್ಪಷ್ಟವಾದ ಒಟ್ಟು ಹುಕುಂ ಸರಕಾರ ಕೊಟ್ಟಿತು. ಅದೇರೀತಿ ನೀವೂ ಏಕೆ ಮಾಡಬಾರದು? ಇಲ್ಲದಿದ್ದರೆ ಜನರು ಬಹಳ ತೊಂದರೆ ಪಡುತ್ತಾರೆ. ಇನ್ನೊಂದು ವರ್ಷ ಯಾವ ಹಣವನ್ನೂ ರೈತರಿಂದ ವಸೂಲುಮಾಡಬಾರದು ಎಂದು ರೆವಿನ್ಯು ಅಧಿಕಾರಿಗಳಿಗೆ ತಿಳಿಸಬೇಕು; ಅದನ್ನು ಮುಂದಿನ ವರ್ಷ ವಸೂಲು ಮಾಡಬಹುದು.

ಈಗ ಅಗ್ರಿಕಲ್ಚರಲ್ ಕ್ರೆಡಿಟ್ ಯಾವ ತರಹ ಇದೆ ಅನ್ನುವುದು ನನಗೆ ಗೊತ್ತಿರುವ ವಿಷಯ. ವ್ಯವಸಾಯ ಸಂಬಂಧವಾದ ಬೆಳೆ ಪೂರ್ಣ ಹಾಳಾಗಿ ಹೋಗಿದೆ. ರೈತರಿಗೆ ಸಹಕಾರ ಸಂಘಗಳಲ್ಲಿ ಸಾಲ ಕೊಟ್ಟಿದ್ದಾರೆ, ಆದರೆ ಬಡ್ಡಿ ಸಹ ಕೊಟ್ಟಿಲ್ಲ. ಅವರಿಗೆ ಸಾಲ ಕೊಡುವುದಿಲ್ಲ. ನಿಮ್ಮ ತಕಾವಿ ಲೋನು ಗ್ಯಾರಂಟಾಗಿ, ಮಿನಿಸ್ಟ್ರಿಂದ ಕೆಳಗಡೆ ಡಿವಿಜನಲ್ ಕಮಿಶನರಿಗೆ ಹೋಗಿ, ಅಲ್ಲಿಂದ ಕ್ರಮೇಣ

ತಾಲ್ಲೂಕಿಗೆ ಹೋಗಬೇಕಾದರೆ ಒಂದುವರೆ ತಿಂಗಳಾದರೂ ಹಿಡಿಯುತ್ತದೆ. 28 ಲಕ್ಷ ರೂಪಾಯಿ ಬರಗಾಲ ಪರಿಹಾರಕ್ಕೆ ಕಳುಹಿಸಿ ಕೊಟ್ಟಿದೆ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಅದು ಹೋಗಿ ರೈತನನ್ನು ಮುಟ್ಟ ಬೇಕಾದರೆ 4 ತಿಂಗಳಾಗುತ್ತದೆ, ಅದು ಸಹಜವಾಗಿ ಗೊತ್ತಿದೆ. ಇದನ್ನು ನಾಲ್ಕಾರು ವರ್ಷಗಳ ಅನುಭವದಿಂದ ಹೇಳುತ್ತಿದ್ದೇನೆ: ಈ ಪರಿಹಾರ 4 ತಿಂಗಳೊಳಗೆ ಸಿಗುವುದಿಲ್ಲ. ನೀವು ಎಷ್ಟೇ ತ್ವರಿತಗೊಳಿಸಬೇಕೆಂದರೂ, ರೆವಿನ್ಯೂ ಇರಾಖೆ ಪದ್ಧತಿ ಹಾಗೆ ಬೆಳೆದು ಬಂದಿದೆ. ಬ್ರಿಟಿಷರ ಕಾಲದಲ್ಲಿ ಅಧಿಕಾರಿಗಳು ಜನರ ಮೇಲೆ ಜೋರುಮಾಡಿ, ಪ್ರಭಾವ ಬೀರಿ ಕೆಲಸ ಮಾಡುತ್ತಿದ್ದರು. ಆ ಮನೋಭಾವ ಅವರಿಂದ ಇನ್ನೂ ದೂರವಾಗಿಲ್ಲ. ಆದ್ದರಿಂದ ಅಧಿಕಾರಿಗಳಿಗೆ ಅಭಿವೃದ್ಧಿ ಕಾರ್ಯಗಳಲ್ಲಿ ಮನಸ್ಸು ಹೋಗುವುದಿಲ್ಲ. ಈ ಅಧಿಕಾರಿಗಳಲ್ಲಿ ಈ ಗುಣ ಸಹಜವಾಗಿ ಬಂದು ಬಿಟ್ಟಿದೆ. ಒಂದು ಸಾರಿ ಯೋಚಿಸಿದರೆ ಈ ರೆವಿನ್ಯು ಖಾತೆ ಇರಬೇಕೋ ಬೇಡವೊ ಅನ್ನಿಸಿ, ಈ ಇರಾಖೆ ಒಂದು ದೊಡ್ಡ ಸಮಸ್ಯೆಯಾಗಿದೆ. ಈ ರೆವಿನ್ಯು ಖಾತೆಯಿಂದ ಅಭಿವೃದ್ಧಿ ಕೆಲಸಗಳು ಏನೂ ಆಗುವುದಿಲ್ಲ. ತಕಾವಿ ಲೋನು ವಸೂಲುಮಾಡಿ ಅಂದರೆ ರೆವಿನ್ಯು ಅಧಿಕಾರಿಗಳು ಜನರಿಗೆ ತ್ರಾಸು ಕೊಟ್ಟು ಬಹಳ ಜೋರಿನಿಂದ ಮಾಡುತ್ತಾರೆ. ಇವರು ಜನಗಳಿಗೆ ಇರುವ ತೊಂದರೆಯನ್ನು ಏನೂ ನಿವಾರಣೆ ಮಾಡಿಲ್ಲ. ಇವರಿಂದ ಮಾಡಲಿಕ್ಕೆ ಸಾಧ್ಯವೂ ಇಲ್ಲ ಎಂದು ಸಹಜವಾಗಿ ಕಾಣುತ್ತಿದೆ. ಮಾನ್ಯ ರೆವಿನ್ಯು ಮಂತ್ರಿಗಳಿಗೆ ಇದೆಲ್ಲಾ ಗೊತ್ತಿದೆ: ಗೊತ್ತಿದ್ದರೂ ಏಕೋ ಅವರು, ನಮ್ಮ ವ್ಯವಸಾಯಗಾರರ ಮೇಲೆ ಪ್ರೀತಿ ಇದ್ದವರಾದರೂ, ಆಸಕ್ತಿ ವಹಿಸದೆ ನುಮ್ಮನೆ ಕೂತುಬಿಟ್ಟಿದ್ದಾರೆ; ಅವರ ತೊಂದರೆ ಏನು ಅನ್ನುವುದು ಗೊತ್ತಾಗಲಿಲ್ಲ. ಅಗ್ರಿಕಲ್ಚರಿಸ್ ಕ್ರೆಡಿಟ್ ಎಲ್ಲಾ ಸಹಕಾರ ಸಂಘಗಳಿಂದಲೂ ಸಿಗುವುದಿಲ್ಲ. ತಕಾವಿ ಲೋನು 10-20-50 ಸಿಗುತ್ತದೆ. ಬಡವರಿಗೆ ಬೇಕಾದ ಧನಸಹಾಯ ಯಾವರೀತಿಯಿಂದ ಮಾಡಬೇಕು ಅನ್ನುವುದನ್ನು ಮಂತ್ರಿ ಮಂಡಳದವರು ಪೂರ್ಣ ವಿಚಾರ ಮಾಡಬೇಕು. ರೊಕ್ಕ ಕೊಡುವುದನ್ನು ಕೋ ಅಪರೇಟೀವ್ಸ್ ಮಾರಿಫತ್ತು ಕೊಡಬೇಕು. ನಾಲ್ಕೈದು ವರ್ಷದಿಂದ ತಕಾವಿ ಸಾಲ ವಸೂಲಾಗಿಲ್ಲ, ಅವರು ಕೊಡುವ ಸ್ಥಿತಿಯಲ್ಲೂ ಇಲ್ಲ. ಈ ತರಹ ಪರಿಸ್ಥಿತಿ ಉಂಟಾಗಿದೆ.

ರಿಕವರೀಸ್ ಬಗ್ಗೆ ನಮ್ಮ ಅನ್ನದಾನಪ್ಪನವರೂ ಹೇಳಿದರು. ಕೆಲವು ಕಾಂಗಾರಿಗಳನ್ನು ಇದರೊಳಗೆ ಕೊಟ್ಟಿದ್ದಾರೆ. ಆದರೆ ಜನರಿಗೆ ಕೂಲಿ ಸಿಗುವುದಿಲ್ಲ. ವಿಚಾರ ಮಾಡಿದರೆ, ಬಹಳ ಕಡೆ ಅನೇಕ ರಸ್ತೆಗಳು ಹಾಳಾಗಿಹೋಗಿವೆ. ಮಣ್ಣು ತುಂಬಿದಂಥ ರಸ್ತೆಗಳು ಮಳೆಬಂದ ಮೇಲೆ ತೇಲಿ ಹೋಗಿವೆ. ಆದ್ದರಿಂದ ಆ ಸ್ಕೀಮು ಸುಧಾರಣೆ ಮಾಡುವ ವ್ಯವಸ್ಥೆ ಮಾಡಬೇಕು ಎಂಬುದಾಗಿ ಏನಂತಿ ಮಾಡಿಕೊಳ್ಳುತ್ತೇನೆ. ಕೆಲವು ರಸ್ತೆಗಳನ್ನು ಮಾಡುವುದೇ ಅಲ್ಲದೆ, ಕೆರೆಗಳನ್ನೂ ಸುಧಾರಣೆ ಮಾಡಬೇಕು. ಚಿಕ್ಕ ನರಗುಂದದಲ್ಲಿ ಒಂದು ಖಡಿ ರಸ್ತೆ ಇತ್ತು; ಹೋದ ವರ್ಷ ಅಲ್ಲೆ ಕಲ್ಲು ಒಡೆದು ಒಂದೂವರೆ ಲಕ್ಷ ರೂಪಾಯಿ ಕೆಲಸ ಒಂದು ವಾರದೊಳಗೆ ಆಗಿದೆ. ಸ್ಥಳೀಯ ಅಧಿಕಾರಿಗಳು ಈ ಕೆಲಸವನ್ನು ತೆಗೆದುಕೊಳ್ಳಬಾರದು ಎಂದು ಹೇಳಿದರು. ಆಮೇಲೆ ನಾವು ಕಲೆಕ್ಟರವರಲ್ಲಿ ಚರ್ಚೆಮಾಡಿದ ಮೇಲೆ, ತೆಗೆದುಕೊಳ್ಳಬೇಕೆಂದು ನಿರ್ಧಾರಕ್ಕೆ ಬಂದರು, ಒಂದೂವರೆ ಲಕ್ಷ ರೂಪಾಯಿಯ ಖಡಿ ಕೆಲಸ ಮಾಡಿದರು. ಇಂಥ ಕೆಲಸ ಹೆಚ್ಚಿಗೆ ಕೊಡಬೇಕು; ಎಂದು ಏನಂತಿ ಮಾಡಿಕೊಳ್ಳುತ್ತೇನೆ.

ಇಲ್ಲಿ ಇನ್ನೊಂದು ವಿಚಾರ ಬರುತ್ತದೆ: ನರಗುಂದದಲ್ಲಿ ಅಲ್ಪಸ್ವಲ್ಪ ಮಳೆಯಾಗಿದೆ. ಅದರಿಂದಲೇ ಎಲ್ಲಾ ಬರಗಾಲ ಹೋಯಿತು ಎಂದು ಸ್ಥಳೀಯ ಅಧಿಕಾರಿಗಳು ತಿಳಿದುಕೊಂಡಿದ್ದಾರೆ. ರೋಣ ತಾಲ್ಲೂಕಿನಲ್ಲಿಯೂ ಸ್ವಲ್ಪ ಮಳೆಯಾಗಿದೆ. ಆದರೆ ಹಗೆಯೊಳಗೆ ಕಾಳು ಇಲ್ಲ. ಹೇಟೆಯೊಳಗೆ ಕಾಳೂ ಮಾರುವುದಿಲ್ಲ. ಇಂಥ ಸ್ಥಿತಿ ಕಂಡು ಬರುತ್ತಿದೆ, ಜೋಳ ಸಿಗುತ್ತಿಲ್ಲ. ಆದ್ದರಿಂದ ಗೋಧಿ, ಅಕ್ಕಿ ಹಂಚಬೇಕು. ಅವು ಸಹಕಾರ ಸಂಘಟಗಳ ಮೂಲಕ ವಿತರಣೆಯಾಗಬೇಕು. ಚೀಪ್‌ರೇಟ್ ಡಿಪೊಗಳನ್ನು ತೆಗೆಯಬೇಕು, ಹಳ್ಳಿಯ ಜನರಿಗೆ ಆಹಾರ ಧಾನ್ಯ ತೀವ್ರ ಮುಟ್ಟುವಂತೆ ಕ್ರಮ ತೆಗೆದುಕೊಳ್ಳಬೇಕೆಂದು ಏನಂತಿ ಮಾಡಿಕೊಳ್ಳುತ್ತೇನೆ. ಮಲಪ್ರಭಾ ಕುರಿತು ಅನೇಕ ವಿಷಯಗಳನ್ನು ಹೇಳಿದ್ದಾರೆ. ನೋಡಿದರೆ ಒಂದು ವರ್ಷವಾಯಿತು ಫೌಂಡೇಶನ್ ಸ್ಟೋನು ಹಾಕಿ. ಅದು ಹಾಕಿದ್ದರೂ ಸಹಿತ ಇವತ್ತಿನವರೆಗೂ ಇಷ್ಟೂ ಕೆಲಸವಾಗಿಲ್ಲ. ಒಂದು ತಿಂಗಳಿಗೆ ಸಿಬ್ಬಂದಿ ಮೇಲೆ 50 ಸಾವಿರರೂಪಾಯಿವರೆಗೆ ಖರ್ಚಾಗುತ್ತಿದೆ ಅಲ್ಲಿ. ಕೆಲಸ ಮಾಡಿರುವುದು 25 ಸಾವಿರ ರೂಪಾಯಿನಷ್ಟು. ಬಿಲ್ಡಿಂಗುಗಳನ್ನು ಹಾಕಿದ್ದಾರೆ. ಅವಾಗ ಫೌಂಡೇಶನ್ನು ಹಾಕಿದಷ್ಟು ಇದೆ; ಅಣೆಕಟ್ಟು ಕೆಲಸ ಏನೂ ಆಗಿಲ್ಲ. ಶಾಶ್ವತ ಪರಿಹಾರಕ್ಕೆ ನೀರಾವರಿ ಮಹತ್ವದ್ದು. ಅತ್ತಕಡೆ ಹೆಚ್ಚು ಹಣ ಬೇಕು ಅಂತ ಕೇಳಿದ್ದಾರೆ. ಹಣ ಒದಗಿಸಿಕೊಟ್ಟು, ಆದಷ್ಟು ತೀವ್ರ ಮಲಪ್ರಭಾ ಯೋಜನೆಯಾಗಿ. ನೀರಾವರಿ ಕಾರ್ಯಗತವಾಗಬೇಕು ಎಂದು ಬೇಡಿಕೊಂಡು, ಅಧ್ಯಕ್ಷರಿಗೆ ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

2-00 P.M.

† Sri N. O. SAMAJI (Belgaum II).— [In Marathi]

† ಶ್ರೀ ಎ. ಎಸ್. ತಿಮ್ಮಾರೆಡ್ಡಿ (ಪರಾಸ್‌ಗಡ).— ಇವತ್ತು ನಮ್ಮ ಮೈಸೂರು ದೇಶದೊಳಗೆ ಏನಿಲ್ಲ ಎಂದರೂ 8–10 ಜಿಲ್ಲಾದೊಳಗೆ ಅಭಾವ ಪರಿಸ್ಥಿತಿ ಇದೆ. ಆದರೊಳಗೂ ವಿಶೇಷತ: ಬೆಳಗಾಂ ಜಿಲ್ಲಾದೊಳಗೆ 4–5 ತಾಲ್ಲೂಕದೊಳಗೆ ಈ 15 ವರ್ಷದೊಳಗೆ 9 ಸಾರಿ ಬರಬಿದ್ದಿದೆ. ಬರದ ಕಾಮಗಾರಿಗಳನ್ನು ಸರ್ಕಾರದವರು ಮಾಡಿದ್ದಾರೆ ಆದರೂ ಕೂಡ ಒಂದು ವರ್ಷ ತಪ್ಪಿದರೆ ಒಂದು ವರ್ಷ ನಿಶ್ಚಿತ ಬರಬರಲಿಕ್ಕೇ ಬೇಕು ಅಂತಹ ಪರಿಸ್ಥಿತಿಯಲ್ಲಿ ನಮ್ಮ ಬೆಳಗಾಂ ಜಿಲ್ಲಾದೊಳಗೆ 10 ತಾಲ್ಲೂಕುಗಳು ಇವೆ. ಅದರಲ್ಲೂ 5 ತಾಲ್ಲೂಕುಗಳು ಎಂದರೆ ಅಥಣಿ ತಾಲ್ಲೂಕಿನ ಪೂರ್ವ ಭಾಗ, ರಾಮದುರ್ಗ ತಾಲ್ಲೂಕಿನ ಪೂರ್ವ ಭಾಗ, ಸೌಂದತ್ತಿ ತಾಲ್ಲೂಕಿನ ಪೂರ್ವ ಭಾಗ ಇವು ಸರ್ವೇ ಸಾಧಾರಣವಾಗಿ ಮಳೆ ಬಹಳ ಕಡಿಮೆ ಇರತಕ್ಕ ಭಾಗಗಳು. ಇವು ಧಾರವಾಡ ಜಿಲ್ಲೆಯ ನವಲಗುಂದ್ ಮತ್ತು ನರಗುಂದ್ ತಾಲ್ಲೂಕುಗಳಿಗೆ ಹೊಂದಿಕೊಂಡು ಇದ್ದದ್ದರ ದೆಶೆಯಿಂದ ಅಲ್ಲ ಮೇಲಿಂದ ಮೇಲೆ ಬರ ಬರುತ್ತಿದೆ. ಈ ವರ್ಷವೂ ಕೂಡ ಅಷ್ಟೆ. ಬೆಳಗಾವಿ ಜಿಲ್ಲೆಯ ಪಶ್ಚಿಮ ಭಾಗದ 5 ತಾಲ್ಲೂಕುಗಳಲ್ಲಿ ಸಾಧಾರಣ ಮಳೆಯಾಗುವುದರಿಂದ ಪೀಕು ಹೆಚ್ಚುಕಡಮೆಯಾಗುತ್ತದೆ. ಅನೇಕ ಕಡೆ ಸರಿಯಾಗಿ ಪೀಕು ಬಾರದಿದ್ದರೂ ಕೂಡ ಈ ವರ್ಷ ಅಧಿಕಾರಿಗಳು ಇಂದು ಅಲಕ್ಷ್ಯಮಾಡಿ ಪೀಕು ಚರೋ ಬಂದಿದೆ ಎಂದು ಅಣೀವಾರಿ ಹೆಚ್ಚು ಮಾಡಿದ್ದಾರೆ. ತಾಸಿಲ್ದಾರರು ಮತ್ತು ಸರ್ಕಲ್ ಇನ್‌ಸ್ಪೆಕ್ಟರು ಹೀಗೆ ಹೆಚ್ಚು ಮಾಡಿದ್ದನ್ನು ರೆವೆನ್ಯೂ ಮಂತ್ರಿಗಳಿಗೆ ತಿಳಿಸಿ ಅಪೀಲು ಮಾಡಿದೆವು. ಆವರು ಒಳ್ಳೆಯ ಕಳಕಳೆಯಿಂದ ಪ್ರಾಮಾಣಿಕತೆಯಿಂದ ಸರಿಯಾಗಿ ಬರೆದು ಕಳುಹಿಸ ಬೇಕೆಂದು ಆಫೀಸರುಗಳಿಗೆ ಹೇಳಿದರೂ ಸಹ ಹಾಗೆ ಮಾಡಿರುವುದಿಲ್ಲ. ರೆವೆನ್ಯೂ ಮಂತ್ರಿಗಳು ಕಾಂಗ್ರೆಸ್ ಅಧಿವೇಶನಕ್ಕೆ ಹೋದಾಗ ಬೆಳಗಾವಿ ಮೇಲೇ ಹೋದರು. ಆಗ ಅವರನ್ನು ಭೇಟಿ ಮಾಡಿದೆವು. ಆಗಲೂ ಮಂತ್ರಿಗಳು ಒಳ್ಳೆಯ ರೀತಿಯಿಂದ ವರದಿಮಾಡುವಂತೆ ಅಧಿಕಾರಿಗಳಿಗೆ ಹೇಳಿದರು. ಮಾಡಿದ್ದಾರೋ ಇಲ್ಲವೋ ಗೊತ್ತಿಲ್ಲ. ಏನೇ ಇರಲಿ, ಒಟ್ಟಿನಲ್ಲಿ ಈಗಿನ ಪರಿಸ್ಥಿತಿಗನುಸಾರವಾಗಿ ಸರ್ಕಾರದವರು ಜನರಿಗೆ ಸಮಾಧಾನವಾಗುವ ಹಾಗೆ ಸಹಾಯ ಮಾಡಬೇಕು. ಅದಕ್ಕೆ ಶಾಶ್ವತ ಪರಿಹಾರ ನೀಡುವುದು ಒಂದು ಮಾರ್ಗ. ಆ ದೃಷ್ಟಿಯಿಂದ ನೋಡಿದರೆ ನಮ್ಮ ತಾಲ್ಲೂಕು ಮತ್ತು ಪೂರ್ವ ಭಾಗದಲ್ಲಿ ಮೈನರ್ ಇರಿಗೇಷನ್ ಕೆಲಸ ಕೈಕೊಳ್ಳಲು ಅವಕಾಶವಿಲ್ಲ, ಅಲ್ಲಿ ನದಿ ಯಾವುದೂ ಇಲ್ಲ. ನರಗುಂದ ಮತ್ತು ಸೌಂದತ್ತಿ ತಾಲ್ಲೂಕುಗಳಲ್ಲಿ ಮಲಪ್ರಭಾ ನದಿ ಪ್ರಾಜೆಕ್ಟಿನಿಂದ 20–25 ಹಳ್ಳಿಗಳು ಮುಳುಗಡೆಯಾಗುತ್ತವೆ. ಮುಳುಗಡೆಯಾದಮೇಲೆ ಪೂರ್ವ ಭಾಗದ ನವಲ ಗುಂದ ನರಗುಂದ ಜೋಡಿಸಿ ಒಂದು ತಾಲ್ಲೂಕು ಮಾಡಿದರೆ ಅನುಕೂಲವಾಗಬಹುದು. ಅಥಣಿ ತಾಲ್ಲೂಕು ಪೂರ್ವ ಭಾಗ ಬಿಜಾಪುರಕ್ಕೆ ಸೇರಬೇಕು, ರಾಮದುರ್ಗ, ಗೋಕಾಕ್ ಪೂರ್ವ ಭಾಗವೂ ಬಿಜಾಪುರಕ್ಕೆ ಸೇರಬೇಕು, ಸೌಂದತ್ತಿ ತಾಲ್ಲೂಕು ನರಗುಂದಕ್ಕೆ ಸೇರಿಸಿದರೆ ಛರೋ ಆಗುತ್ತದೆ ಎಂಬ ಅಭಿಪ್ರಾಯವಿದೆ. ಶಾಶ್ವತ ಪರಿಹಾರ ತಾತ್ಕಾಲಿಕ ಪರಿಹಾರ ಏನಿವೆ ಅದರಲ್ಲಿ ಶಾಶ್ವತವಾದ ಪರಿಹಾರದ ಬಗ್ಗೆ ಡೆಪ್ಯುಟಿ ಕಮಿಷನರು ಸರ್ವೆಮಾಡಿ ಪರಿಸ್ಥಿತಿಗನುಸಾರವಾಗಿ ಒಂದು ಮಾಸ್ಟರ್ ಪ್ಲಾನ್ ಕಳುಹಿಸಿದ್ದಾರೆ. ಅದು ರೆವೆನ್ಯೂ ಮಂತ್ರಿಗಳಿಗೆ ಬಂದಿರಬೇಕು. ಅದನ್ನು ಅಮಲು ಬಜಾವಣಿ ಮಾಡಬೇಕು. ಮುಕ್ಕಣ್ಣಪ್ಪನವರು ಹೇಳಿದಂತೆ ಕೆಲವು ಕಡೆ 15 ರಿಂದ 17 ಇಂಚು ಗಳವರೆಗೆ ಮಳೆಯಾದರೂ ಬರ ತಪ್ಪುವುದಿಲ್ಲ. ಅತಿವೃಷ್ಟಿ ಅಥವ ಅನಾವೃಷ್ಟಿಯಾಗಬಹುದು. ಸಮವೃಷ್ಟಿಯಾದರೂ ಕೆಲವುವೇಳೆ ಬೆಳೆಯಾಗುವುದಿಲ್ಲ, ತರಿ ಭೂಮಿ ಒಟ್ಟಿಗೆ ಇಲ್ಲದೆ 25–30 ಎಕರೆಯಂತೆ ಬೇರೆಬೇರೆ ಕಡೆ ಇರುವುದರಿಂದ ಮಳೆ ಕೆಲವು ಕಡೆ ಬಂದು ಮತ್ತೆ ಕೆಲವು ಕಡೆ ಬರದೆ ಏರುಪೇರಾಗಿ ಸಾಧಾರಣ ಪೀಕು ಬರುತ್ತದೆ. ಕೆಲವರಿಗೆ ಹಳ್ಳದಲ್ಲಿ 2–3 ಎಕರೆ ಇದ್ದರೂ ಬಂಡಿಂಗ್ ಇರುವುದರಿಂದ ಬೆಳೆ ಚೆನ್ನಾಗಿ ಆಗಿದೆ. ಬಂಡಿಂಗ್ ಇರುವುದರಿಂದ ನೀರು ಹರಿದು ಹೋಗದೆ ಜಮೀನಿನಲ್ಲೆ ನಿಲ್ಲುತ್ತದೆ. ಆ ದೃಷ್ಟಿಯಿಂದ ಬಂಡಿಂಗ್ ಬಗ್ಗೆ ಸರ್ಕಾರ ವಿಶೇಷ ಪ್ರಾಶಸ್ತ್ಯ ಕೊಡಬೇಕು. ನವಲಗುಂದ ಮತ್ತು ಸೌಂದತ್ತಿ ತಾಲ್ಲೂಕುಗಳಲ್ಲಿ ಕಾರುಭೂಮಿ ಇದೆ, ಮೈನರ್ ಮತ್ತು ಮೇಜರ್ ಇರಿಗೇಷನ್ ಆಗುವುದಿಲ್ಲ, ಬಾವಿ ತಗೆಯುವುದಕ್ಕೂ ಅವಕಾಶವಿಲ್ಲ. ಅದಕ್ಕೆ ಬಂಡಿಂಗ್ ಒಂದೇ ಬೇಕಾಗಿರುವುದು. ಆದುದರಿಂದ ಅದನ್ನು ಹಾಕಬೇಕು. ಬಿಜಾಪುರ ಜಿಲ್ಲೆಯಲ್ಲಿ ಕೆಲವುಕಡೆ ಹಾಕಿದ್ದಾರೆ. ಇತರ ಕಡೆ ಹಾಕದಿರುವುದರಿಂದ ಬರ ಬಂದಾಗ ವಿಶೇಷವಾಗಿ ಪರಿಹಾರ ಕೊಟ್ಟರೂ ತಕಾವಿ ಸಾಲ ವಗ್ಯೆರೆ ಕೊಟ್ಟರೂ ಬರದ ಭೀತಿ ತಪ್ಪುವುದಿಲ್ಲ, ಈ ವರ್ಷಕ್ಕಿಂತ ಮುಂದಿನ ವರ್ಷ ಭೀತಿ ಹೆಚ್ಚಬಹುದು.

ಇನ್ನೊಂದು ಸಲಹೆ. ಬಾವಿಗಳಿಗೆ ತಕಾವಿ ಸಾಲ ಕೊಡಲು ಪ್ರೊಸೀಜರ್ ಬಹಳವಾಗಿದೆ. ಅದನ್ನು ನೋಡಿದರೆ ಎಂದೂ ಸರ್ಕಾರದಲ್ಲಿ ಸಾಲ ತೆಗೆದುಕೊಳ್ಳಬಾರದು ಎನಿಸುತ್ತದೆ.

ಪ್ರೊಸೀಜರ್‌ನಲ್ಲಿ ತಪ್ಪಿದೆ, ಅದರಿಂದ ಸಾಮಾನ್ಯ ಒಕ್ಕಲಿಗರಿಗೆ ಅದು ನಿಲುಕುವುದಿಲ್ಲ, ಜಮೀನಿದ್ದರೂ ಕೊಡುವುದಿಲ್ಲ. ಈ ಪದ್ಧತಿಯಲ್ಲಿ ಸುಧಾರಣೆ ಮಾಡಬೇಕು. ಬಾವಿಗಳಿಗಾಗಿ 3 ಸಾವಿರ ರೂಪಾಯಿಗಳನ್ನು ಸಾಲದ ರೂಪವಾಗಿ ಕೊಡುವುದು ಮತ್ತು ಬಂಡಿಂಗ್ ಹಾಕುವುದು ಇವೆರಡೂ ಮಹತ್ವವುಳ್ಳ ಯೋಜನೆಗಳು. ನವಿಲತೀರ್ಥ, ಘಟಪ್ರಭ, ಹಾರಂಗಿ, ಅಲಮಟ್ಟಿ, ನಾರಾಯಣಪುರ ಮುಂತಾದ ದೊಡ್ಡ ಯೋಜನೆಗಳಾದರೂ ಬಡವರಿಗೆ ಮತ್ತು ಇತರ ಅನೇಕರಿಗೆ ಅದರಿಂದ ಸಾಕಷ್ಟು ಉಪಯೋಗವಾಗುವುದಿಲ್ಲ. ಆದುದರಿಂದ ನಣ್ಣ ನೀರಾವರಿ ಯೋಜನೆಗಳನ್ನು ಹೊದಲು ಮಾಡಿ. ಈಗಿರುವ ಎಲ್ಲಾ ಪ್ರಾಜೆಕ್ಟುಗಳಾದರೂ ಎಲ್ಲಾ ಭೂಮಿಗೂ ನೀರು ಸಾಕಾಗುವುದಿಲ್ಲ ದೊಡ್ಡ ಪ್ರಾಜೆಕ್ಟು, ಮೈನರ್ ಇರಿಗೇಷನ್, ಬಾವಿಗಳನ್ನು ತೆಗೆಯುವುದು ಮುಂತಾದ ನೂರಾರು ಕೆಲಸ ನಡೆದರೂ ಸೇಕಡ 40 ರಷ್ಟು ಭೂಮಿಗಾಗುವಷ್ಟೂ ನೀರು ದೊರೆಯುವುದಿಲ್ಲ.

ಇನ್ನೊಂದು ಕಾಳಿನ ಅಭಾವವಿದ್ದರೂ ರೈತ ರೊಕ್ಕದ ಪೀಕನ್ನಿಡಲು ಹೆಚ್ಚು ಮನಸ್ಸು ಮಾಡುತ್ತೇನೆ. ಕಾಳಿನ ಬೆಳೆ ಇಡಲು ಮನಸ್ಸು ಮಾಡುವುದಿಲ್ಲ. ಕಬ್ಬು, ಮುಂತಾದುವನ್ನು ನೀರಾವರಿ ಇರುವಕಡೆ ಬೆಳೆಯುತ್ತಾರೆ. ನೂರು ಎಕರೆಯವರೆಗೆ ತಂಬಾಕು ಬೆಳೆಯಲು ಉಪಯೋಗಿಸುವುದಾದರೆ ಕಾಳು ಬರುವುದು ಹೇಗೆ? ದರ ಬರಾಬರಿ ಇರಬೇಕು, ಬೇಕಾದ ಸೌಕರ್ಯ ಒದಗಿಸಿ ಹೆಚ್ಚು ಆಹಾರಧಾನ್ಯ ಬೆಳೆಸಲು ಏರ್ಪಾಡು ಮಾಡಬೇಕು. ಈಗ ಪ್ರತಿ ತಿಂಗಳು ಬೆಲೆಗಳು ಏರುತ್ತಿವೆ. ಅದು ಹೇಗಾದರೂ ಇರಲಿ. ಹೆಚ್ಚು ಬೆಳೆಯುವಂತೆ ಮಾಡಬೇಕು ಎಂದು ಇಷ್ಟು ಹೇಳಿ ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರ ಅಭಾರ ಮನ್ನಿಸುತ್ತೇನೆ.

†Sri BAPU RAO ANANDARAO HULSURKAR (Hulsur) —Mr. Speaker, Sir, I will confine myself only to the problems relating to Bidar District. Now, there are no two opinions regarding conditions that exist in Bidar District under the subject we are discussing. I will first relate the situation that exists in Bhalki and some other taluks in Bidar District. This year rains have not started in time and therefore the condition of agriculturists has become very bad and they are hit very badly. Moreover, regarding the land revenue that has been collected and that Government is collecting from the Marathi speaking area, we started the no-tax campaign before and after the merger we left it.

The Government are collecting the land revenue forcibly. Under such circumstances I request the Government that at least for the time being, the collection should be suspended and officers are instructed. Regarding takavi loans also they should stop recovery. Now the prices of foodstuffs have gone up and they are not easily available. The main foodcrop in that area is jowar and the price of jowar is too high and is not within the reach of poor people. I understand that Madhya Pradesh jowar is available and if possible, it should be made available in Bidar. Of course wheat also can be provided if we can control the prices to a certain extent. The prices of foodstuffs have become the problem of the day. As I have stated earlier, the agriculturists to have been affected as they have to sell at cheaper rates and purchase them by paying higher prices. So, in this direction also the Government should make necessary arrangements and relief measures that have been taken up should be completed by providing more funds.

As the House knows there are no roads in Bidar District and we can therefore take up road construction works. It will not only provide employment to the labour classes but also communications will improve. The hon'ble Minister knows the conditions very well. There are 600 applications pending in the Taluk Board Office at Bhalki and the hon'ble Minister promised to give lands for them. On that assurance we have

(SRI BAPU RAO ANANDARAO HULSURKAR)

given assurance to the agriculturists that the amount will be provided soon. But, till now no amount has been provided and there is utter disappointment. I request the Government to give more money for digging up wells because they will be a permanent measure of help and it will be easy also. Regarding the minor irrigation works, there should be two methods. One is permanent measure and another is temporary measure. Whatever small tank that can be repaired must be taken into consideration. There is no major and medium irrigation projects in Bidar. The Government should take necessary step and provide more amount for minor irrigation works.

I will not take much time of the House. With these observations I conclude my speech.

†ಶ್ರೀ. ಟಿ. ಜಿ. ನತ್ಯನಾರಾಯಣ (ಬಳ್ಳಾರಿ) :—ಸ್ವಾಮೀ, ಎಲ್ಲ ಜಿಲ್ಲೆಗಳಿಗೆ ಸಂಬಂಧ ಪಟ್ಟಂತೆ ಅಭಾವ ಪರಿಸ್ಥಿತಿಯನ್ನು ಆಗಲೇ ಹೇಳಿದ್ದಾರೆ. ನಾನು ನಮ್ಮ ಜಿಲ್ಲೆಯಾದ ಬಳ್ಳಾರಿ ಬಗ್ಗೆ ಹೇಳುತ್ತೇನೆ. ಬಳ್ಳಾರಿ ಜಿಲ್ಲೆಯನ್ನು ಫ್ಯಾಮಿನ್ ಏರಿಯಾ ಎಂದು ಸೇರಿಸಬೇಕೆಂದು ನರಕಾರದಲ್ಲಿ ನುವಾರು ಏಳೆಂಟು ವರ್ಷಗಳಿಂದಲೂ ಕೇಳುತ್ತಲೇ ಬರುತ್ತಿದ್ದರೂ ಇನ್ನೂ ಏನೂ ಮಾಡಲಕ್ಕೆ ಆಗಲಿಲ್ಲ. ಈಗಲಾದರೂ ಬಳ್ಳಾರಿ ಜಿಲ್ಲೆಯನ್ನು ಫ್ಯಾಮಿನ್ ಏರಿಯಾ ಎಂದು ಸೆರಿಸಬೇಕೆಂದು ಕೇಳುತ್ತೇನೆ. ನಮ್ಮಲ್ಲಿ ಹಿಂದೆ 15 ರಿಂದ 20 ಇಂಚುಗಳವರೆಗೆ ಮಳೆ ಬರುತ್ತಿತ್ತು. ಈಚೆಗೆ ಮಳೆಯೇ ಬಾರದೆ ಬೆಳೆಗಳೆಲ್ಲ ಕೆಟ್ಟು ಹೋಗುತ್ತಿವೆ. ನಮ್ಮ ಕಡೆ ಬೆಳೆಯತಕ್ಕ ಮುಖ್ಯವಾದ ಬೆಳೆಗಳು ಎಂದರೆ ಜೋಳ, ಹತ್ತಿ, ಮತ್ತು ಸೇಂಗ. ಇದಕ್ಕೆ ಹೆಚ್ಚಿನ ಮಳೆ ಬೇಕಾಗಿಲ್ಲ. ಆದರೆ ಸೀಸನಲ್ ರೇನ್ಸ್ ಎಂದು ಮಳೆ ಆಯಾ ಕಾಲದಲ್ಲಿ ಬಂದರೆ ಏನೋ ಒಂದು ಮೂರು ತಿಂಗಳು ಕಾಲ ಈ ಬೆಳೆಗಳನ್ನು ಮಾಡುತ್ತಾರೆ. ಆದರೆ ಈಚೆಗೆ ಈ ಬೆಳೆಗಳೂ ಕೆಟ್ಟು ಹೋಗುವ ಕಾಲ ಬಂದಿದೆ. ಈ ರೀತಿ ಬೆಳೆಗಳೂ ಆಗದಂತಿರುವ ಪರಿಸ್ಥಿತಿ ನೋಡಿದರೆ ಬಹಳ ಶೋಚನೀಯವಾಗುತ್ತದೆ ಆಲ್ಲದೆ ನಮ್ಮ ದನಕರುಗಳಿಗೆ ಫಾಡರು ಸಿಗುವುದೂ ಬಹಳ ತ್ರಾಸಾಗುತ್ತಿದೆ. ಇದರ ಜೊತೆಗೆ ಕೆಲವು ಹಳ್ಳಿಗಳಲ್ಲಿ ಪಾರ್ಟಿ ಫೀಲಿಂಗ್ಸ್‌ನಿಂದಾಗಿ ಹುಲ್ಲಿನ ಬಣವೆಗಳಿಗೆ ಬೆಂಕಿ ಬಿದ್ದು ಹಾಳಾಗಿ ಹೋಗಿವೆ. ಅದುದರಿಂದ ಇಲ್ಲಿನ ದನಕರುಗಳಿಗೆ ನರಿಯಾದ ಮೇವನ್ನು ಕಳುಹಿಸಲಕ್ಕೆ ತಕ್ಕ ಮಾರ್ಗವನ್ನು ಮಾಡಬೇಕು ಮತ್ತು ಫೇರ್ ಪ್ರೈಸ್ ಡಿಪೋಗಳನ್ನು ತೆಗೆದು ದವಸಗಳನ್ನು ಹಂಚುವಂತೆ ಎರ್ಪಾಡು ಮಾಡಬೇಕು. ಬಳ್ಳಾರಿ ಮೈನೂರಿಗೆ ಸೇರಿದ ಮೆಲಂತೂ ಇದು ಒಂದು ಬ್ಯಾಕ್ವರ್ಡ್ ಡಿಸ್ಟ್ರಿಕ್ಟ್ ಎಂದು ಆಗಿಹೋಗಿದೆ. ಹಿಂದೆ ಬಳ್ಳಾರಿ ಜಿಲ್ಲೆಯನ್ನು ರಾಯಲ ಸೀಮೆ ಎಂದು ಹೇಳುತ್ತಿದ್ದರು. ರಾಯಲ ಸೀಮೆ ಹೋಗಿ ಈಗ ರಾಳ ಸೀಮೆ ಆಗಿಹೋಗಿದೆ. ಆದ್ದರಿಂದ ನಮ್ಮ ಭಾಗಕ್ಕೆ ಜಾಗ್ರತೆ ಹೆಚ್ಚು ಡಿಪೋಗಳನ್ನು ತೆರೆದು ದವಸವನ್ನು ಹಂಚುವ ಎರ್ಪಾಡು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಅಲ್ಲದೆ ಈಗ ಎಲ್ಲೆಯಾದರೂ ಒಂದು ದೊಡ್ಡ ಪ್ರಾಜೆಕ್ಟ್ ಕೆಲಸ ನಡೆಯುತ್ತಿದ್ದರೆ ಅಲ್ಲಿ ಮೀಡಿಯಂ ಪ್ರಾಜೆಕ್ಟ್‌ಗಳ ಕೆಲಸವನ್ನು ತೆಗೆದುಕೊಳ್ಳಬಾರದು ಎಂದು ಹೇಳುತ್ತಿದ್ದಾರೆ. ಹಾಗೆ ಮಾಡದೆ ನಣ್ಣ ಕೆಲಸಗಳನ್ನೂ ಈ ಕಾಲದಲ್ಲಿ ತೆಗೆದುಕೊಂಡರೆ ಅಲ್ಲಿನ ಜನಕ್ಕೆ ಸ್ವಲ್ಪ ಕೆಲಸ ಸಿಕ್ಕಿದ ಹಾಗಾಗುತ್ತದೆ. ಅಲ್ಲದೆ ನಮ್ಮ ಏರಿಯವನ್ನು ಫ್ಯಾಮಿನ್ ಏರಿಯಾ ಎಂದು ಡಿಕ್ಲೇರ್ ಮಾಡಬೇಕೆಂದು ಮತ್ತು ಫ್ಯಾಮಿನ್ ಲೋನ್ ಎಂದು ಇಲ್ಲಿನ ರೈತರಿಗೆ ಕೊಟ್ಟರೆ ಬಹಳ ಅನುಕೂಲವಾಗುತ್ತದೆ ಎಂದು ನರಕಾರವನ್ನು ಕೇಳಿ ಕೊಳ್ಳುತ್ತೇನೆ.

ಇಷ್ಟನ್ನು ಹೇಳಿ ನಾನು ನನ್ನ ನಾಲ್ಕು ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

2-30 P.M.

†ಶ್ರೀ ಗೋಪಾಲ ಸಾರೆನ್ನ (ಮೂಡಬಿದ್ರೆ) :—ಮಾನ್ಯ ಅಧ್ಯಕ್ಷರೇ, ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಳೆ ಕಡಮೆಯಾಗಿ ಅಲ್ಲಿಯೂ ಅಭಾವಪರಿಸ್ಥಿತಿ ಒದಗಿದೆ ಎಂಬುದು ನಮ್ಮ ಅಧ್ಯಕ್ಷರ ಗಮನಕ್ಕೆ ಬಾರದಿರುವುದು ಬಹಳ ದುರ್ದೈವ. ಈ ವಿಚಾರ ಮಂತ್ರಿಗಳ ಗಮನಕ್ಕೂ ಕೂಡ ಬಂದಿಲ್ಲವೆಂದು ಹೇಳಲಾಗಿದೆ. ಇವರು ಅಲ್ಲಿರತಕ್ಕ ಲೋಕರ್ ಕಂಡಿಷನ್‌ಗಳನ್ನು ನರಿಯಾಗಿ ತಿಳಿದು

ಕೊಂಡಿಲ್ಲ. ಮಲೆನಾಡಿನಲ್ಲಿರತಕ್ಕ ಮುಕ್ಕಾಲುಪಾಲು ಭಾಗದಲ್ಲಿರ್ಲಾ ವರ್ಷದಲ್ಲಿ ಮೂರು ತಿಂಗಳ ಕಾಲ ಜನರಿಗೆ ತಿನ್ನುವುದಕ್ಕಿರುವುದಿಲ್ಲ. ಅವರು ಅಲ್ಲಿ ಉಪವಾಸವಿರತಕ್ಕ ಪರಿಸ್ಥಿತಿಇರುತ್ತದೆ. ಮಲೆನಾಡಿನಲ್ಲಿರತಕ್ಕ ಭಾಗಗಳಲ್ಲಿ ಯಾವತ್ತೂ ಸ್ಕೇರ್ಸಿಟಿಯಿರುವುದಿಲ್ಲ ಎಂದು ಯಾರಾದರೂ ತಿಳಿದಿದ್ದರೆ ಅದು ಸರಿಯಲ್ಲ. ಈ ದಕ್ಷಿಣ ಕನ್ನಡ ಜಿಲ್ಲೆ ಹಿಂದೆ ಮದ್ರಾಸ್ ರಾಜ್ಯದಲ್ಲಿದ್ದಾಗಲೂ ಇದು ಸ್ಕೇರ್ಸಿಟಿ ಪ್ರದೇಶವಾಗೇ ಇತ್ತು. ಈಗ ಇದು ಮೈಸೂರಿಗೆ ಬಂದನಂತರ ನರ್‌ಪ್ಲಸ್ ಏರಿಯಾ ಆಗುವಂತೆ ಮಾಡಲು ಇಲ್ಲಿಯ ಸರ್ಕಾರ ಯಾವ ಅಂಥ ವಿಶೇಷ ಕಾರ್ಯಕ್ರಮ ಗಳನ್ನು ಅಲ್ಲಿ ಕೈಗೊಂಡಿದ್ದಾರೆಂಬುದನ್ನು ತಿಳಿಸಲು ನನಗೆ ತಿಳಿದಂತೆ ಈ ಸರ್ಕಾರದವರು ಅಲ್ಲಿಗೆ ಅಂಥಾ ಹೆಚ್ಚಿನ ಗಮನವನ್ನೇನೂ ಕೊಟ್ಟಹಾಗೆ ನನಗೆ ಕಂಡುಬಂದಿಲ್ಲ. ಈ ದಿವಸ ಕಲ್ಲೇಕೋಟೆಯಿಂದ ಇಲ್ಲಿಗೆ ಅಕ್ಕಿಯನ್ನು ಕಳುಹಿಸುತ್ತೇವೆಂದು ಹೇಳಿದ್ದಾರೆ. ಇದು ಒಂದು ನರಪ್ಲಸ್ ಏರಿಯಾ ಆಗಿದ್ದರೆ ಅವರೇಕೆ ಇಲ್ಲಿಗೆ ಅಕ್ಕಿಯನ್ನು ಹೊರಗಡೆಯಿಂದ ಕಳುಹಿಸಬೇಕಾಗಿತ್ತು? ಈ ದಿವಸ ಅಲ್ಲಿರತಕ್ಕ ಹರಿಜನ-ಗಿರಿಜನರ ಹಾಗೂ ಇನ್ನಿತರ ಬಡವರ ಸ್ಥಿತಿಗತಿಗಳನ್ನು ನೋಡುವುದಕ್ಕಾಗುವುದಿಲ್ಲ. ಅವರು ಅಲ್ಲಿ ಈ ದಿವಸ ಸೊಪ್ಪು ನದೆಗಳನ್ನೂ, ಎಂಜಲನ್ನವನ್ನೂ ತಿನ್ನುತ್ತಿದ್ದಾರೆ. ಅವರು ಬೇಡತಕ್ಕ ಪರಿಸ್ಥಿತಿಯನ್ನು ನೋಡಿದರೆ ಅವರ ಪರಿಸ್ಥಿತಿ ಬಹಳ ಶೋಚನೀಯವಾಗಿದೆ. ಆದರೆ ಅಲ್ಲಿ ವರ್ಷದಲ್ಲಿ ವಿಶೇಷ ಮಳೆ ಬರಬಹುದು. ನದಿಗಳೂ ವಿಶೇಷವಾಗಿರಬಹುದು. ಆದರೆ ಅಲ್ಲಿ ಕೆರೆಗಳೇ ಇಲ್ಲ. ವರ್ಷದಲ್ಲಿ ಮೂರು ತಿಂಗಳು ಯಾವತ್ತೂ ಬರಗಾಲವಿದ್ದೇ ಇರುತ್ತದೆ. ಅಲ್ಲಿ ಸಾಕಷ್ಟು ಕೆರೆಕಟ್ಟೆಗಳನ್ನು ಮಾಡಿದ್ದರೆ ಈ ದಿವಸ ಅಲ್ಲಿಯ ಜನರು ಸುಖವಾಗಿರುವುದೊಂದೇ ಅಲ್ಲದೆ ದೇಶದ ಬೇರೆ ಭಾಗಗಳಿಗೂ ಅಲ್ಲಿಂದ ಅಕ್ಕಿಯನ್ನು ನರಬರಾಯಿ ಮಾಡಬಹುದಾಗಿತ್ತು. ಆದಾಗ್ಯೂ ಸರ್ಕಾರ ಇತ್ತಕಡೆಗೆ ಗಮನವನ್ನು ಕೊಡಲಿಲ್ಲ. ಅಲ್ಲಿಯ ಜಮೀನುಗಳು ಬಹಳ ಫಲವತ್ತಾದವುಗಳು. ಅಲ್ಲಿ ಕೊಳಕಿ ಎಂತ ಒಂದು ಗ್ರಾಮವಿದೆ, ಅಲ್ಲಿ ವರ್ಷಕ್ಕೆ ಮೂರು ಬೆಳೆಗಳನ್ನು ತೆಗೆಯುತ್ತಾರೆ. ಅಂಥಾ ಅವಕಾಶವಿದೆ ಅಲ್ಲಿ. ಅಷ್ಟೇ ಅಲ್ಲದೆ ಅಲ್ಲಿಯ ಜಮೀನುಗಳಿಗೆ ಉಪ್ಪು ನೀರಿನ ಹಾವಳಿ ಬೇರೆ ಇದೆ, ಅದನ್ನು ತಡೆಗಟ್ಟುವುದಕ್ಕೇನೂ ಪ್ರಯತ್ನಮಾಡಿಲ್ಲ. ಇದಕ್ಕೆ ಸರ್ಕಾರದವರು ಇಲ್ಲಿಯವರೆಗೂ ಒಂದು ಸರಿಯಾದ ಯೋಜನೆಯನ್ನು ತಯಾರಿಸಿಲ್ಲ. ಅಲ್ಲಿ ಗೊಬ್ಬರದ ತೊಂದರೆಯ ಜೊತೆಗೆ ಅದನ್ನು ಸಾಗಿಸತಕ್ಕ ಒಳ್ಳೆಯ ರಸ್ತೆಗಳಿಲ್ಲ. ಕೆನಾಲವೇ ಅಂತ ಒಂದು ಯೋಜನೆಯನ್ನು ತಯಾರು ಮಾಡಲಾಗುತ್ತಿದೆಯೆಂದು ಈ ಹಿಂದೆ ನಮಗೊಂದು ಪುಸ್ತಕವನ್ನು ಹಂಚಿಕೆ ಮಾಡಲಾಗಿತ್ತು. ಆದರೆ ಆ ಕಾರ್ಯ ಎಲ್ಲಿಗೆ ಬಂದಿದೆ ಎಂಬುದು ಇದುವರೆಗೂ ಗೊತ್ತಾಗಲಿಲ್ಲ. ಇನ್ನಾದರೂ ಸರ್ಕಾರದವರು ಅಲ್ಲಿ ಹರಿದು ಸಮುದ್ರವನ್ನು ಸೇರತಕ್ಕ 10 ನದಿಗಳಿಗೂ ಮತ್ತು ಅವುಗಳ ಉಪನದಿಗಳಿಗೂ ಅಣೆಕಟ್ಟುಗಳನ್ನು ಹಾಕಿ ರೈತರಿಗೆ ನೀರಾವರಿ ಸೌಕರ್ಯಗಳನ್ನು ಕಲ್ಪಿಸಬೇಕೆಂದು ಹೇಳುತ್ತೇನೆ. ಸರ್ಕಾರದವರು ಈಗ ಕೇಂದ್ರದಿಂದ ಅಕ್ಕಿಯನ್ನೂ ಮತ್ತು ಗೋಧಿ ಯನ್ನೂ ತಂದು ಇಲ್ಲಿ ಜನರಿಗೆ ಹಂಚರಾಗುತ್ತದೆಂದು ಹೇಳಿದರು. ಆದರೆ ಹೀಗೇ ಎಲ್ಲಿಯವರೆಗೆ ಮಾಡುವುದಕ್ಕೆ ಸಾಧ್ಯ? ನರಬರಾಯಾಗತಕ್ಕದ್ದರಲ್ಲಿ ಅನೇಕ ಭಾಗ ಮಧ್ಯದಲ್ಲೇ ಹಾಳಾಗಿಹೋಗುತ್ತದೆ, ಇಲಿಗಳು ಬೇರೆ ತಿಂದುಹಾಕುತ್ತವೆ. ಹೀಗೆ ಲುಕ ನಾಗತಕ್ಕ ಅಂಶವೆಷ್ಟು ಎಂಬುದನ್ನು ಸರ್ಕಾರದವರು ನಾಳೆ ಒಂದು ಸ್ಟೇಟ್‌ಮೆಂಟ್‌ರೂಪದಲ್ಲಿ ನಮಗೆ ತಿಳಿಸಬೇಕೆಂದು ಹೇಳುತ್ತೇನೆ. ಇನ್ನು ಈಗ ಬರತಕ್ಕ ಧಾನ್ಯಗಳನ್ನು ಒಂದು ವಿತರಣೆಯಿಂದ ಹಂಚತಕ್ಕ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಇದರಲ್ಲಿ ವ್ಯಾಪಾರಸ್ಥರಿಗೆ ಯಾವ ಕೈವಾಡವೂ ಇರದಂತೆ ಮಾಡಬೇಕು. ಇದರಲ್ಲಿ ಕೆಲವು ಪುಡಾರಿಗಳು, ಕಂಟ್ರಾಕ್ಟರುಗಳು ಲಾಭಗಳಿಸಲು ಪ್ರಯತ್ನಮಾಡುತ್ತಾರೆ. ಇದಕ್ಕೆ ಅವಕಾಶ ಕೊಡಬಾರದು. ಸರ್ಕಾರಿ ನೌಕರರಿಗೂ ಮತ್ತು ಮಧ್ಯಮವರ್ಗದ ಜನರಿಗೂ ಹೆಚ್ಚಿನ ಅನುಕೂಲತೆಗಳನ್ನು ಕಲ್ಪಿಸಬೇಕು. ಸರ್ಕಾರಿ ಅಡಳಿತ ದಕ್ಷತೆಯಿಂದ ನಡೆಸಿಕೊಂಡು ಬರಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಆರ್. ಕೆಂಚಪ್ಪ(ಪಾವಗಡ)–ಮಾನ್ಯ ಅಧ್ಯಕ್ಷರೇ, ಕ್ಷಾಮದ ವಿಚಾರದಲ್ಲಿ ಈಗಾಗಲೇ ಕಳೆದ 2-3 ದಿನಗಳಿಂದ ವಿಪುಲವಾದ ಚರ್ಚೆಯಾಗಿದೆ. ಸಾಮಾನ್ಯವಾಗಿ ಎಲ್ಲ ಪ್ರದೇಶದ ಸದಸ್ಯರೂ ವ್ಯಕ್ತಪಡಿಸಿರುವ ನಲಹೆಗಳೂ ಈ ಅಭಾವ ಪರಿಸ್ಥಿತಿಗೆ ಒಳಗಾಗಿರತಕ್ಕ ಪ್ರದೇಶಗಳಿಗೆ ಅನ್ವಯಿಸತಕ್ಕವುಗಳಾಗಿವೆ. ಈ ಕ್ಷಾಮ ಹೀಗೆ ವರ್ಷೇ ವರ್ಷೇ ತಪ್ಪದಂತೆ ತಲೆದೋರುತ್ತಿರುವುದರಿಂದ ಇದನ್ನು ಶಾಶ್ವತವಾಗಿ ತಹೆಗಟ್ಟಲು ಸರ್ಕಾರದವರು ಒಂದು 40 ಕೋಟಿ ರೂಪಾಯಿಗಳ ಅಭಿವೃದ್ಧಿ ಯೋಜನೆಯನ್ನು ತಯಾರಿಸುವುದಾಗಿ ಹಿಂದೆಯೇ ತಿಳಿಸಿದ್ದರು. ಸರ್ಕಾರದವರು ಅದರ ಅಂಗವಾಗಿ ಸಣ್ಣ ನೀರಾವರಿ ಯೋಜನೆಗಳ ಒಂದು ಕಾಂಗಾರಿಯನ್ನು ಕ್ಷಾಮಪೀಡಿತ ಪ್ರದೇಶಗಳಲ್ಲಿ ಕೈಗೊಳ್ಳುವುದರಿಂದ ಅದನ್ನು ತಡೆಗಟ್ಟಬಹುದು ಎಂದು ಅವರು ಭಾವಿಸಿದ್ದಾರೆ. ಅದು ಸಹಜ. ಸಣ್ಣ ನೀರಾವರಿಗಳೆಂದರೆ: ಗೋಕಟ್ಟೆಗಳನ್ನು ದುರಸ್ತಿಮಾಡುವುದು ಸಣ್ಣಪುಟ್ಟ ಕೆರೆಗಳನ್ನು ದುರಸ್ತಿಮಾಡುವುದು, ಹಾಗೇ ಹೊಸ ಕೆರೆಗಳ ನಿರ್ಮಾಣ ಇವುಗಳಿಂದ ಬಹಳ ಅನುಕೂಲವಾಗುತ್ತದೆ. ಈ ದಿವಸ ನಮ್ಮ ಪ್ರದೇಶದಲ್ಲಿ ಪಾವಗಡ, ಮಧುಗಿರಿ ಇಲ್ಲ ಕೆಲವು ಕಡೆ ತಲಪರಿಗೆಗಳಿವೆ. ಇವುಗಳಿಂದ ಸುಮಾರು

(ಶ್ರೀ ಆರ್. ಕೆಂಚಪ್ಪ)

20-30 ಎಕರೆ ಸಾಗುವಳಿಯಾಗುತ್ತದೆ. ಇವುಗಳಿಗೆ ಈಗಾಗಲೇ ಕೆಲವು ಕಡೆ ಕಲ್ಯಾಣಿಗಳನ್ನು ಕಟ್ಟಿಸಿದ್ದಾರೆ. ಅವುಗಳಲ್ಲಿ ನೀರು ಹೊರಟು ಜನರಿಗೆ ಬಹಳ ಅನುಕೂಲವಾಗುತ್ತಿದೆ.

ಇನ್ನು ಕೆಲವು ಕಡೆ ರೈತರು ಬಾವಿಗಳನ್ನು ತೆಗೆಯುವಾಗ ಬಂಡೆಗಳು ಬಿದ್ದು ಅದನ್ನು ಮುಂದುವರಿಸಲು ಅವರಲ್ಲಿ ಸಾಕಷ್ಟು ಆರ್ಥಿಕ ಶಕ್ತಿಯಿಲ್ಲದೆ ಅದನ್ನು ಹಾಗೇ ಕೈಬಿಟ್ಟಿರುತ್ತಾರೆ. ಇದರಿಂದ ಅಲ್ಲಿರತಕ್ಕ ಜಮೀನೆಲ್ಲಾ ಬಂಜರಾಗುತ್ತಿದೆ. ಇಂಥ ಸಂದರ್ಭಗಳಲ್ಲಿ ಸರ್ಕಾರದವರು ಅಲ್ಲಿ ಬೋರ್‌ವೆಲ್‌ಗಳನ್ನು ಹಾಕಿಸಿ ರೈತರಿಗೆ ಅನುಕೂಲ ಕಲ್ಪಿಸಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇದಕ್ಕೆ ಬೇಕಾಗತಕ್ಕ ಖರ್ಚನ್ನೆಲ್ಲಾ ಸರ್ಕಾರದವರೇ ವಹಿಸಬೇಕು.

ಇನ್ನು ನಮ್ಮಲ್ಲಿ ಕೆಲವು ಕಡೆ ಸಾಮೂಹಿಕ ವ್ಯವಸಾಯಾಭಿವೃದ್ಧಿಯೋಜನೆಗಳನ್ನು ತೆಗೆದುಕೊಂಡಿದ್ದಾರೆ. ಇಂಥಾ ಕಡೆಗಳಲ್ಲಿ ನೀರಿನ ವನತಿ ಇರುವ ಕಡೆ ಅವರಿಗೆ ಬಾವಿಗಳನ್ನು ಮಾಡಿಸಿ ಸರ್ಕಾರದವರು ಅನುಕೂಲ ಕಲ್ಪಿಸಿಕೊಡಬೇಕೆಂದು ನಾನು ಪ್ರಾರ್ಥನೆಮಾಡಿಕೊಳ್ಳುತ್ತೇನೆ.

ಅನೇಕ ಐ. ಪಿ. ಸೆಟ್ಟುಗಳು ಮುಂಜೂರಾಗದೆಯೇ ನಿಂತುಹೋಗಿವೆ. ಅದಕ್ಕೋಸ್ಕರ ಸಂಬಂಧಪಟ್ಟ ಇಲಾಖೆಯ ಆಫೀಸರು ರೈತರು ಎಷ್ಟರಮಟ್ಟಿಗೆ ಆರ್ಥಿಕ ಪರಿಸ್ಥಿತಿಯಲ್ಲಿ ದುರ್ಬಲರಾಗಿರುತ್ತಾರೆಂಬುದನ್ನು ಖುದ್ದಾಗಿಹೋಗಿ ನೋಡುವುದು ಒಳ್ಳೆಯದು ಆದ್ದರಿಂದ ಅಭಾವಪರಿಸ್ಥಿತಿ ಇರುವ ಪ್ರದೇಶಗಳಿಗೆ ಐ. ಪಿ. ಸೆಟ್ಟುಗಳನ್ನು ಒದಗಿಸುವುದಕ್ಕೆ ಅನೇಕ ಕಾಮಗಾರಿಗಳನ್ನು ಕೈಗೊಳ್ಳುವ ವಿಚಾರದಲ್ಲಿ, ಬೇಕಾದ ವ್ಯವಸಾಯೋಪಕರಣ ಇತ್ಯಾದಿಗಳನ್ನು ಸಾಕಷ್ಟು ಅಲ್ಲಲ್ಲಿ ಒದಗಿಸುವುದರಲ್ಲಿ ಸರ್ಕಾರ ತಪ್ಪಿದೆ. ಇವರು ಅಭಾವ ಪ್ರದೇಶಗಳಿಗೆ ಸಾಕಷ್ಟು ಗಮನವನ್ನು ಕೊಡದೇ ಇರುವುದರಿಂದ ಇಂತಹ ಸನ್ನಿವೇಶದಲ್ಲಿ ಪಾನ್ತವ ವಿಷಯವನ್ನು ವ್ಯಕ್ತಪಡಿಸುವ ಸಂಭವ ಈಗ ಇವರಿಗೆ ಒದಗಿದೆ. ಸಂಬಂಧಪಟ್ಟ ಸಚಿವರು ಈ ವಿಚಾರದಲ್ಲಿ ಕೇವಲ ಆಸಕ್ತಿಯಿಂದ ಇದನ್ನು ನಿರ್ವಹಿಸಬೇಕೆಂದು ನಾನು ಒತ್ತಾಯಪಡಿಸುತ್ತೇನೆ. ಹಿಂದೆ ನಮ್ಮ ತಾಲ್ಲೂಕಿಗೆ ಕೊಟ್ಟರತಕ್ಕ ತಕಾವಿಸಾಲಕ್ಕೂ ಈ ವರ್ಷ ಒದಗಿಸಿರತಕ್ಕ ಜಮೀನು ಅಭಿವೃದ್ಧಿ ತಕಾವಿಸಾಲಕ್ಕೂ ಹೋಲಿಸಿನೋಡಿದರೆ ಈ ವರ್ಷ ಕೊಟ್ಟಿರತಕ್ಕ ಹಣ ಬಹಳ ಕಡಿಮೆಯಾಗಿದೆ. ಇನ್ನೂ ಹೆಚ್ಚಿಗೆ ಈ ಬಾಬಿಗೆ ಹಣಸಹಾಯ ಮಾಡುವುದಾದರೆ ಹೆಚ್ಚಿಗೆ ಜಮೀನು ವ್ಯವಸಾಯಮಾಡಿ ಅಲ್ಲಿ ಏನೊಂದು ಅಭಾವ ಪರಿಸ್ಥಿತಿ ಇದೆಯೋ ಅದನ್ನು ಹೋಗಲಾಡಿಸುವುದಕ್ಕೆ ಅನುಕೂಲವಾಗುತ್ತದೆ.

ಇನ್ನು ನೀರಾವರಿಯೋಜನೆಗಳ ಬಗ್ಗೆ ಅನೇಕ ಅಂದಾಜುಗಳು ಸರ್ಕಾರದ ಪರಿಶೀಲನೆಯಲ್ಲಿದ್ದವು; ಅವು ಇದುವರೆಗೆ ಒಂದೂಕೂಡ ಮಂಜೂರಾಗಿಲ್ಲ. ಸರ್ಡಿವಿಜನ್ನಿನಲ್ಲಿ ಸಿರಾ, ಪಾವಗಡ, ಮಧುಗಿರಿ ಸೇರಿವೆ. 8 ಕಾಮಗಾರಿಗಳಪೈಕಿ ಸಿರಾದಲ್ಲಿ 6 ಕಾಮಗಾರಿಗಳನ್ನು ಪೂರೈಸಿದ್ದಾರೆ. ಪಾವಗಡದಲ್ಲಿ 11 ಮಂಜೂರಾಗಿದ್ದರೆ 6 ಮಾತ್ರ ಪೂರೈಸಿದ್ದಾರೆ, ಮಧುಗಿರಿಯಲ್ಲಿ 21 ಕಾಮಗಾರಿಗಳ ಪೈಕಿ 6 ಮಾತ್ರ ಪೂರೈಸಿದ್ದಾರೆಂಬುದಾಗಿ ನನಗೆ ತಿಳಿದುಬಂದಿದೆ ಇದನ್ನು ನೋಡಿದರೆ ಅಭಾವ ಪ್ರದೇಶಗಳಲ್ಲಿರತಕ್ಕ ಆಹಾರದ ಕೊರತೆಯನ್ನು ನಿವಾರಿಸುವುದಕ್ಕೆ ಇದು ಬಹಳ ಅಡ್ಡಿಯಾಗಿದೆ ಎಂದು ಹೇಳಬಹುದು. ಅನೇಕ ಕಾಮಗಾರಿಗಳು ಮಂಜೂರಾಗಿದ್ದರೂ ಆ ಕೆಲಸಗಳನ್ನು ಇನ್ನೂ ಪೂರೈಸಿಲ್ಲ. ಇದರಿಂದ ರೈತರಿಗೆ ಬಹಳಮಟ್ಟಿಗೆ ಅನಾನುಕೂಲವಾಗಿರುವುದರಿಂದ ಅದಷ್ಟುಜಾಗ್ರತೆಯಾಗಿ ಈಗಿರತಕ್ಕ ಕಂಟ್ರಾಕ್ಟರುಗಳಮೇಲೆ ಹದ್ದುಬಸ್ತನ್ನು ಇಟ್ಟುಕೊಂಡು ಸಾಕಷ್ಟು ಕಾಮಗಾರಿಗಳನ್ನು ಪೂರೈಸುವುದಕ್ಕೆ ತಕ್ಕಕ್ರಮವನ್ನು ಕೈಗೊಳ್ಳಬೇಕೆಂದು ನಾನು ಸಲಹೆಮಾಡುತ್ತೇನೆ.

ಇನ್ನು ಮಳೆಯ ವಿಚಾರದಲ್ಲಿ ಕೆಲವು ಮಾತುಗಳನ್ನು ಹೇಳಬೇಕಾಗಿದೆ. ಕೇವಲ ತಾಲ್ಲೂಕು ಹೆಡ್‌ಕ್ವಾರ್ಟರುಗಳಲ್ಲಿ, ಪೋಲೀಸ್ ಸ್ಟೇಷನ್ನುಗಳಲ್ಲಿ ಮತ್ತು ಹೋಬಳಿ ಹೆಡ್‌ಕ್ವಾರ್ಟರುಗಳಲ್ಲಿ ರೈನ್‌ಗೇಜ್ ಇರುತ್ತದೆ. ಅರ್ಧಇಂಚ್‌ಮಳೆ ಬಂದಾಕ್ಷಣಕ್ಕೆ ಎಲ್ಲಾ ಕಡೆಯೂ ಮಳೆಬಿದ್ದಿದೆ ಎಂಬುದಾಗಿ ಸರ್ಕಾರದವರು ವರದಿಮಾಡುವುದು ಸೂಕ್ತವಲ್ಲ. ಅದಕ್ಕಾಗಿ ತಾಲ್ಲೂಕುಬೋರ್ಡಿನ ಅಭಿಪ್ರಾಯ ತೆಗೆದುಕೊಂಡು ಎಲ್ಲೆಲ್ಲಿ ಮಳೆಯಾಗಿದೆ, ಎಲ್ಲೆಲ್ಲಿ ಮಳೆಯಾಗಿಲ್ಲ ಎಂಬುದಾಗಿ ಸ್ಥಳೀಯ ಅಧಿಕಾರಿಗಳು ಸರ್ಕಾರಕ್ಕೆ ವರದಿಮಾಡುವುದು ಸೂಕ್ತವಾಗಿರುತ್ತದೆ. ಆ ಅಧಿಕಾರಿಗಳ ವರದಿಯನ್ನೇ ಸರ್ಕಾರದವರು ಆಧಾರವಾಗಿಟ್ಟುಕೊಳ್ಳದೆ ಸಾರ್ವಜನಿಕರ ಪ್ರತಿನಿಧಿಗಳ ಮತ್ತು ಬೋರ್ಡಿನ ಸದಸ್ಯರ ಅಭಿಪ್ರಾಯಕ್ಕೂ ಮನ್ನಣೆ ಕೊಡಬೇಕೆಂದು ನಾನು ಹೇಳುತ್ತೇನೆ. ಕ್ಷಾಮ ಪರಿಸ್ಥಿತಿ ಇರುವಕಡೆ ಸಾಕಷ್ಟು ತೀವ್ರಗತಿಯಿಂದ ತಕ್ಕ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕು.

ಇನ್ನೂ ನಮ್ಮ ತಾಲ್ಲೂಕಿನಲ್ಲಿ ಅಷ್ಟಾಗಿ ಜೀವನದಿಗಳಿಲ್ಲ. ಉತ್ತರಪಿನಾಕಿನಿ ಆಂಧ್ರದಿಂದ ಹರಿದುಹೋಗುತ್ತಿದೆ. ಆ ನದಿಗೆ ಅಣೆಕಟ್ಟು ಕಟ್ಟಬೇಕೆಂದು ಪದೇ ಪದೇ ಇಲ್ಲಿ ಒತ್ತಾಯಪಡಿಸುತ್ತಿದ್ದರೂ ಆ ಕಡೆ ಸರ್ಕಾರ ಇದುವರೆಗೂ ಗಮನಕೊಟ್ಟಿಲ್ಲವೆಂದು ಹೇಳಲು ನನಗೆ ವಿಷಾದವಾಗುತ್ತದೆ. ಮಾನ್ಯಮಂತ್ರಿಗಳು ಈ ಅಣೆಕಟ್ಟನ್ನು ಮಾಡಿಸಿಕೊಟ್ಟಲ್ಲಿ ಸುಮಾರು 3—4 ಸಾವಿರ ಎಕರೆ

ಗಳಷ್ಟು ಜಮೀನಿಗೆ ನೀರಾವರಿ ಸೌಕರ್ಯ ಒದಗಿ ಈಗಿರತಕ್ಕ ಕ್ಷಾಮಪರಿಸ್ಥಿತಿಯ ನಿವಾರಣೆಗೆ ಎಷ್ಟೋ ಅನುಕೂಲವನ್ನು ಕಲ್ಪಿಸಿಕೊಟ್ಟ ಹಾಗಾಗುತ್ತದೆ. ಆದ್ದರಿಂದ ನಾಲ್ಕನೆಯ ಪಂಚವಾರ್ಷಿಕ ಯೋಜನೆ ಗೊಳಗಾದರೂ ಈ ಕಾಮಗಾರಿಯನ್ನು ಮುಖ್ಯಮಂತ್ರಿಗಳು ಪೂರ್ತಿಸಿಕೊಡಬೇಕೆಂದು ನಾನು ಈ ಸಮಯದಲ್ಲಿ ಅವರನ್ನು ಪ್ರಾರ್ಥಿಸಿ, ನನಗೆ ಮಾತನಾಡಲು ಅವಕಾಶವನ್ನು ಕೊಟ್ಟಂಥ ಅಧ್ಯಕ್ಷರನ್ನು ವಂದಿಸಿ ನನ್ನಮಾತನ್ನು ಮುಗಿಸುತ್ತೇನೆ.

† ಶ್ರೀ ಪಿ. ವೆಂಕಟಗಿರಿಯಪ್ಪ (ಕೋಲಾರ).—ಸ್ವಾಮಿ ರಾಜ್ಯದ ಇತರ ಕೆಲವು ಜಿಲ್ಲೆಗಳಲ್ಲಿರುವ ರೀತಿಯಲ್ಲಿ ಕೋಲಾರ ಜಿಲ್ಲೆಯಲ್ಲಿಯೂ ಆಹಾರ ಅಭಾವಪರಿಸ್ಥಿತಿ ಬಹಳ ಭಯಾನಕವಾಗಿದೆ. ಕೋಲಾರಜಿಲ್ಲೆಯಲ್ಲಿ ಇದುವರೆಗೆ ಆಗಲೇ ಮಳೆಬಿದ್ದು ಅಲ್ಲಲ್ಲಿ ಉಳುಮೆಯಾಗಿ ಬಾಗೇಪಲ್ಲಿ ಮತ್ತು ಕೆಲವು ತಾಲ್ಲೂಕುಗಳಲ್ಲಿ ಕಬ್ಬು ಮತ್ತು ಇತರ ಬೆಳೆಗಳ ಬಿತ್ತನೆಯಾಗಬೇಕಾಗಿತ್ತು ಮಳೆಯ ಅಭಾವದಿಂದ ಈ ಸಾರಿ ಕೋಲಾರದಲ್ಲಿ ಕಬ್ಬು ಮತ್ತು ಇತರ ಬೆಳೆಗಳ ಬಿತ್ತನೆಗಾಗಿ ಜಮೀನು ಉಳುಮೆಯಾಗಿಲ್ಲ. ಹಾಗೂ ಯಾವಬೆಳೆಯನ್ನೂ ಮಾಡಲಕ್ಕಾಗಲಿಲ್ಲ. ಇಷ್ಟೇ ಅಲ್ಲ ದನಗಳ ಮೇವಿಗೂ, ಮತ್ತು ಜನಗಳ ಆಹಾರಕ್ಕೂ ಕೂಡ ಬಹಳ ಬಿಕ್ಕಟ್ಟು ತೋರಿದೆ. ಕುಡಿಯುವ ನೀರಿಗಂತೂ ಬಹಳ ಕಷ್ಟವಾಗಿದೆ. ಈ ದಿವಸ ಸರ್ಕಾರದವರು ಲಬರಲೈಜ್ಡ್ ಸ್ಕೀಮಿನಲ್ಲಿ ಅನೇಕ ಬಾವಿಗಳಿಗಾಗಿ ಹಣಕೊಡುವುವುದರಿಂದ ಅದರ ಹೆಚ್ಚಿನ ಪ್ರಯೋಜನ ದೊರೆಯುತ್ತದೆಂಬ ಭಾವನೆ ಇತ್ತು. ಆದರೆ ಈಗ ಕೋಲಾರ ಜಿಲ್ಲೆಯಲ್ಲಿ ನೋಡಿದರೆ ಇರತಕ್ಕ ಬಾವಿಗಳಲ್ಲಿ ಒಂದುತೊಟ್ಟು ನೀರೂಸಹ ಇಲ್ಲದೆ ಬೆಳೆಗಳೆಲ್ಲವೂ ನಾಶವಾಗಿರುವುದು ಕಾಣಬಹುದು. ಈ ಪರಿಸ್ಥಿತಿಯಲ್ಲಿ ಜನ ಇರುವಾಗ ಸಾಲದ್ದಕ್ಕೆ ಇನ್ನು ಮುಂದೆ ಕಂದಾಯ ಹೆಚ್ಚುವರಿಮಾಡತಕ್ಕ ನೋಟೀಸ್‌ಗಳನ್ನು ಹಳ್ಳಿಗಳಲ್ಲಿ ಹಂಚಿದ್ದಾರೆ. ಇದರಿಂದ ಮತ್ತಷ್ಟುಜನ ಗಾಬರಿಗೊಳ್ಳುವುದಕ್ಕೆ ಕಾರಣವಾಗಿದೆ. ಬೇರೆರಾಜ್ಯಗಳಲ್ಲಿ ಈ ರೀತಿ ಆಗಿದ್ದರೆ ಸರ್ಕಾರಕ್ಕೆ ಒಳ್ಳೆಹೆಸರು ಖಂಡಿತವಾಗಿ ಬರುತ್ತಿತ್ತು. ಅನೇಕ ಸದಸ್ಯರು ಹಾಗೂ ಗಣ್ಯವ್ಯಕ್ತಿಗಳೂ ಮಂತ್ರಿಗಳ ಹತ್ತಿರಹೋಗಿ ನಮ್ಮ ಕ್ಷೇತ್ರದ ಜನಗಳ ಕಷ್ಟ ಹೀಗೀಗೆ ಇದೆ ಕುಡಿಯುವುದಕ್ಕೆ ನೀರಿಲ್ಲ, ಆಹಾರ ಪದಾರ್ಥಗಳ ಬೆಲೆಗಳು ಇಷ್ಟುಜಾಸ್ತಿ ಇದೆಯೆಂದು ಹೇಳಿರುವುದನ್ನು ನಾನು ಕೇಳಿದ್ದೇನೆ. ಪರಿಸ್ಥಿತಿ ಅಲ್ಲಿ ಹೀಗಿದ್ದರೂ ಇದುವರೆಗೂ ಸರ್ಕಾರ ತ್ವರಿತವಾದ ರಿಲೀಫ್ ಕಾಮಗಾರಿಗಳನ್ನು ತೆಗೆದುಕೊಂಡಿಲ್ಲ. ನಿರುದ್ಯೋಗಿಗಳಿಗೆ ಕೆಲಸಗಳನ್ನು ಒದಗಿಸುವ ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿತ್ತು. ಸರ್ಕಾರ ಈ ವಿಚಾರದ ಬಗ್ಗೆ ಕ್ರಮವನ್ನು ತೆಗೆದುಕೊಳ್ಳದೆ ಈ ದಿವಸ ಅಲ್ಲಿನ ಪರಿಸ್ಥಿತಿಯನ್ನು ಬಹಳ ವಿಕೋಪಕ್ಕೆಡೆಕೊಟ್ಟ ಹಾಗಾಗಿದೆ. ಹಳ್ಳಿಗಾಡಿನ ಜನತೆಗಳಿಗಾಗಿ ತುಂಬಾ ತೊಂದರೆಯಾಗಿದೆ. ಮುಖ್ಯವಾಗಿ ಕೂಲಿಗಾರರರಿಗೆ ಹಾಗೂ ಬಡರೈತರಿಗೆ ಉದ್ಯಮಗಳನ್ನು ಒದಗಿಸುವುದಕ್ಕೆ ತಕ್ಕ ಕಾಮಗಾರಿಗಳನ್ನು ಕೈಗೊಳ್ಳಬೇಕು. ಯಾವುದೋ ರಸ್ತೆಪಕ್ಕದಲ್ಲಿರುವ ಕೆರೆಗಳ ಕಾಮಗಾರಿಗಳನ್ನು ತೆಗೆದುಕೊಂಡರೆ ಸಾಲದು. ತಾಲ್ಲೂಕು ಮತ್ತು ಜಿಲ್ಲೆಗಳಲ್ಲರತಕ್ಕ ಅಧಿಕಾರಿಗಳು ಆ ಪ್ರದೇಶದ ಜನರಿಗೆ ಬೇಡವಾದಂತಹ ಪ್ರದೇಶದ ಕಾಮಗಾರಿಗಳನ್ನು ತೆಗೆದುಕೊಂಡರೂ ಸಾಲದು, ಜಿಲ್ಲೆಯ ಎಲ್ಲಾ ಪ್ರದೇಶಗಳಲ್ಲಿಯೂ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕು, ಮತ್ತು ನಿರುದ್ಯೋಗಿಗಳಿಗೆ ತಕ್ಕ ಕೆಲಸಗಳನ್ನು ದೊರಕಿಸಿಕೊಡಬೇಕೆಂದು ನಾನು ಒತ್ತಾಯಮಾಡತ್ತೇನೆ. ಅನೇಕ ಸಂದರ್ಭಗಳಲ್ಲಿ ಈ ಶಾಸನ ಸಭೆಯಲ್ಲಿಯೂ ಹೊರಗಡೆಗಳಲ್ಲಿಯೂ ಕೋಲಾರದಲ್ಲಿ ಮಳೆಬೀಳುವುದೇ ಬಹಳ ಕಡಿಮೆ ಎಂದು ತಿಳಿದು ಬಂದಿದೆ? 10 ವರ್ಷಗಳಲ್ಲಿ ಎರಡು ವರ್ಷಗಳುಮಾತ್ರ ಬೆಳೆ ಆಗುವುದಕ್ಕೆ ಮಾತ್ರ ಅನುಕೂಲವಿರುವುದರಿಂದ ಈ ಪ್ರದೇಶದಲ್ಲಿ ಶಾಶ್ವತ ಬಾಗಿಪರಿಹಾರಕ್ರಮಗಳನ್ನು ತೆಗೆದುಕೊಳ್ಳಬೇಕು. ಕೋಲಾರ ಮತ್ತು ಚಿತ್ರದುರ್ಗ ಬಯಲುಸೀಮೆಯಾಗಿರುವುದರಿಂದ ಮಲೆನಾಡು ಡೆವಲಪ್‌ಮೆಂಟ್ ಬೋರ್ಡ್‌ರೀತಿಯಲ್ಲಿ ಕೋಲಾರದಲ್ಲಿ ಒಂದು ಡೆವಲಪ್‌ಮೆಂಟ್ ಬೋರ್ಡನ್ನು ರಚನೆಮಾಡಬೇಕು. ಈ ರೀತಿ ಅಭಾವಪರಿಸ್ಥಿತಿ ಇಲ್ಲಿ ಒದಗುತ್ತಾ ಇರುವುದರಿಂದ ಇಲ್ಲಿ ಶಾಶ್ವತ ಪರಿಹಾರ ಕಾಮಗಾರಿಗಳನ್ನು ಕೈಗೊಳ್ಳಬೇಕು ಮತ್ತು ಕೇವಲ ಬೆಂಗಳೂರಿನಲ್ಲಿಯೇ ಪರಿಹಾರ ಕಾಮಗಾರಿಗಳನ್ನು ತೆಗೆದುಕೊಳ್ಳುವುದಕ್ಕೆ ಬದಲಾಗಿ ಕೋಲಾರದಲ್ಲಿಯೂ ಆ ರೀತಿ ಮಾಡಬಾರದೇ ಎಂದು ನಾನು ಒತ್ತಾಯಮಾಡುತ್ತೇನೆ. ಸರ್ಕಾರದವರು ಕೆ. ಜಿ. ಎಫ್. ಒಂದನ್ನು ಬಿಟ್ಟರೆ ಬೇರೆ ಯಾವ ಪ್ರದೇಶದಲ್ಲಿಯೂ ಯಾವ ಬೃಹತ್ ಕೈಗಾರಿಕೆಗಳನ್ನೂ ಕೋಲಾರದಲ್ಲಿ ಮಾಡುವುದಕ್ಕೆ ಏಕೋ ಮನಸ್ಸು ಮಾಡಲಿಲ್ಲ. ಈ ತರಹ ಸರ್ಕಾರದ ಧೋರಣೆ ಜನಗಳಿಗೆಸರಿಬೀಳಲಿಲ್ಲ. ಸ್ವಾತಂತ್ರ್ಯ ಬರುವುದಕ್ಕೆ ಮುಂಚೆ ಹಿಂದೆ ಹೇಳಿದಂತಹ ಹೇಳಿಕೆಗಳ ಬಗ್ಗೆ ಒಂದು ನಿರಾಶಾ ಮನೋಭಾವನೆ ನಮ್ಮ ಜನಗಳಲ್ಲಿ ಬೆಳೆಯುತ್ತಿದೆ. ನಮ್ಮ ದೇಶದ ಪುರೋಭಿವೃದ್ಧಿ ದೃಷ್ಟಿಯ ಬಗ್ಗೆ ಜನಗಳಲ್ಲಿ ಈ ರೀತಿಯ ಮನೋಭಾವನೆ ಬೆಳೆಯುವುದಕ್ಕೆ ಸರ್ಕಾರ ಅವಕಾಶವನ್ನು ಕೊಡಬಾರದು. ಕೂಡಲೇ ಶಾಶ್ವತ ಪರಿಹಾರ ಕ್ರಮಗಳನ್ನು ಆಂದರೆ-ಡೀಸಿಲ್ಟ್ ಮಾಡುವುದು, ಕುಡಿಯುವ ನೀರಿಗೆ ಎಲ್ಲೆಲ್ಲ ಅಭಾವವಿದೆಯೋ ಅಲ್ಲಲ್ಲಿ ಕುಡಿಯುವ ನೀರಿನ ಬಾವಿಗಳನ್ನು ತಾತ್ಕಾಲಿಕವಾಗಿಯಾದರೂ, ತೆಗೆಸುವುದು, ಎಲ್ಲಕ್ಕಿಂತಲೂ ಮುಖ್ಯವಾಗಿ ಫೇರ್‌ಪ್ರೈಸ್ ಡಿಪೋಗಳನ್ನು

(ಶ್ರೀ ಪಿ. ವೆಂಕಟಗಿರಿಯಪ್ಪ)

ಗ್ರಾಮಾಂತರ ಪ್ರದೇಶಗಳಲ್ಲಿ ತೆರೆಯುವುದು ಮತ್ತು ರೈತರಿಗೆ, ವ್ಯವಸಾಯ ಕೂಲಿಗಾರರಿಗೆ ಹಾಗೂ ಬಡವರಿಗೆ ಸುಲಭವಾಗಿ ಆಹಾರ ಧಾನ್ಯಗಳು ದೊರೆಯುವಂತೆ ಮಾಡುವುದು-ಇವನ್ನು ಜಾಗ್ರತೆ ಮಾಡಬೇಕೆಂದು ಸರ್ಕಾರಕ್ಕೆ ಒತ್ತಾಯಮಾಡಿ ನನ್ನಮಾತನ್ನು ಮುಗಿಸುತ್ತೇನೆ.

† Sri B. V. MAGAVI (Haveri).—While parts of our State are facing acute conditions, so far as Haveri taluk is concerned, there is actually famine and it is having all its consequences. I have heard so many members now speaking about the difficulties or stating that the position may deteriorate in a couple of days or within a fortnight, but to tell you very honestly, the position has already deteriorated in my own taluk and there have been instances of stray deaths owing to starvation and non-availibility of food. So I do not wish to seek the help of the Government now because it is rather difficult or not proper to call the doctor when the doctor is on the death-bed. The scarcity conditions in the State have become a usual phenomenon and unless the Government has certain foresight about it, I am afraid there are certain things more dangerous than this that are in store for us. We have really to take into consideration the prime factor and the deep implications than trying to find out certain scarcity relief measures every year. I would certainly draw attention towards the increasing population and I feel that none of the Governments, either the Centre or the State Governments, have taken any drastic measure pertaining to that. Speaking of our own State, I give the statistics as follows :

> " In 1921 the population of our State was 1,33,77,000. In 1931 the population increased to 1,46,32,000. In 1941, it steadily increased to 1,62,55,000 and in 1951 it shoots up to 1,94,01,000 and in 1961 it is 2,35,87,000."

There was a steady rise of 10.18 per cent between 1921 and 1931 and subsequently 11.01 per cent between 1931 and 1941. During the post-Independence period, it has shot up to 19.20 per cent and rise in the last decade is 21.58 per cent. Obviously the rate of increase has doubled after independence. It is a major cause for upsetting the results of our Five-Year Plans and shows our inability to meet the targets. It is also the prime cause for bringing in scarcity and near famine conditions in our State every year. There is no point in merely blaming the Government or the ruling party. It needs some introspection from every one of us. What we as a nation have done so far about it ? How far our preventive checks have been successful ? Have our family planning centres succeeded in their mission ? The result is really discouraging.

It is time for the Union Government and the States Governments to pass and think rather seriously about it. This meance should be fought with determination. A half heartd approach may not only not yield any result but on the other hand is likely to lead the country to

calamity and disaster. Positive and firm measures should be adopted to meet this imminent danger.

Secondly, the food production. We have not been able to show progress as regards the food production and our achievements in extensive as well as intensive cultivation are very meagre. Adverse climatic conditions have made the position still worse. The statistical figures as far as they are available, show a downward tendency during the recent years. Our income from agriculture and other ancillary activities in 1959-60 was Rs. 412.48 crores which dropped down in 1960-61 to Rs. 396.28 crores. The figures for subsequent years are not available, but I am sure it has slackened down owing to adverse climatic conditions.

During the same period, there has been comparative drop in the *per capita* income and the same has dropped to 124.83 from 126.80 (based on 1956-57). Let us compare these figures with the cost of living index. Taking the figures of Bangalore city alone, there is a substancial rise. The price indices on food during the first quarter of 1963 were as follows.

January 1963	...	516.20
February ,,	...	517.20
March ,,	...	520.25

The food values for a similar period in 1964 were as follows :

January 1964	...	538.06
February ,,	...	544.33
March ,,	...	544.49.

There is a marked increase in the prices of foodgrains during the present year. One can just imagine the plight of the common man who cannot make both ends meet unless he starves for a couple of days in a week. What is the solution for this problem. The solution is in a strong determination on the part of the Government accampanied by equally strong action to increase our output and check the growth of population. The Government should take drastic measures with regard to both and all political parties should co-operate with the Government in their endeavour. I know drastic measures to check population would mean curtailing individual liberty, which is *ultra vires* of the Constitution. The high sounding words like individual liberty and fundamental rights loose their meaning with people who cannot afford two squares meals a day. What the resurgent people of a country like India or even Afro-Asian countries need to-day is the fundamental right to live with accessibility to bare requirements of life. If this is denied to them, I am afraid democracy and fundemental rights would be merely a sham and mockery.

ಶ್ರೀ ಆರ್. ಮುನಿಸ್ವಾಮಯ್ಯ (ದೇವನಹಳ್ಳಿ).—ಸ್ವಾಮಿ, ಬೆಂಗಳೂರು ಜಿಲ್ಲೆಯಲ್ಲಿ ಯಾರಾದರೂ ಅಭಾವ ಪರಿಸ್ಥಿತಿಯ ವಿಷಯವನ್ನು ಮಾತನಾಡುತ್ತಾರೆಂದರೆ ಕೆಲವು ಮಾನ್ಯ ಸದಸ್ಯರಿಗೆ ಸ್ವಲ್ಪ ತಮಾಷೆಯಾಗಿ ಕಾಣುತ್ತದೆ. ಈ ವಿಷಯದಲ್ಲಿ ನನ್ನ ಒಂದು ಅನುಭವವನ್ನು ಹೇಳುವುದಾದರೆ.

(ಶ್ರೀ ಆರ್. ಮುನಿಸಾಮಯ್ಯ)

ಬೆಂಗಳೂರನ್ನು ಗಮನಕ್ಕೆ ತೆಗೆದುಕೊಳ್ಳದೆ, ಸ್ವಲ್ಪ ಅಲಕ್ಷ್ಯ ರೀತಿಯಿಂದ ನೋಡುವ ಹಾಗೆ ಕಾಣುತ್ತದೆ. ಬೆಂಗಳೂರಿನಲ್ಲಿ ಯಾವ ಅಭಾವವೂ ಉಂಟಾಗಿಲ್ಲ. ಸಾಧಾರಣವಾಗಿ ಇಲ್ಲಿ ಅಭಾವ ಪರಿಸ್ಥಿತಿ ಇಲ್ಲ ಎಂದು ಹೇಳಬಹುದು. ಏತಕ್ಕೆಂದರೆ ಇಲ್ಲಿ ಹೊಟೇಲುಗಳಲ್ಲಿ ಬೇಕಾದಷ್ಟು ಅನ್ನ ಆಹಾರಗಳು ದೊರೆಯುತ್ತವೆ. ಇಲ್ಲಿ ನಾಟಕಗಳಲ್ಲಿ ಸಿನಿಮಾಗಳಲ್ಲಿ ಬೇಕಾದಷ್ಟು ಆನಂದ ಮತ್ತು ವಿನೋದಗಳು ದೊರಕುತ್ತವೆ. ಇಲ್ಲ ಬೇಕಾದಷ್ಟು ಫ್ಯಾಕ್ಟರಿಗಳು ಇರುವುದರಿಂದ ಕಾರ್ಮಿಕರಿಗೆ ಬೇಕಾದಷ್ಟು ಹಣಕಾನು ದೊರಕುತ್ತದೆ. ಬೆಂಗಳೂರು ನಗರ ಜಿಲ್ಲೆಯಲ್ಲಿ ಅಭಾವವಿದೆ ಎಂದು ನಾನೂ ಸಹ ಒಪ್ಪಿಕೊಳ್ಳುವುದಿಲ್ಲ. ಈ ವಿಚಾರದಲ್ಲಿ ನಾನೂ ಸಹ ಆಹಾರ ಮಂತ್ರಿಗಳಿಗೆ ಬೆಂಬಲವಾಗಿ ನಿಲ್ಲುತ್ತೇನೆ. ಆದರೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯನ್ನು ನಾವು ಬಹಳ ತೀವ್ರತೆಯಿಂದ ನೋಡಬೇಕಾಗಿದೆ.

ಈ ಸಲ ಯುಗಾದಿ ಹಬ್ಬ ಕಳೆದಮೇಲೆ ವರ್ಷ ವರ್ಷವೂ ಬರುತ್ತಿದ್ದ ಮಳೆ ಬರಲಿಲ್ಲ. ರೇವತಿ, ಅಶ್ವಿನಿ, ಭರಣಿ ಈ ಮಳೆಗಳು ಯಾವುವೂ ಸಕಾಲದಲ್ಲಿ ಬರಲಿಲ್ಲ. ಬಂದಂಥ ಒಂದೆರಡು ಹದದ ಮಳೆಗಳೂ ಅಕಾಲದಲ್ಲಿ ಬಂದು ಉಳುಮೆಗೆ ಅವಕಾಶವಿಲ್ಲದೆ ಹೊಲಗಳು ಹಾಗೆಯೇ ಇರುತ್ತವೆ. ಬೆಂಗಳೂರು ಜಿಲ್ಲೆಯ ಉತ್ತರ ಭಾಗದಿಂದ ಹಿಡಿದು ಚಿಂತಾಮಣಿ ಹಾಗೂ ಕೋಲಾರ ಜಿಲ್ಲೆಯಲ್ಲಿ ಎಲ್ಲಿ ಹೋಗಿ ನೋಡಿದರೂ ಯಾವ ಕುಂಟೆಯಲ್ಲಾಗಲೀ, ಯಾವ ಕೆರೆಯಲ್ಲಾಗಲೀ ಒಂದು ತೊಟ್ಟು ನೀರೂ ಇಲ್ಲದೇ ಒಣಗಿ ಹೋಗಿರುವುದನ್ನು ಕಾಣಬಹುದು. ಮೊನ್ನೆ ಭರಣಿ ಮಳೆ ಸ್ವಲ್ಪ ಬಂದು ಹುಲ್ಲು ಹಸಿರಾಗಿ ಬೆಳೆದು ಮನಸ್ಸಿಗೆ ಸ್ವಲ್ಪ ಆನಂದವುಂಟಾಗುತ್ತಿದೆ. ಭರಣಿ ಮಳೆ ಬೀಳದೆ ಇರುವ ಕಡೆಗಳಲ್ಲಿ ಅದೂ ಇಲ್ಲ. ಎಲ್ಲೂ ಕೂಡ ಬಿತ್ತನೆಯಾಗುವ ಸ್ಥಿತಿಯಲ್ಲಿಲ್ಲ.

3-00 P.M.

ಸ್ವಾಮಿ, ಬೆಂಗಳೂರು ಜಿಲ್ಲೆಯಲ್ಲ ಸಾಧಾರಣವಾಗಿ ಯಾವಾಗಲೂ ರಾಗಿ ಬೆಳೆಯೇ ಹೆಚ್ಚು. ಆಧಾರವಾಗಿರತಕ್ಕ ಆಹಾರ. ಈ ಬೆಳೆಗೆ ಮಳೆಯೇ ಆಧಾರ. ಕೆರೆಗಳಲ್ಲ ನೀರಿಲ್ಲ, ನಮ್ಮ ಜಿಲ್ಲೆಯಲ್ಲ ಕೆರೆಗಳು ಬೇಕಾದಷ್ಟಿವೆ. ಅವೆಲ್ಲ ಒಂದೇ ಬೆಳೆ ಬತ್ತಕ್ಕೆ ಆಗುವಷ್ಟು ನೀರು ಹಿಡಿಯುವ ಕೆರೆಗಳು. ಈ ಕೆರೆಗಳಲ್ಲಿ ಹೂಳು ತುಂಬಿ ಹೋಗಿದ್ದು, ಅದನ್ನು ತೆಗೆಸದೆ ಇರುವುದರಿಂದ ಕೆರೆಗಳಲ್ಲ ಹಿಡಿಯುವ ನೀರು ಬತ್ತದ ಬೆಳೆಗೆ ಮೂರು ತಿಂಗಳು ಸಹಾ ಆಗುವುದಿಲ್ಲ. ಇದರಿಂದ ಕೆರೆಗಳ ಅಚ್ಚುಕಟ್ಟನಲ್ಲ ಬರಕ್ಕ ಬೆಳೆ ಬಹಳ ಕಡಮೆಯಾಗಿ ಆಹಾರ ಪದಾರ್ಥಗಳನ್ನು ಸಾಕಾದಷ್ಟು ಒದಗಿಸುವುದಕ್ಕೆ ಅವಕಾಶವಿಲ್ಲದೆ ಹೋಗುತ್ತಿದೆ. ಅದಕ್ಕೋಸ್ಕರ ಆ ಕೆರೆಗಳಲ್ಲಿ ತುಂಬಿರುವ ಹೂಳನ್ನು ತೆಗೆಸಿ ಕೆರೆಗಳಲ್ಲ ಹೆಚ್ಚು ನೀರು ಹಿಡಿಯುವಹಾಗೆ ಮಾಡಬೇಕೆಂದು ಒತ್ತಾಯವಾಗಿ ಹೇಳುತ್ತೇನೆ.

ಸರ್ಕಾರ ಈ ಕೆಲಸಗಳನ್ನು ಮಾಡುವುದಕ್ಕೆ ಬೇಕಾದಷ್ಟು ಹಣವನ್ನು ಒದಗಿಸಬೇಕು. ಸರ್ಕಾರದಲ್ಲ ಹಣವಿಲ್ಲದೇ ಇದ್ದರೆ ಸಾಲವನ್ನು ಎತ್ತಬೇಕು ಇಲ್ಲದೇ ಹೋದರೆ ಕೇಂದ್ರ ಸರ್ಕಾರದಿಂದ ತರಬೇಕು. ಒಟ್ಟಿನಲ್ಲ ಈ ಕೆಲಸಗಳನ್ನು ಮಾಡಿ ಜನಗಳಿಗೆ ಆಹಾರವನ್ನು ಒದಗಿಸಬೇಕು. ಆಹಾರವನ್ನು ಒದಗಿಸಲು ಉದ್ಯೋಗವನ್ನು ಕೊಡಬೇಕು. ಈಗ ಜನಗಳಿಗೆ ಉದ್ಯೋಗವಿಲ್ಲದೆ ಹಳ್ಳಿಯಿಂದ ಹಳ್ಳಿಗೆ, ಊರಿನಿಂದ ಊರಿಗೆ, ಗ್ರಾಮಗಳಿಂದ ಪಟ್ಟಣಗಳಿಗೆ ಕೆಲಸಕ್ಕಾಗಿ ಅಲೆಯುತ್ತಿರತಕ್ಕ ಜನ ನಮ್ಮ ಕಣ್ಣಿಗೆ ಕಾಣಿಸುತ್ತಿದ್ದಾರೆ. ದೇವನಹಳ್ಳಿಯ ಉತ್ತರ ಭಾಗ, ಹೊಸಕೋಟೆ ತಾಲ್ಲೂಕಿನ ಉತ್ತರ ಭಾಗ, ದೊಡ್ಡಬಳ್ಳಾಪುರದ ಉತ್ತರ ಭಾಗ, ಇವು ದಿವಂಗತ ವಿಶ್ವೇಶ್ವರಯ್ಯನವರು ದಿವಾನರಾಗಿದ್ದ ಕಾಲದಿಂದಲೂ ಅಭಾವ ಪರಿಸ್ಥಿತಿಯ ಭಾಗಗಳೆಂದು ರಿಕಾರ್ಡಿನಲ್ಲಿ ನಮೂದಾಗಿದೆ ಅಂಥ ಕಡೆ ಬೇಕಾದಷ್ಟು ಬಾವಿಗಳನ್ನು ತೆಗೆಸಿಕೊಡಬೇಕು. ಬಾವಿಗಳನ್ನು ವೈಯಕ್ತಿಕವಾಗಿ ತೆಗೆಸುವುದಕ್ಕಾಗಲೀ, ಸಾಮೂಹಿಕವಾಗಿ ತೆಗೆಸುವುದಕ್ಕಾಗಲೀ, ಸರ್ಕಾರ ಪ್ರೋತ್ಸಾಹ ಮಾಡಬೇಕು. ಸಹಕಾರ ರೀತಿಯಲ್ಲಾಗಲೀ, ಸರ್ಕಾರದವರು ನೇರವಾಗಿ ಸಾಲ ಕೊಡುವ ರೀತಿಯಲ್ಲಾಗಲೀ ಸಹಾಯ ಮಾಡಿ ರೈತರು ಬಾವಿಗಳನ್ನು ತೆಗೆಸಿ ಜನಗಳಿಗೆ ಉದ್ಯೋಗವನ್ನು ಕೊಟ್ಟು ಅದರಿಂದ ಆಹಾರ ವಸ್ತುಗಳನ್ನು ತೆಗೆದುಕೊಳ್ಳುವುದಕ್ಕೆ ಸಹಾಯ ಮಾಡಬೇಕು, ಈಗ ಆಹಾರವಿಲ್ಲದ ಅಲ್ಲಿಯ ಜನರು ಅನಾವಶ್ಯಕವಾಗಿ ಬೆಂಗಳೂರಿಗೆ ಬಂದು ಬಿಕ್ಷುಕರಾಗಿ ತಿರುಗುತ್ತ, ಭಿಕ್ಷುಕರ ಕಾಲೋನಿಗೆ ಹೋಗದಂತೆ ಅವರಿಗೆಲ್ಲ ಕೆಲಸ ದೊರಕಿಸಿ ಕೊಡುವ ವ್ಯವಸ್ಥೆ ಮಾಡಬೇಕು ಎಂದು ಹೇಳುತ್ತೇನೆ.

ಬೆಂಗಳೂರು ಜಿಲ್ಲೆಯ ಉತ್ತರ ಭಾಗ ಯಾವತ್ತಿಗೂ ಅಭಾವ ಪರಿಸ್ಥಿತಿಗೆ ಒಳಗಾಗಿರತಕ್ಕ ಪ್ರದೇಶ. ಅಲ್ಲಿ ಅನೇಕ ಕೆರೆಗಳಿಗೆ ಫೀಡರ್ ಚಾನಲ್ಸ್ ತೋಡಿಸಬೇಕು ಎಂದು ಗ್ರಾಮ ಪಂಚಾಯಿತಿ

ಯವರು, ತಾಲ್ಲೂಕು ಬೋರ್ಡಿನವರು ಮತ್ತು ವೈಯಕ್ತಿಕವಾಗಿ ಜನರೂ ಲೋಕೋಪಯೋಗಿ ಮಂತ್ರಿಗಳಿಗೆ, ಮತ್ತು ಮಾನ್ಯ ಮುಖ್ಯಮಂತ್ರಿಗಳಿಗೆ ಅರಿಕೆ ಮಾಡಿಕೊಂಡಿದ್ದಾರೆ. ಆದರೂ ಯಾವ ಕೆಲಸವೂ ನಡೆದ ಹಾಗೆ ಕಾಣುವುದಿಲ್ಲ. ಪೈನೀರ್ ಇರಿಗೇಷನ್ ಉಪಮಂತ್ರಿಗಳು ಆ ಕೆಲಸಗಳನ್ನೆಲ್ಲಾ ಮಾಡಿಕೊಡುತ್ತೇವೆಂದು ಹೇಳಿದರು. ಒಂದನ್ನೂ ಮಾಡಿದ್ದು ಕಾಣಲಿಲ್ಲ. ಜಾಗ್ರತೆಯಾಗಿ ಚುರುಕಾಗಿ ಕೆಲಸ ಮುಗಿಸುವುದಕ್ಕೆ ಪಬ್ಲಿಕ್ ವರ್ಕ್ಸ್ ಇರಾಖೆಯವರನ್ನು ಚುರುಕುಗೊಳಿಸುವುದಕ್ಕೆ ಚೈತನ್ಯವನ್ನು ಪಡೆಯಬೇಕೆಂದು ಮಾನ್ಯ ನಣ್ಣ ನೀರಾವರಿ ಉಪ ಮಂತ್ರಿಗಳಿಗೆ ಹೇಳುತ್ತೇನೆ.

ರಾಜ್ಯದಲ್ಲಿ ಅಭಾವವಿರುವ ಎಲ್ಲ ಕಡೆಗಳಲ್ಲಿಯೂ ಫೇರ್ ಪ್ರೈಸ್ ಡಿಪೋಗಳನ್ನು ತೆಗೆಯಬೇಕು ಸ್ಟೇಟ್ ಟ್ರೇಡಿಂಗ್ ಮೂಲಕ ಆಹಾರ ಧಾನ್ಯಗಳನ್ನು ಸಗಬರಾಜು ಮಾಡುತ್ತೇವೆಂದು ಹೇಳಿದ್ದಾರೆ. ಮಧ್ಯಸ್ಥಗಾರರಾಗಿ ವ್ಯಾಪಾರಸ್ಥರು ಪಡೆಯುತ್ತಿರುವ ಲಾಭವನ್ನು ಸ್ಟೇಟ್ ಟ್ರೇಡಿಂಗ್ ಅಧಿಕಾರಿಗಳು ತಿಂದು ಹಾಕುತ್ತಾರೆ ಎನ್ನುವ ಅನುಮಾನ ಇದೆ. ಆ ರೀತಿ ಆಗದಂತೆ ಸ್ವಲ್ಪ ಎಚ್ಚರಿಕೆಯಿಂದ ನೋಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ಅಧ್ಯಕ್ಷರೇ, ಪ್ರತಿ ಅಧಿವೇಶನದ ಒಂದೊಂದು ವರ್ಷದಲ್ಲಿಯೂ ಕ್ಷಾಮ ಪರಿಸ್ಥಿತಿಯ ಬಗ್ಗೆ ಮಾತನಾಡತಕ್ಕ ಪದ್ಧತಿ ನಮ್ಮ ಸಾಸನ ಸಭೆಯಲ್ಲಿ ಪದೇ ಪದೇ ಕಂಡು ಬರುತ್ತದೆ. ಈ ಕ್ಷಾಮ ಪರಿಸ್ಥಿತಿ ಬರುವುದಕ್ಕೆ ಕಾರಣವೇನು, ನಾವು ಮಾಡತಕ್ಕ ಕಾರ್ಯದಲ್ಲಿ ಏನು ಲೋಪದೋಷಗಳಾಗಿ ಎನ್ನುವುದನ್ನು ಕಂಡುಇಡಿಯುವುದಕ್ಕೆ ಎಷ್ಟು ಜನ ಶಾಸನ ಸಭಾ ಸದಸ್ಯರು ಹೇಳಿದರೂ ಕೂಡ ಇದುವರೆಗೂ ವ್ಯವಸ್ಥಿತವಾದ ಒಂದು ಕಾರ್ಯಕ್ರಮವನ್ನು ಅನುಸರಿಸಿಲ್ಲ. ಕ್ಷಾಮದ ವಿಷಯ ಮಾತನಾಡುವಾಗ ಅವರ ಪಕ್ಷ ಇವರ ಪಕ್ಷ ಎನ್ನುವ ಭೇದ ಭಾವವಿಲ್ಲದೆ. ಎಲ್ಲ ಪಕ್ಷದ ಸದಸ್ಯರೂ ಒಂದೇ ಸಮನಾಗಿ ದೇಶಾದ್ಯಂತ ಇರತಕ್ಕ ಕ್ಷಾಮದ ವಿಚಾರವನ್ನು ಸರಿಯಾಗಿ ವಿವರಿಸಿದ್ದಾರೆ. ಆದರೆ ನಾವು ಇತ್ತೀಚೆಗೆ ಪತ್ರಿಕೆಗಳಲ್ಲಿ ಓದಿದಾಗ ಮಾತ್ರ ರೈತನಿಗೆ ನಂಬಂಧ ಪಟ್ಟಂತ ಅಭಾವ ಎಷ್ಟಿದ್ದರೂ ಕೊಡ ಭಾಷಣದ ಅಭಾವ ಏನೇನೂ ಇಲ್ಲ ಎಂದು ಗೊತ್ತಾಯಿತು. ನಣ್ಣ ನೀರಾವರಿ ಉಪ ಮಂತ್ರಿಗಳು ಹೇಳಿದರು ನಮ್ಮ ಹತ್ತಿರ ಬೇಕಾದಷ್ಟು ಯೋಜನೆಗಳಿವೆ, ಪೈಲೆಟ್ ಪ್ರಾಜೆಕ್ಟ್‌ಗಳಿವೆ, ಮಾಸ್ಟರ್ ಪ್ಲಾನ್ ಇದೆ ಎಂದು ಏನೇನೋ ಹೇಳುತ್ತಾರೆ ಆ ಯೋಜನೆಗಳಿವೆ ಎಂದು ಹೇಳುವುದನ್ನು ನೋಡಿ ತೃಪ್ತಿ ಪಟ್ಟುಕೊಳ್ಳಬೇಕೆ ಏನಾ ಮಾಸ್ಟರ್ ಪ್ಲಾನ್ ಎಂದರೆ ಏನು ಎಂಬುದನ್ನು ತಿಳಿದುಕೊಂಡಿದ್ದಾರೆಯೋ ಇಲ್ಲವೊ ಗೊತ್ತಿಲ್ಲ. ಅವರು ಯಾವಾಗ ಮಾತನಾಡಿದರೂ ಮಾಸ್ಟರ್ ಪ್ಲಾನ್‌ನ ವಿಷಯ ಹೇಳುತ್ತಾರೆ. ಹಣ ಕೇಳಿದರೆ ಯಾವ ಕೆರೆಗೂ ಇಲ್ಲ, ಯಾವ ಕಟ್ಟೆಗೂ ಇಲ್ಲ. ಇಂಥ ಪರಿಸ್ಥಿತಿ ಬಂದಿರುವಾಗ ಇವರು ಯಾವ ಕಾರ್ಯವನ್ನು ತೆಗೆದುಕೊಂಡು ಯಾವುದನ್ನು ಕಾರ್ಯಗತ ಮಾಡುತ್ತಾರೆ ಎನ್ನುವುದು ಸ್ವಲ್ಪ ಅನುಮಾನಸ್ಪದವಾಗಿದೆ. ಇಂಥ ಸಂದರ್ಭದಲ್ಲಿ ನಾವು ಕ್ಷಾಮ ಪರಿಸ್ಥಿತಿಯನ್ನು ನೀಗಬೇಕಾದರೆ ಏನು ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು ಎನ್ನುವುದನ್ನು ಸ್ವಲ್ಪ ವಿವರಿಸಿ ಹೇಳುತ್ತೇನೆ. ಆದರೆ ನನಗೆ ಈಗ ಹೇಳುವುದಕ್ಕೆ ಸ್ವಲ್ಪ ಸಂಕೋಚವಾಗುತ್ತದೆ. ಕಾರಣ ಸರ್ಕಾರವನ್ನು ಪ್ರತಿನಿಧಿಸತಕ್ಕವರು ಯಾರು ಇಲ್ಲ. ರೈತರಿಗೆ ಸಹಾಯ ಮಾಡುತ್ತೇವೆ. ಎನ್ನತಕ್ಕ ಅನೇಕ ವಿಷಯಗಳನ್ನು ಪತ್ರಿಕೆಗಳಲ್ಲಿ ನೋಡುತ್ತೇವೆ. ಇದೆಲ್ಲ ಬರೀ ಭಾಷಣದಲ್ಲ ಮಾತ್ರ ಆಗಿದೆ. ಕಾರ್ಯದಲ್ಲ ಯಾವುದು ಆಗಿಲ್ಲ.

ಒಂದು ಕಡೆ ಕೂಲಿಗಾರರು ಮತ್ತೊಂದು ಕಡೆ ಅಧಿಕಾರ ವರ್ಗದವರು ಆಹಾರ ಧಾನ್ಯಗಳ ಧಾರಣವಾಸಿಗಳು ಜಾಸ್ತಿಯಾಗಿದೆ, ಅದನ್ನು ಕಡಿಮೆ ಮಾಡಬೇಕು ಎಂದು ಹೇಳುತ್ತಾರೆ. ಹಳ್ಳಿಯ ರೈತನಿಗೆ ಅವನು ಬೆಳೆಯುವ ಪದಾರ್ಥಗಳಿಗೆ ಸಾಕಾಷ್ಟುಪ್ರತಿಫಲ ಬರುತ್ತಿಲ್ಲ, ವ್ಯವಸಾಯಮಾಡುವುದನ್ನು ಬಿಟ್ಟು ವ್ಯಾಪಾರವನ್ನು ಮಾಡಬೇಕು ಅಥವಾ ನೌಕರಿಯನ್ನು ಹಿಡಿಯಬೇಕು ಎಂದು ಹೇಳುತ್ತಾನೆ. ಈ ಸಮಸ್ಯೆಯನ್ನು ಪರಿಹರಿಸುವುದಕ್ಕೆ ಸರ್ಕಾರ ಏನಾದರೂ ಯೋಜನೆ ಮಾಡುತ್ತಿದೆಯೇ ಎಂದರೆ ಏನೂ ಇಲ್ಲ. ತಮ್ಮ ಸಂಖ್ಯಾ ಬಲವನ್ನು ಮಾತ್ರ ಹೆಚ್ಚು ಮಾಡಿಕೊಳ್ಳುವುದಕ್ಕೆ ಪದೇ ಪದೇ ಪ್ರಯತ್ನ ಮಾಡುತ್ತಿದ್ದಾರೆ. ರೈತನಿಗೆ ಬೇಕಾದ ಅನುಕೂಲತೆಗಳನ್ನು ಮಾಡಿಕೊಡದೆ ಇದ್ದರೂ ಕೂಡ ಗಾಯದಮೇಲೆ ಬರೆ ಎಳೆದ ಹಾಗೆ ವ್ಯವಸಾಯಿಗಾರನ ಮೇಲೆ ತೆರಿಗೆಗಳನ್ನು ಹೇರುತ್ತಲೇ ಇದ್ದಾರೆ. ಬಡವರಮೇಲೆ ಈ ರೀತಿ ತೆರಿಗೆಯನ್ನು ಹಾಕಿದರೆ ಅವರಿಗೆ ಕೊಡುವುದಕ್ಕೆ ಶಕ್ತಿಇದೆಯೇ?ಇಲ್ಲವೇ ಎನ್ನುವುದನ್ನು ಯೋಚನೆ ಮಾಡಬೇಕು. ಯಾವುದಾದರೂ ತೆರಿಗೆ ಹಾಕಬೇಕಾದರೆ ಅವನಿಗೆ ಬರತಕ್ಕ ಉತ್ಪತ್ತಿ ಏನು ಅವನ ಖರ್ಚು ಏನು ಆ ಖರ್ಚುಕಳೆದು ಏನು ಉಳಿತಾಯ ಮಾಡುತ್ತಾನೆ ಎನ್ನುವುದನ್ನು ನೋಡಿ ತೆರಿಗೆ ಹಾಕ ಬೇಕೇ ವಿನಾ ಹಾಗೆಯೇ ಅವನ ಮೇಲೆ ಭಾರವನ್ನು ಹೇರಿದರೆ ಈಗ ಅಲ್ಪಸ್ವಲ್ಪ ಜನ ವ್ಯವಸಾಯ ಮಾಡುವವರೂ ಕೂಡ ವ್ಯವಸಾಯವನ್ನು ಬಿಟ್ಟು ಯಾವುದಾದರೂ ನೌಕರಿಯನ್ನು ಹುಡುಕಿಕೊಂಡು ದೇಶ ದೇಶ ಹೋಗುವುದಕ್ಕೆ ಅವಕಾಶವಾಗುತ್ತದೆ. ಅನೇಕ ಜನ ಹಳ್ಳಿಗಳನ್ನು ಬಿಟ್ಟು ಪಟ್ಟಣಗಳಿಗೆ ಬಂದು ನೆಲಸಿ ಜವಾನ್ ಕೆಲಸಕ್ಕೆ ಅರ್ಜಿಗಳನ್ನು ಹಾಕುತ್ತಿದ್ದಾರೆ. ಈ ಜನರ

(ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ)

ಸಂಖ್ಯೆ ಜಾಸ್ತಿಯಾಗಿದೆ. ಇದಕ್ಕೆ ಏನು ಕಾರಣವೆಂಬುದನ್ನು ಯೋಚನೆ ಮಾಡಬೇಕು. ಅನೇಕ ನೀರಾವರಿ ಕಾರ್ಯಗಳು ಪಬ್ಲಿಕ್ ವರ್ಕ್ಸ್ ಇಲಾಖೆಯಿಂದ ನಡೆಯಾಗಿ ಆಗುತ್ತಿಲ್ಲ. ಕಾಲುವೆಗಳನ್ನು ತೆಗೆಸುವ ಕೆಲಸದಲ್ಲಿ ಹತ್ತಾರು ವರ್ಷಗಳಿಂದಲೂ ಕಾಲುವೆಗಳನ್ನು ತೆಗೆಯುವ ಕೆಲಸ ನಿಧಾನವಾಗುತ್ತಿದೆ. ನಮ್ಮ ತಿಪಟೂರು ತಾಲ್ಲೂಕಿನಲ್ಲಿಯೇ ಈ ರೀತಿ ಅನೇಕ ಕೆರೆಗಳ ಕಾಲುವೆಗಳನ್ನು ತೆಗೆದಿಲ್ಲ. ಇಂಥ ಕೆಲಸಗಳನ್ನು ಆದಷ್ಟು ಬೇಗ ಮಾಡಿ ರೈತರಿಗೆ ಅನುಕೂಲವಾಗುವಂತೆ ಮಾಡಿಕೊಡಬೇಕು. ಇದಲ್ಲದೆ ಹಳ್ಳಿಗಳಲ್ಲಿ ನ್ಯಾಳಕ್ಕೆ ಹೋಗಿ ನೋಡಿದೆ ಅಣೆವಾರಿ ಬೆಳೆ ಇಷ್ಟಾಗಿದೆ ಮತ್ತು ಇಷ್ಟು ಇಂಚು ಮಳೆಯಾಗಿದೆ,ತಾಲ್ಲೂಕು ಆಫೀಸು ಪಕ್ಕದಲ್ಲಿ ಎಂದು ಬರೆಯುತ್ತಾರೆ. ಇದಲ್ಲದೆ ಕಂದಾಯದ ಮೇಲೆ ಸರ್‌ಚಾರ್ಜ್ ವಿಧಿಸಿರುವುದು, ಪ್ರತಿ ತಾಲ್ಲೂಕಿನಲ್ಲಿಯೂ ಕಂದಾಯಗಳನ್ನು ಹೆಚ್ಚು ಮಾಡಿರುವುದು ಇವೆಲ್ಲವೂ ಕೂಡ ವ್ಯವಸಾಯಕ್ಕೆ ಧಕ್ಕೆ ತರುತ್ತಿವೆ. ಕಂದಾಯವನ್ನು ಹೆಚ್ಚು ಮಾಡುವುದಕ್ಕೆ ಪ್ರತಿ ತಾಲ್ಲೂಕಿನಲ್ಲಿಯೂ ಪ್ರತಿಭಟನೆಯನ್ನು ಸೂಚಿಸುತ್ತಿದ್ದಾರೆ. ವಿಧಾನ ಸೌಧದ ಮುಂದೆ ಉಪವಾಸ ಮಾಡಬೇಕೆಂದು ಸಹ ಇದ್ದಾರೆ.

ಗೋಕಟ್ಟೆಗಳನ್ನು ಕಟ್ಟಿಸುವುದು ಮುಂತಾದ ಸಣ್ಣ ಸಣ್ಣ ನೀರಾವರಿ ಯೋಜನೆಗಳನ್ನು ಹೆಚ್ಚು ಹೆಚ್ಚಾಗಿ ಮಾಡಿಸಬೇಕು. ಈಗ ಸರ್ಕಾರದವರು ಏನು ಮಾಡುತ್ತಿದ್ದಾರೆಂದರೆ ಗಡ್ಡಕ್ಕೆ ಬೆಂಕಿ ಬಿದ್ದಾಗ ಬಾವಿತೆಗೆಸಿದರು ಎನ್ನುವಂತೆ ಕ್ಷಾಮ ಬಂದಾಗ ಪರಿಹಾರ ಕಾರ್ಯಗಳನ್ನು ತೆಗೆದುಕೊಳ್ಳಲು ಪ್ರಯತ್ನ ಮಾಡಿದರೆ ಬಾವಿ ತೆಗೆಯುವುದರೊಳಗಾಗಿ ಗಡ್ಡ ಸುಟ್ಟು ಹೋಯಿತು ಎನ್ನುವಂತಾಗುತ್ತದೆ ಆ ರೀತಿಯಾಗದಂತೆ ಶಾಶ್ವತವಾದ ಪರಿಹಾರ ಕಾರ್ಯಗಳನ್ನು ಸರ್ಕಾರದವರು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

† ಶ್ರೀ ಆರ್. ಎನ್. ಪಾಟೀಲ್ (ರಾಮದುರ್ಗ).—ಅಧ್ಯಕ್ಷರೇ, ನಮ್ಮ ರಾಜ್ಯದಲ್ಲಿ ತಲೆದೋರಿರುವ ಅಭಾವ ಪರಿಸ್ಥಿತಿಯನ್ನು ಚರ್ಚಿಸಲು 9 ಗಂಟೆ ಕಾಲ ನಿಗದಿ ಮಾಡಿದ್ದು ಈಗ ಮತ್ತೆ ವೇಳೆಯನ್ನು ಮುಂದುವರಿಸಿರುವುದನ್ನು ಕಂಡರೆ ನಾವು ಎಷ್ಟೊಂದು ಭಯಂಕರ ಪರಿಸ್ಥಿತಿಯನ್ನು ಎದುರಿಸಬೇಕಾಗಿದೆ ಎನ್ನುವುದನ್ನು ಇದು ತೋರಿಸುತ್ತದೆ. ಸ್ವಾಮಿ, ಮನುಷ್ಯ ತನ್ನ ಶ್ರೀಮಂತಿಕೆಯನ್ನು ಹೇಳುತ್ತಿರುತ್ತಾನೆ. ಆದರೆ ಇವತ್ತು ದುರ್ದೈವದಿಂದ ನಮ್ಮ ಬಡತನವನ್ನು ತೋಡಿಕೊಳ್ಳುವಕಾಲ ನಮಗೆ ಬಂದಿದೆ. ಇದಕ್ಕೆ ಯಾರು ಹೊಣೆಗಾರರಲ್ಲ. ಪ್ರಕೃತಿಯ ವಿಕೋಪಕ್ಕೆ ತುತ್ತಾಗಿ ನಾವು ಗಳು ಈ ಪರಿಸ್ಥಿತಿಯನ್ನು ಎದುರಿಸಬೇಕಾಗಿದೆ. ಇಂದು ನಮ್ಮ ದೇಶದಲ್ಲಿ ನೂರಕ್ಕೆ 85 ಜನ ರೈತರಿದ್ದಾರೆ. ಒಕ್ಕಲುತನವನ್ನು ಅವಲಂಬಿಸಿದ್ದಾರೆ. ಹೀಗಿದ್ದು ಇಂಥ ಪರಿಸ್ಥಿತಿ ಬಂದು ಒದಗಿರುವುದು ನಮ್ಮ ದುರ್ದೈವವೆಂದೇ ಹೇಳಬೇಕು ಮಾನ್ಯ ಮಂತ್ರಿಗಳಾದ ಕೃಷ್ಣಪ್ಪನವರು ಮಾತನಾಡುತ್ತ ಒಂದು ವಿಷಯವನ್ನು ಹೇಳಿದರು: ಐದು ವರ್ಷಗಳಲ್ಲಿ ಒಂದು ವರ್ಷ ಕೆಟ್ಟದ್ದು ಇರುತ್ತದೆ, ಒಂದು ವರ್ಷ ಒಳ್ಳೆಯದು ಇರುತ್ತದೆ, ಒಂದು ವರ್ಷ ಹಾಗೂ ಹೀಗೂ ಇರುತ್ತದೆ, ಈಗ ಮೂರು ವರ್ಷ ಆಯಿತು, ಇನ್ನು ಳಿದ ಎರಡು ವರ್ಷಗಳು ಹೇಗಿದೆಯೋ ಎಂಬುದನ್ನು ಹೇಳಲಕ್ಕೆ ಬರುವುದಿಲ್ಲ ಎಂದು. ಕಂದಾಯ ಮಂತ್ರಿಗಳಾದ ಶ್ರೀಮಾನ್ ಕೃಷ್ಣಪ್ಪನವರು ದೇಶದಲ್ಲಿ ಇರತಕ್ಕಂಥ ಬಡತನ ದಾರಿದ್ರ್ಯ ಸಂಪೂರ್ಣ ನಿರ್ಮೂಲನ ಮಾಡುತ್ತೇವೆಂದು ಹೇಳಿದ್ದಾರೆ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು 17 ವರ್ಷವಾಯಿತು, ಮೊದಲನೇ ಎರಡನೇ ಪಂಚವಾರ್ಷಿಕ ಯೋಜನೆ ಮುಗಿದು ಮೂರನೇ ಪಂಚವಾರ್ಷಿಕ ಯೋಜನೆ ಮುಗಿಯವುದರಲ್ಲಿದೆ. ಆದರೂ ಕೂಡ ಇರುವುದಕ್ಕೆ ಜನರಿಗೆ ಮೂಲ ಭೂತವಾದ ಅವಶ್ಯಕತೆ ಒದಗಿಸುವುದು ಅಗದೇ ದುಃಖವಾಗುತ್ತದೆ ಮೊನ್ನೆ ದಿನ ಪ್ರಧಾನ ಮಂತ್ರಿಗಳಾದ ರಾಲ ಬಹದ್ದೂರ ಶಾಸ್ತ್ರಿಯವರು ಮಾತನಾಡುತ್ತಾ ಒಂದು ಮಾತು ಹೇಳಿದ್ದಾರೆ. ಅನ್ನ ಬಟ್ಟೆ ವಸತಿ ಎಲ್ಲರಿಗೂ ಒದಗಿಸುವುದಲ್ಲದೆ ದೇಶದಲ್ಲಿ ನಿರುದ್ಯೋಗ ನಿವಾರಣೆಯಾಗಬೇಕು ಎಂದು ಹೇಳಿದ್ದಾರೆ. ಈ ಮಾತನ್ನು ಎಲ್ಲರೂ ನೆನಪಿನಲ್ಲಿ ಇಡಬೇಕಾದುದು ಅಗತ್ಯ. ಮುಖ್ಯವಾಗಿ ಜನತೆಯ ಮೂಲ ಭೂತವಾದ ಅವಶ್ಯಕತೆ ಒದಗಿಸಬೇಕಾದುದು ಎಲ್ಲರ ಕರ್ತವ್ಯ. ಬರಗಾಲ ಪೀಡಿತ ಪ್ರದೇಶ ಎಂದರೆ ವಿಜಾಪುರ ಕೋಲಾರ ಜಿಲ್ಲೆಯ ಹೆಸರು ಹೇಳುತ್ತಾರೆ. ಬೆಳಗಾಂವ ಜಿಲ್ಲೆಯ ಹೆಸರನ್ನು ಎತ್ತುವುದಿಲ್ಲ. ಬೆಳಗಾಂವ ಜಿಲ್ಲೆಯು ಕರ್ನಾಟಕದ ರಾಣಿ ಎಂಬುದು ಯಾರಿಗೆ ಗೊತ್ತಿಲ್ಲ? ಬೆಳಗಾಂವ ಜಿಲ್ಲೆಯಲ್ಲಿ ಅಥಣಿ ರಾಯಬಾಗ ಗೋಕಾಕ ನಪ್ಪದತ್ತಿ ತಾಲ್ಲೂಕುಗಳಲ್ಲಿ ಬರಗಾಲ ಇದೆ. ಈ ಪ್ರದೇಶದಲ್ಲಿ ಕಳೆದ 15 ವರ್ಷಗಳಲ್ಲಿ 9 ಸಲ ಬರಗಾಲ ಎದುರಿಸಬೇಕಾಯಿತು. ಹೊಟ್ಟೆ ತುಂಬಾ ತಿನ್ನುವುದಕ್ಕೆ ಅನ್ನವಿಲ್ಲ: ಮೈತುಂಬಾ ಹೋದೆಯುವುದಕ್ಕೆ ಬಟ್ಟೆಯಿಲ್ಲ, ಕಣ್ಣು ತುಂಬಾ ನಿದ್ದೆಯಿಲ್ಲ. ಹೊಟ್ಟೆ ತುಂಬಾ ಅನ್ನವಿಲ್ಲದಿದ್ದರೂ ಖಾಲಿಯಾದ ಹೊಟ್ಟೆಯನ್ನು ನೀರು ಕುಡಿದು ತುಂಬಿಕೊಳ್ಳಬೇಕೆಂದರೆ ಕುಡಿಯುವುದಕ್ಕೆ ನೀರು

ಕೂಡ ಇಲ್ಲ. ನಮ್ಮ ತಾಲ್ಲೂಕಿನಲ್ಲಿ ಕುಡಿಯುವ ನೀರು ಒಂದು ಕೊಡ ತರುವುದಕ್ಕೆ ಮೂರು ನಾಲ್ಕು ಮೈಲಿಯವರೆಗೆ ಹೋಗಿ ಒಂದು ಕೊಡ ನೀರು ತರುಬೇಕಾದ ಪರಿಸ್ಥಿತಿ ಇದೆ. ಸ್ವಾತಂತ್ರ್ಯ ಬಂದು 17 ವರ್ಷವಾದರೂ ಕೂಡ ಇಂಥ ಪರಿಸ್ಥಿತಿ ಇಂದು ನಮ್ಮ ಜಿಲ್ಲೆಯಲ್ಲಿದೆ ಎಂದು ಹೇಳುವುದಕ್ಕೆ ನಾಚಿಕೆಯಾಗುತ್ತದೆ. ಬೆಂಗಳೂರು ನಗರದಲ್ಲಿ ಇರುವವರಿಗೆ ಬರಗಾಲ ಅಂದರೆ ಏನು ಎಂಬುದು ಗೊತ್ತಿರಲಿಕ್ಕಿಲ್ಲ. ಕಳೆದ 10 ವರ್ಷಗಳಲ್ಲಿ ನಾಲ್ಕೈದು ಸಲ ಕಂದಾಯ ವಸೂಲ ಸಸ್ಪೆನ್‌ಶನ್‌ಆಗಿದೆ. ಇದಲ್ಲದೆ ಈ ವರ್ಷ ಬೆಳೆಗೆ ಚಿಜ್ಜೆ ಹಿಡಿದು ಬೆಳೆ ನಾಶವಾಗಿದೆ. ಇದನ್ನು ಅಧಿಕಾರಿಗಳಿಗೆ ತಿಳಿಸಲು ಅವರು ಡಿ.ಡಿ.ಟಿ. ಹೊಡಿಯುವ ವ್ಯವಸ್ಥೆ ಮಾಡಿದರು. ಡಿ.ಡಿ.ಟಿ. ಹೊಡೆದರೂ ಚಿಜ್ಜೆ ನಾಶವಾಗಲಲ್ಲ. ಧಾರವಾಡ ವಿಜಾಪುರ ಜಿಲ್ಲೆಯಲ್ಲಿ ಡಿ.ಡಿ.ಟಿ. ಯಿಂದ ಚಿಟ್ಟೆ ನಾಶವಾದರೂ ಬೆಳಗಾಂವ ಜಿಲ್ಲೆಯಲ್ಲಿ ನಾಶವಾಗಲಲ್ಲ, ನಮ್ಮ ರಾಮದುರ್ಗ ತಾಲ್ಲೂಕಿನಲ್ಲಿ ಡಿ.ಡಿ.ಟಿ. ಯಿಂದ ಚಿಜ್ಜೆ ಏಕೆ ನಾಶವಾಗಲಲ್ಲ. ಎಂಬುದು ತಿಳಿಯದು. ಅಲ್ಲಿ ಆಗುತ್ತದೆ ಇಲ್ಲಿ ಆಗುವುದಿಲ್ಲ ಎಂಬುದನ್ನು ನೋಡಿ ದುಃಖವಾಗುತ್ತದೆ. ಅನೇಕ ರೈತರು ಲಮಾಣಿಯವರಿಗೆ ಹೊಲ ಕೊಟ್ಟು ಬಿಟ್ಟು ಬೇರೆ ಕಡೆ ಹೋಗಿದ್ದಾರೆ. ಜಮೀನು ಬಿಟ್ಟುಹೋಗುವ ಪರಿಸ್ಥಿತಿ ಜನರಿಗೆ ಬಂದಿದೆ. ನಮ್ಮ ರಾಮದುರ್ಗ ತಾಲ್ಲೂಕು ಪರಿಸ್ಥಿತಿಯ ಬಗ್ಗೆ ನಾನು ಬಜೆಟ್‌ಮೇಲೆ ಮಾಡಿದ ನನ್ನ ಭಾಷಣದಲ್ಲಿ ಒಂದು ಕಥೆ ಹೇಳಿ ವಿವರವಾಗಿ ತಿಳಿಸಿದ್ದೇನೆ. ಒಂದು ಸಲ ರಾಮದುರ್ಗದ ಜನ ಬ್ರಹ್ಮ ವಿಷ್ಣು ಮಹೇಶ್ವರ ಕಡೆ ಡೆಪ್ಯುಟೇಶನ್ ತೆಗೆದುಕೊಂಡು ಹೋದಾಗ್ಗೆ ಅಲ್ಲಿದ್ದ ದುರ್ವಾಸ ಋಷಿಗಳಿಗೆ ಉಚಿತರೀತಿಯಲ್ಲಮಾಡಲಿಲ್ಲವೆಂದು ಅವರಿಗೆ ಕೋಪಬಂದು ದುರ್ವಾಸ ಋಷಿಗಳು ನಿಮ್ಮ ಪ್ರದೇಶದಲ್ಲಿ ನಿರಂತರ ಬರಗಾಲ ಇರಲಿ ಎಂದು ಶಾಪ ಕೊಟ್ಟಿದ್ದಾರೋ ಏನೋ! ಎಂಬಂತೆ ಇದೆ. ಆಗ್ಗೆ ಏನಾಯಿತೆಂದು ಪರಿಹಾರ ಒದಗಿಸಬೇಕೆಂದು ಪ್ರಾರ್ಥಿಸಲು ಅವರು ಹೇಳಿದ್ದೇನೆಂದರೆ 1962 ರಲ್ಲಿ ಪ್ರಾರಂಭವಾಗುವ ಮೂರನೆಪಂಚವಾರ್ಷಿಕಯೋಜನೆಯಕಾಲದಲ್ಲಿ ಮೈಸೂರು ರಾಜ್ಯದ ನೀರಾವರಿ ಯೋಜನೆಯ ಡೆಪ್ಯೂಟಿ ಮಿನಿಸ್ಟರ್ ಅವರ ಕಾಲದಲ್ಲಿ ನಿಮ್ಮ ಕಷ್ಟ ಪರಿಹಾರವಾಗುತ್ತದೆ ಎಂದು ಹೇಳಿದರು. ಆಂಥ ಋಷಿಗಳ ವಾಕ್ಯವನ್ನಾದರೂ ಸತ್ಯ ಮಾಡಬೇಕು. ಇಲ್ಲಿಯವರೆಗೆ ನಮಗೆ ಎಷ್ಟು ಕಷ್ಟ ಇದೆಯೆಂಬುದನ್ನು ತಮಗೂ ಕೂಡ ಅಪೀಲ್ ಮಾಡಿಕೊಂಡಿದ್ದೇವೆ. ನಮ್ಮ ಕಡೆ ಸಬ್‌ವೆನ್‌ಶನ್ ಕೊಡುವ ಸಲುವಾಗಿ ದಯೆಯಿಟ್ಟು ನೋಡಿ ಎಂದು ಎಷ್ಟೋ ವೇಳೆ ಕೇಳಿಕೊಂಡಿದ್ದೇವೆ. ಅಧಿಕಾರಿಗಳಿಗೆ ತಿಳಿಸಿದರೂ ಅವರು ಅದಕ್ಕೆ ಲೆಕ್ಕ ಕೊಟ್ಟಿಲ್ಲ. ಪುರ್ ರಿಕವರಿ ಆಗುತ್ತದೆ; ಜೇಬಿನಿಂದ ವಸೂಲಾಗುತ್ತದೆ. ಅದನ್ನು ಬಡಜನರಿಗೆ ತಪ್ಪಿಸಬೇಕು. 15 ಇಂಚು ಕಡಿಮೆ ಮಳೆ ಆಗುವ ಪ್ರದೇಶಕ್ಕೆ ಹೆಚ್ಚು ಲಕ್ಷ್ಯ ಕೊಟ್ಟು, ಹೆಚ್ಚು ಹಣವನ್ನು ಒದಗಿಸಬೇಕು.

ಮೂರು ವರ್ಷದಿಂದ ಎಲೆಕ್ಟ್ರಿಸಿಟಿ ವಿಚಾರದಲ್ಲಿ ಪ್ರಯತ್ನ ಮಾಡುತ್ತಿದ್ದೇವೆ. ಕ್ಲಿಯರೆನ್ಸ್, ಕ್ಲಿಯರೆನ್ಸ್ ಅಂತ ಮುಂದುವರಿಸುತ್ತಿದ್ದಾರೆ. ನಮ್ಮಲ್ಲಿ ಒಂದು ಕಡೆ ಮಲಪ್ರಭೆ ಹರಿದು ಹೋಗುತ್ತಿದೆ. ಇನ್ನೊಂದು ಕಡೆ ಕೃಷ್ಣ ಮತ್ತು ಘಟಪ್ರಭಾ ಹೋಗುತ್ತಿದೆ. ದೊಡ್ಡ ದೊಡ್ಡ ನೀರಾವರಿ ಯೋಜನೆಗಳನ್ನು ಕೈಗೊಂಡಿದ್ದಾರೆ. ನೀರಾವರಿ ಯೋಜನೆಗಳ ಎರಡೂ ಕಡೆ ರಾಮದುರ್ಗವಿದ್ದರೂ ಈ ದಂಡೆಯಿಂದ ಇನ್ನೊಂದು ದಂಡೆಗೆ ಹಿಡಿದು ಹೋಗುತ್ತಿದೆ; ಏನೂ ಪ್ರಯೋಜನವಿಲ್ಲ. ನಮ್ಮಲ್ಲಿ ಕೆರೆ ಕಾಲುವೆಗಳು ಬೇಕಾದಷ್ಟಿವೆ. ತಾವು 20-25 ಕೆರೆಗಳನ್ನು ಕಟ್ಟಿದರೆ ಅರ್ಧ ಬರಗಾಲದಿಂದ ತಾಲ್ಲೂಕು ಪಾರಾದೀತು ಎಂಬ ವಿಶ್ವಾಸವಿದೆ. ನಮ್ಮಲ್ಲಿ ಚಿಕ್ಕ ನೀರಾವರಿ ಯೋಜನೆಗಳಿಗೆ ಬೇಕಾದಷ್ಟು ಸರ್ವೆ, ಪ್ಲಾನು, ಎಸ್ಟಿಮೇಟು ರೆಡಿಯಾಗಿ, ಸೂಪರಿಂಡೆಂಟಿಂಗ್ ಇಂಜಿನಿಯರ್, ಚೀಫ್ ಇಂಜಿನಿಯರ್ ಲೆವಲ್ಲಿಗೆ ಹೋಗಿ ಸರ್ಕಾರಕ್ಕೆ ಬಂದಿವೆ. ಅಡ್ಮಿನಿಸ್ಟ್ರೇಟೀವ್ ಸ್ಯಾಂಕ್ಷನ್ನೂ ಬಂದಿದೆ. ಬಜೆಟ್ಟಿನಲ್ಲಿ ಪ್ರಾವಿಷನ್ ಆಗಿರುತ್ತದೆ; ತೀವ್ರತೆಯಿಂದ ಸ್ಯಾಂಕ್ಷನ್ ಕೊಟ್ಟರೆ ಉಪಕಾರ ಮಾಡಿದಂತಾಗುತ್ತದೆ. ಬರಗಾಲ ಪರಿಹಾರಕ್ಕೆ ರಸ್ತೆ ಮಾಡಿರಿ ಅಂತ ಹೇಳುವುದಿಲ್ಲ; ಮಣ್ಣು ಚಿಕ್ಕ ರೂರಲ್ ಕಮ್ಯೂನಿಕೇಷನ್ ಮಾಡಿಕೊಡಿ ಎಂದು ಹೇಳುವುದಿಲ್ಲ. ಶಾಶ್ವತವಾದ ಪರಿಹಾರ ಕಂಡುಹಿಡಿದು ಕೆರೆ ಕಾಲುವೆಗಳನ್ನು ಕಟ್ಟಿ, ಈ ವಿಧವಾದ ದಾರುಣ ಪರಿಸ್ಥಿತಿಯಿಂದ ಪಾರು ಮಾಡಬೇಕೆಂದು ಮತ್ತೊಮ್ಮೆ ತಮ್ಮನ್ನು ಬೇಡಿಕೊಳ್ಳುತ್ತಿದ್ದೇನೆ.

ನಮ್ಮಲ್ಲಿ ಲಬರರೈಸ್ಡ್ ಸ್ಕೀಮ್ ಬೇಡಿದಷ್ಟು ಹಣ ಕೊಡುತ್ತಾರೆಂತ ಹೇಳಿ ಹಳ್ಳಿ ಜನಗಳಲ್ಲ ಬೇಕಾದಷ್ಟು ಪ್ರಚಾತ ಮಾಡಿ, ಅರ್ಜಿಗಳನ್ನು ಕೂಡಿಸಿಕೊಂಡು, ಮಾಡಿದರೆ, 10-20-25 ಬಾವಿಗಳಿಗೆ ಹಣ ನೀಡಿದರೆ ಜನರ ಬೇಡಿಕೆಗಳನ್ನು ಪೂರೈಸಿದಂತೆ ಆಗುವುದಿಲ್ಲ ಇವತ್ತಿನ ದಿವಸ ಹಳ್ಳಿಯಲ್ಲ ಬಾವಿಗೆ ಅಂತ ತೆಗೆದುಕೊಂಡು ಹೋಗಿ ಒಂದು, ಎರಡು ಇನ್‌ಸ್ಟಾಲ್‌ಮೆಂಟ್ ಹಣ ಕೊಟ್ಟಿದ್ದಾರೆ. ಮೂರನೆ ಇನ್‌ಸ್ಟಾಲ್‌ಮೆಂಟಿಗೆ ದುಡ್ಡು ಇಲ್ಲವಾಗಿದೆ. ತಾಲ್ಲೂಕು ಬೋರ್ಡ್ ಪ್ರೆಸಿಡೆಂಟರು ಇಲ್ಲಿಗೆ ಬಂದು ಈ ವಿಚಾರವನ್ನು ಮುಖ್ಯ ಮಂತ್ರಿಗಳ ಗಮನಕ್ಕೆ ತಂದಾಗ ಅವರು ಒಂದು ವಾರದೊಳಗೆ ದುಡ್ಡು ಕಳುಹಿಸುತ್ತೇವೆಂದು ಭರವಸೆ ಕೊಟ್ಟಿದ್ದಾರೆ; ಈಗಾಗಲೇ ಕಳುಹಿಸಿರಬೇಕೆಂದು ತಿಳಿದುಕೊಂಡಿದ್ದೇನೆ.

(ಶ್ರೀ ಆರ್. ಎನ್. ಪಾಟೀರ್)

ಈಗ ನಮ್ಮಲ್ಲಿ ಜನರು ವೆಲ್ ಇರ್ರಿಗೇಶ್ಡ್ ಅವಲಂಬಿಸಬೇಕಾಗುತ್ತದೆ. ಅದಕ್ಕೆ ಇಂಜನ್ನುಗಳು ಬೇಕು. ಈ ವರ್ಷ ತೆಗೆದುಕೊಂಡರೆ ಬರೇ 15-20 ಇಂಜನ್ನುಗಳನ್ನು ಕೊಟ್ಟಿದ್ದಾರೆ. ಒಂದು ಲಕ್ಷ ಪ್ರಜಾ ಸಂಖ್ಯೆ, 111 ಹಳ್ಳಿ ಇರುವಂಥ ತಾಲ್ಲೂಕಿಗೆ ಕೇವಲ 15-20 ಇಂಜನ್ನುಗಳನ್ನು ಕೊಟ್ಟರೆ ಯಾವ ರೀತಿಯಿಂದ ಸಹಾಯ ಮಾಡಿದಂತಾಗುತ್ತದೆ. ಪ್ರೋತ್ಸಾಹ ವಾತಾವರಣವನ್ನು ಜನರಲ್ಲಿ ಹುಟ್ಟಿಸಿದ್ದೇವೆ; ಸರಕಾರದಿಂದ ದುಡ್ಡು ಬರುತ್ತದೆಂದು ನಿರೀಕ್ಷಿಸಿ ಉತ್ಸಾಹದಿಂದ ಅರ್ಜಿಗಳನ್ನು ಬಡಜನರು ಕೊಟ್ಟರು. ಆ ಉತ್ಸಾಹ ಹಾಳಾಗಿ ಹೋಯಿತು. ಬಾಣಲೆಯಲ್ಲಿ ಹಾಲು ಹಾಕಿದ್ದು ಉಕ್ಕಿ ಪಾತ್ರೆ ಬದಿಯ ಕೆಳಗೆ ಇಳಿದು ಹೋದಂತೆ ಆಗುತ್ತದೆ. ಈ ಉತ್ಸಾಹವನ್ನು ಕುಗ್ಗಿಸುವುದು ಬೇಡ. ಬರಗಾಲಕ್ಕೆ ತುತ್ತಾಗಿರತಕ್ಕಂಥ ಜನಗಳಿಗೆ ಬೇಕಾದಷ್ಟು ಲೋನ್ ಕೊಡಬೇಕು. ಕೇಂದ್ರ ಸರಕಾರದಿಂದ ಸಾಲ ದೊರೆಯುತ್ತದೆ; ಸಬ್‌ಸಿಡಿ ತೆಗೆದುಕೊಳ್ಳುತ್ತೀರಿ. 15 ಇಂಚಿಗಿಂತ ಕಡಿಮೆ ಮಳೆ ಆಗುವ ಪ್ರದೇಶಗಳಿಗೆ ಆ ಸಹಾಯವನ್ನು ಮೀಸಲಾಗಿಡಬೇಕು. ನಮ್ಮ ಬಡತನವನ್ನು ಎಷ್ಟು ತೋಡಿಕೊಂಡರೂ ಕಡಿಮೆ. ನಮಗೆ ಉಪವಾಸವಿರುವುದು ರೂಢಿಯಾಗಿದೆ. ಹೊಟ್ಟೆ ತುಂಬ ತಿನ್ನುವ ಅಭ್ಯಾಸವೇ ಇಲ್ಲ. ಸಾಧಾರಣವಾಗಿ 1956ರಿಂದ, ಕಾವೇರಿ ಬಿಟ್ಟಾರಭ್ಯ ನಾನು ಒಕ್ಕಲುತನ ಮಾಡಿದ್ದೇನೆ. ಒಂದು ವರ್ಷವೂ ಪೂರ್ತಿ ಬೆಳೆ ಬಂದಿದ್ದು ಗೊತ್ತಿಲ್ಲ. ದೊಡ್ಡ ದೊಡ್ಡ ಒಕ್ಕಲುತನ ಮಾಡುವವರದು ಮತ್ತು ಮಧ್ಯಮ ವರ್ಗದ ಜನರ ಪರಿಸ್ಥಿತಿ ಯಾವ ರೀತಿಯಾಗಿದೆಯೆಂದರೆ ಸಾಮಾನ್ಯ ಕೂಲಿಗಾರರು ರಸ್ತೆ ಕೆಲಸ, ಕೆರೆ ಕೆಲಸ ಸೇರಿ ದುಡಿದು ಹೊಟ್ಟೆ ತುಂಬಿಕೊಳ್ಳುತ್ತಾರೆ. ನಮ್ಮಂಥ ಜನರನ್ನು ರಸ್ತೆ ಗ್ಯಾಂಗ್‌ಮೆನ್ ಆಗಿ ತೆಗೆದುಕೊಳ್ಳುವುದಿಲ್ಲ. ಅವರ ಪರಿಸ್ಥಿತಿ ಏನಾಗಿದೆಯೆಂದರೆ ದನಕರುಗಳಿಗೆ ಆಗಿರುವಂಥ ಪರಿಸ್ಥಿತಿ ಬಂದಿದೆ. ಅಂಥವರಿಗೆ ಧಾನ್ಯದ ಕಾಳು ಸಿಗದಂತಾಗಿದೆ. ಗೋಧಿ, ಅಕ್ಕಿ ನಮ್ಮ ತಾಲ್ಲೂಕಿಗೆ ತೀವ್ರವಾಗಿ ರವಾನೆ ಮಾಡಬೇಕು ಎಂದು ಈ ಸಭೆಯಲ್ಲಿ ಕೇಳಿಕೊಳ್ಳುತ್ತೇನೆ.

15ನೇ ತಾರೀಖು, ಇಲ್ಲಿಗೆ ಬರುವ ವಾರದೊಳಗೆ ಬೆಳಗಾಂ ಡೆಪ್ಯುಟಿ ಕಮಿಷನರಿಗೆ ಒಂದು ಲೆಟರ್ ಬರೆದಿದ್ದೇನೆ. ರಾಮದುರ್ಗದಲ್ಲಿ 17 ಸಾವಿರ ಜನಸಂಖ್ಯೆ ಇದ್ದರೆ, ಇವತ್ತಿನ ದಿನ ಎಲ್ಲರೂ ಒಕ್ಕಲು ತನ ಅವಲಂಬಿಸಿರುವುದಿಲ್ಲ; ಬೇರೆ ಉದ್ಯಮ ಅವಲಂಬಿಸಿರುತ್ತಾರೆ. ಅವರು ಗೋಕಾಕ ನಿಂದ ಮತ್ತಿತರ ಭಾಗದಿಂದ ಜೋಳ ಬಂದಾಗ ತೆಗೆದುಕೊಂಡು ಹೋಗಿ ಅವತ್ತಿನ ಅಡಿಗೆ ಮಾಡುತ್ತಾರೆ. ರಾಮದುರ್ಗದಲ್ಲಿ ಇಂಥ ವಿಚಿತ್ರ ಪರಿಸ್ಥಿತಿ ಇದೆ. ಒಂದು ವಾರದೊಳಗೆ ರೂಪಾಯಿಗೆ ಒಂದು ಸೇರು ಕೂಡ ಜೋಳ ಸಿಗಲಿಲ್ಲ. ಪೇಟೆ ಲೂಟ್ ಆಗುತ್ತದೋ ಎಂಬ ಭಯವಿತ್ತು. ಏಕೋ ಜನರು ಒಳ್ಳೆಯ ಸ್ವಭಾವದಿಂದಿದ್ದರು. ಅವರಿಗೆ ದಂಗೆ ಎದ್ದು ಅಭ್ಯಾಸವಿಲ್ಲ. ಇಲ್ಲದಿದ್ದರೆ ಸಂತೆಯಲ್ಲಿ ಕಾಯಿಲೆಕ್ಕೆ ಹತ್ತಿದ್ದರು. ಸವದತ್ತಿ ತಾಲ್ಲೂಕು ಮುಂದರ ಹಳ್ಳಿಯಲ್ಲಿ ಜೋಳ ತಂದವರಿಗೂ ರೈತರಿಗೂ ಬಡಿದಾಟ ಆಗಿ ಇದ್ದ ಜೋಳ ತೆಗೆದುಕೊಂಡರು. ಹೀಗೆ ಪ್ರತಿಯೊಂದು ಊರಿನಲ್ಲಿಯೂ ಶುರು ಆದರೆ ಬಾಳು ಮಾಡುವ ಪರಿಸ್ಥಿತಿ ಇಲ್ಲ. ನೀವು ಇನ್ನು 15-20 ದಿವಸ ತಡ ಮಾಡಿದರೆ, ಪ್ರತಿಯೊಂದು ಊರಿನಲ್ಲಿಯೂ ಲೂಟ್ ಶುರುವಾಗಿ, ದೊಂಬಿ ಏಳುವ ಕಾಲ ಪ್ರತಿಯೊಂದು ಹಳ್ಳಿಯಲ್ಲಿಯೂ ಕಂಡುಬರುತ್ತಿದೆ. ದೊಡ್ಡವರಲ್ಲಿಯೂ ಆಹಾರದ ಕಾಳು ಉಳಿದಿಲ್ಲ; ಇದರಲ್ಲಿ ಮುಚ್ಚುಮರೆ ಇಲ್ಲ, ಪ್ರಾಮಾಣಿಕತೆ ಇದೆ. ಇದರಲ್ಲಿ ದೊಡ್ಡವರಾಗಲಿ, ಸಣ್ಣವರಾಗಲಿ, ಶ್ರೀಮಂತರಾಗಲಿ, ಎಲ್ಲರ ಪರಿಸ್ಥಿತಿಯೂ ಕರುಣಾಜನಕವಾಗಿದೆ. ಇವತ್ತಿನ ದಿವಸ ಸ್ಟೇಟ್ ಲೆವರ್‌ನಲ್ಲಿ ಅಂಕಿ ಸಂಖ್ಯೆಗಳನ್ನು ನೋಡುತ್ತಿದ್ದಾರೆ; ಸೆಂಟರಿನ ಲೆವಲ್ಲಿನಲ್ಲಿ ಅಂಕಿ ಸಂಖ್ಯೆಗಳನ್ನು ನೋಡುತ್ತಾರೆ. ಅವುಗಳ ಪ್ರಕಾರ ಆಹಾರ ಬೇಕಾದಷ್ಟು ಇದೆ ನಮ್ಮಲ್ಲಿ. ಪ್ರತಿಯೊಂದು ಗೋದಾನನ್ನೂ ಆಹಾರ ಧಾನ್ಯದಿಂದ ತುಂಬಿದ್ದಾರೆ. ಬೆಳಗಾವಿನ ಕೇಂದ್ರದ ವೇರ್‌ಹೌಸ್ ತುಂಬಿದೆ. ಆದರೆ ಗೋದಾನುಗಳ ಮಗ್ಗುಲಲ್ಲಿಯೇ ಹೆಣಗಳ ರಾಶಿ ನೋಡುವ ಕಾಲ ಬರಬಹುದು ಪ್ರತಿಯೊಂದು ಹಳ್ಳಿಗೂ ಆಹಾರ ಬರುವಂತೆ ಬಿಡಬೇಕು. ಮಾನ್ಯ ರೆವಿನ್ಯು ಮಂತ್ರಿಗಳು ದೊಡ್ಡ ಮನಸ್ಸು ಮಾಡಬೇಕು. ಅವರು ಬೆಳಗಾಂ ಜಿಲ್ಲೆಗೆ ಭೇಟಿ ಕೊಟ್ಟಾಗ, ನಮ್ಮ ಸ್ಥಳಕ್ಕೆ ಬರರಾಗಲಲ್ಲ; ಬಂದಿದ್ದರೆ 15-20 ಹಳ್ಳಿಗಳಿಗೆ ಕರೆದುಕೊಂಡು ಹೋಗಿ ಪರಿಸ್ಥಿತಿಯನ್ನು ಪ್ರತ್ಯಕ್ಷವಾಗಿ ಅವರಿಗೆ ತೋರಿಸಬೇಕೆಂದು ಮಾಡಿದ್ದೆ. ಆದರೆ ಅವರು ಬರಲಲ್ಲ. ಈಗ ನಾನು ಪತ್ರದ ಮುಖಾಂತರ ಅದನ್ನು ತಿಳಿಸಿದ್ದೇನೆ. ಏನಾದರೂ ಕೂಡ ಬೆಳಗಾವಿ ಜಿಲ್ಲೆಗೆ ಅದರಲ್ಲಿಯೂ ನಮ್ಮ ತಾಲ್ಲೂಕಿನ ಹಳ್ಳಿಗಳಿಗೆ ಪ್ರಥಮ ಪ್ರಾಶಸ್ತ್ಯ ಕೊಟ್ಟು ಬರಗಾಲ ನಿವಾರಣೆ ಮಾಡುವುದಕ್ಕಾಗಿ ಶಾಶ್ವತವಾದ ಕಾಂಗಾರಿಗಳನ್ನು ತೆಗೆದುಕೊಳ್ಳುತ್ತೀರೆಂದು ಆಶೆ ಮಾಡಿ, ಕೊನೆ ಕಾರಾವಕಾಶ ಹೆಚ್ಚು ಅವಕಾಶ ಕೊಟ್ಟಂಥ ಅಧ್ಯಕ್ಷರಿಗೆ ನನ್ನ ವಂದನೆಗಳನ್ನು ಅರ್ಪಿಸುತ್ತೇನೆ.

Mr. SPEAKER.—I believe the House has agreed that at 3-30 P.M. reply should begin. I am not satisfied that all members have been afforded reasonable chance. I am trying to adjust time. After all, we must cover up our work also. We cannot neglect it and hit it both ways. To-day after this is over, we have got to take up another Bill and we have 3 more Bills to consider and dispose of.

Sri S. NIJALINGAPPA (Chief Minister).—If the House agrees, they can finish those things tomorrow.

Mr. SPEAKER.—For tomorrow, I will rearrange the work and try to put the resolution also. All that I am saying is that extension of time for this topic should not be a ground for request for extension of time regardless of the Business Advisory Committee Report and its acceptance by the House. We must have some sort of limits. I have got power to extend time by one hour. So, I extend the time by one hour and till 4-30 P.M. We will go on with this and then the reply will begin.

3-30 P. M.

† ಶ್ರೀ ಅನ್ನದಾನಯ್ಯ (ಕುಣಿಗಲ್).—ಮಾನ್ಯ ಸಭಾಪತಿಗಳೇ ಮಾನ್ಯ ಆಹಾರ ಸಚಿವರು ಈ ಸಭೆಯಲ್ಲಿ ತಂದಿರತಕ್ಕ ಈ ಆಹಾರದ ಠರಾವಿನ ಬಗ್ಗೆ ಅನೇಕ ಜನ ಈ ಮಾನ್ಯ ಸಭೆಯ ಸದಸ್ಯರು ತಮ್ಮ ಅಭಿಪ್ರಾಯವನ್ನು ಸೂಚಿಸಿದ್ದಾರೆ. ನಮ್ಮ ದೇಶದಲ್ಲಿ ಅನೇಕ ಜನ ತಜ್ಞರು ಹೇಳಿದ್ದಾರೆ ಯಾವಾಗ ಮಳೆ ಬೇಕೋ ಆಗ ಬರುತ್ತಾ ಇಲ್ಲ ಯಾವಾಗ ಮಳೆ ಬೇಕಿಲ್ಲವೋ ಆಗ ಮಳೆ ಬರುತ್ತಾ ಇದೆ, ಇಂತಹ ಒಂದು ಪರಿಸ್ಥಿತಿ ನಮ್ಮ ದೇಶದಲ್ಲಿ ಉದ್ಭವಿಸಿದೆ. ಇಂತಹ ಪರಿಸ್ಥಿತಿ ಇರುವಾಗ ನಮ್ಮ ದೇಶದಲ್ಲಿ ಆಹಾರದ ಅಭಾವ ಮೇಲೆಂದ ಮೇಲೆ ಉಂಟಾಗುತ್ತಾ ಇದೆ. ಇದಕ್ಕೆ ಸರ್ಕಾರದವರು ವರ್ಷೇ ವರ್ಷೆ ಒಂದಲ್ಲ ಒಂದು ರೀತಿಯಲ್ಲಿ ಹೇಳಿಕೊಂಡು ಹೋಗುತ್ತಾ ಇದ್ದಾರೆಯೇ ಹೊರತು ಇದರ ನಿವಾರಣೆಯ ಬಗ್ಗೆ ಯಾವುದಾದರೂ ಒಂದು ಶಾಶ್ವತವಾದ ಪರಿಹಾರ ಮಾರ್ಗವನ್ನು ಅನುಸರಿಸಲು ಒಂದು ಮನೂದೆಯನ್ನು ತರದೇ ಇರುವುದು ಮನಸ್ಸಿಗೆ ತುಂಬಾ ನೋವುಂಟಾಗುತ್ತಾ ಯಿದೆ. ಈ ಆಹಾರದ ಅಭಾವ ಪ್ರತಿವರ್ಷವೂ ಇದ್ದೇ ಇರುತ್ತದೆ. ಸರ್ಕಾರದವರು ಅನೇಕ ಮನೂದೆಗಳನ್ನು ತರುತ್ತಾ ಇದ್ದಾರೆ ಯೂನಿವರ್ಸಿಟಿ ಮನೂದೆ ವಿಲೇಜ್ ಡಿಫೆನ್ಸ್ ಬಿಲ್ ಈ ತರಹ ಅನೇಕ ಮನೂದೆಗಳು ಬರುತ್ತಾ ಇರುವಾಗ ಇವತ್ತು ದೇಶದಲ್ಲಿ ಉದ್ಭವಿಸಿರತಕ್ಕ ಆಹಾರದ ಅಭಾವ ಪರಿಸ್ಥಿತಿಯನ್ನು ತಡೆಗಟ್ಟುವುದಕ್ಕೆ ಸರ್ಕಾರದವರು ಯಾವುದೇ ಒಂದು ಮನೂದೆಯನ್ನು ತರದೇ ಇರುವುದು ಬಹಳ ಶೋಚನೀಯ. ಆದ್ದರಿಂದ ನಾನು ಸರ್ಕಾರದವರಲ್ಲಿ ಮನವಿ ಮಾಡಿಕೊಳ್ಳುವು ಮಾಡಿಕೊಳ್ಳುವುದಾದರೂ ಇಷ್ಟೆ. ದೇಶದಲ್ಲಿ ಪ್ರತಿವರ್ಷ ತಲೆದೋರುತ್ತಾ ಇರತಕ್ಕ ಈ ಅಭಾವ ಪರಿಸ್ಥಿತಿಯನ್ನು ತಡೆಗಟ್ಟುವುದಕ್ಕೆ ಅದಷ್ಟು ಜರೂರಾಗಿ ಒಂದು ವಿಶೇಷ ಪರಿಹಾರವನ್ನೊದಗಿಸತಕ್ಕ ಕ್ರಮಗಳನ್ನು ಕೈಕೊಳ್ಳಬೇಕೆಂದು ಹೇಳುತ್ತೇನೆ. ವ್ಯವಸಾಯದ ಕಸುಬು ಬಹಳ ಕಠಿಣವಾದದ್ದು ಮತ್ತು ಕಷ್ಟಕರವಾದುದ್ದು. ಹಿಂದೆ ವೈಶ್ಯರು ಲೆಕ್ಕಾಚಾರಮಾಡಿ ಈ ಕಸುಬಿನಿಂದ ಒಂದು ಕಾಸು ಹೆಚ್ಚಿಗೆ ಖರ್ಚು ಬಂದ್ದದ್ದರಿಂದ ಈ ಕಸುಬನ್ನೇ ಬಿಟ್ಟರಂತೆ, ಇಂತಹ ಒಂದು ಕಸುಬನ್ನು ರೈತ ಇವತ್ತು ಅವಲಂಬಿಸಿಕೊಂಡು ಹೋಗುತ್ತಾ ಇದ್ದಾನೆ. ಆದ್ದರಿಂದ ಸರ್ಕಾರದವರು ರೈತನಿಗೆ ಹೆಚ್ಚಿನ ಒಂದು ಸೌಲಭ್ಯವನ್ನು ಒದಗಿಸಿಕೊಡಬೇಕು. ಇವತ್ತು ದೇಶದಲ್ಲಿ ಆಹಾರದ ಕೊರತೆ ಬರುವುದಕ್ಕೆ ಅನೇಕ ಕಾರಣಗಳು ಇವೆ. ಈ ದೇಶದಲ್ಲಿ ಕಾಲಕ್ಕೆ ಸರಿಯಾಗಿ ಮಳೆ ಬರುತ್ತಾ ಇಲ್ಲ; ರೈತನಿಗೆ ಬೇಕಾದ ಒಳ್ಳೆಯ ಬಿತ್ತನೆಯ ಬೀಜವನ್ನು ಒದಗಿಸುತ್ತಾ ಇಲ್ಲ. ಗೊಬ್ಬರವನ್ನು ಕೊಂಡುಕೊಳ್ಳುವುದಕ್ಕೆ ಸರ್ಕಾರದಿಂದ ಸಾಲ ಸಿಕ್ಕುತ್ತಾ ಇಲ್ಲ ಇವತ್ತು ಸರ್ಕಾರದವರು ಬೇರೆ ಒಂದು ರೀತಿಯಲ್ಲಿ ಜನರಿಗೆ ಪ್ರೋತ್ಸಾಹ ಕೊಡುತ್ತಾ ಇದ್ದಾರೆ, ಯಾರಾದರೂ ಒಬ್ಬ ದೊಡ್ಡ ಮನುಷ್ಯ ಬಂದು ಟೂರಿಸ್ಟ್ ಹೋಟೆಲ್ ಇಡುತ್ತೇನೆ ನನಗೆ ಸಾಲ ಕೊಡಿ ಎಂದರೆ ಅವನಿಂದ ಏರಡು ಪರ್ಸೆಂಟ್ ಬಡ್ಡಿ ತೆಗೆದುಕೊಂಡು ಸಾಲ ಕೊಡುತ್ತಾರೆ ಮತ್ತು ಅವನಿಂದ ಯಾವ ಒಂದು ಸೆಕ್ಯೂರಿಟಿಯನ್ನೂ ಸಹ ಕೇಳುವುದಿಲ್ಲ ಅದೇ ಒಬ್ಬ ರೈತ ಮುಂಚೆ ನನಗೆ ಸಾಲ ಕೊಡಿ ನಾನು ಗೊಬ್ಬರ ತೆಗೆದುಕೊಳ್ಳಬೇಕು ಎಂದು

. (ಶ್ರೀ ಅನ್ನದಾನಯ್ಯ)

ಕೇಳಿದರೆ ಅವನನ್ನು ಜಾಮೀನು ಕೊಡು ಎಂದು ಕೇಳುತ್ತೀರಿ, ಒತ್ತಾಯ ಮಾಡುತ್ತೀರಿ ಇಂತಹ ಒಂದು ಪರಿಸ್ಥಿತಿ ನಮ್ಮ ದೇಶದಲ್ಲಿ ಇದೆ. ರೈತನಿಗೆ ಸರಿಯಾದ ಒಂದು ಸೌಲಭ್ಯ ದೊರಕುತ್ತಾ ಇಲ್ಲ ಎಂದು ಹೇಳುತ್ತಾ ಇದ್ದೇನೆ. ನಮ್ಮ ಜಿಲ್ಲೆಯಲ್ಲಿ ಮಳೆ ಇಲ್ಲದೇ ಅನೇಕ ಜನ ಇವತ್ತು ತೊಂದರೆಗೆ ಈಡಾಗಿದ್ದಾರೆ, ದನಕರುಗಳಿಗೆ ಕುಡಿಯುವುದಕ್ಕೆ ಮೇವು ನೀರು ಇಲ್ಲ. ಆದ್ದರಿಂದ ಸರ್ಕಾರದವರು ಅತಿ ಶೀಘ್ರವಾಗಿ ಅಲ್ಲಿಗೆ ಯಾವ ಪರಿಹಾರ ಕಾರ್ಯಗಳನ್ನು ಮಾಡಬೇಕೆಂದು ಜನರು ಅಪೇಕ್ಷೆ ಮಾಡುತ್ತಾರೆಯೋ ಅದನ್ನು ಮಾಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ. ಸ್ವಾಮಿ ಇವತ್ತು ನಮ್ಮ ಜಿಲ್ಲೆಯಲ್ಲಿರತಕ್ಕ ಒಬ್ಬ ಜಿಲ್ಲಾಧಿಕಾರಿ ಜನರ ಕಷ್ಟ ನುಷ ಏನು ಎಂಬುದನ್ನು ಅರಿತುಕೊಳ್ಳತಕ್ಕ ಪ್ರಯತ್ನದಲ್ಲಿ ತೊಡಗಿಲ್ಲ ಎಂಬುದನ್ನು ತಮ್ಮ ಗಮನಕ್ಕೆ ತರುತ್ತಾ ಇದ್ದೇನೆ. ಆದ್ದರಿಂದ ಇವೊತ್ತು ನಮ್ಮ ಜಿಲ್ಲೆಯವರು ಅವರ ಕಷ್ಟನುಷ ಏನು ಎಂಬುದನ್ನು ಸರ್ಕಾರದವರ ಮುಂದೆ ಹೇಳಿಕೊಳ್ಳುವುದಕ್ಕೆ ಸಾಧ್ಯವಾಗುತ್ತಾ ಇಲ್ಲ. ಇದಕ್ಕೆಲ್ಲಾ ಕಾರಣವೇನೆಂದರೆ ಅವರಿಗೆ ಕನ್ನಡ ಬರುವುದಿಲ್ಲ ಅವರಿಗೆ ಅರ್ಜಿ ಕೊಡಬೇಕಾದರೆ ಒಬ್ಬ ಲಾಯರನ್ನು ಮುಂದೆ ಇಟ್ಟುಕೊಂಡು ಅರ್ಜಿಯನ್ನು ಕೊಡಬೇಕಾಗಿದೆ. ಇಂಥಾ ಜಿಲ್ಲಾಧಿಕಾರಿಗಳು ಕೊಟ್ಟ ಅಂಕಿ ಅಂಶದ ಆಧಾರದ ಮೇಲೆ ತಾವು ಕೆಲಸ ಮಾಡಬೇಕಾಗಿದೆ ಅವರು ಅಲ್ಲಿ ಯಾವ ಅಭಾವ ಪರಿಸ್ಥಿತಿಯೂ ಇಲ್ಲ ಎಂದು ತಿಳಿದುಕೊಳ್ಳುವಂತಹ ಅಂಕಿಅಂಶಗಳನ್ನು ಒದಗಿಸುತ್ತಾ ಇದ್ದಾರೆ. ಆದ್ದರಿಂದ ಇಂತಹ ಅಧಿಕಾರಿಗಳನ್ನು ಆದಷ್ಟು ಬೇಗ ಬದಲಾಯಿಸ ಬೇಕೆಂದು ಮನವಿ ಮಾಡಿಕೊಳ್ಳುತ್ತಾ ಇದ್ದೇನೆ.

ಸ್ವಾಮಿ ಇವತ್ತು ಆಹಾರದ ಒಂದು ಪೋರ್ಟ್ ಫೋಲಿಯೋ ವಹಿಸಿಕೊಂಡಿರತಕ್ಕ ಮಂತ್ರಿಗಳಿಗೆ ವಹಿಸಿರತಕ್ಕ ಇತರ ಪೋರ್ಟ್ ಫೋಲಿಯೋ ಏನಿದೆ ಅವನ್ನು ನೋಡಿದರೆ ಅವುಗಳೆಲ್ಲವೂ ಸಹ ಅಭಾವ ದಿಂದ ಪೀಡಿತವಾದ ಪೋರ್ಟ್‌ಫೋಲಿಯೋಗಳೇ ಆಗಿವೆ ಯಾರಿಗೂ ಒಂದು ಎಕರೆ ಜಮೀನು ಕೂಡ ಸಿಕ್ಕುತ್ತಿಲ್ಲ, ರೈತರಿಗೆ ದುಡ್ಡು ಬೇಕೆಂದರೆ ದುಡ್ಡು ಸಿಕ್ಕುತ್ತಿಲ್ಲ ಇಂತಹ ಅಭಾವ ಪೀಡಿತವಾದ ಪೋರ್ಟ್‌ಫೋಲಿಯೋಗಳನ್ನು ಅವರಿಗೆ ಕೊಟ್ಟಿರುವುದರಿಂದ ಅವರಿಗೆ ಅಭಾವ ಮಂತ್ರಿಗಳು ಎಂದು ಹೆಸರಿಡಬೇಕೆಂದು ನಾನು ಸೂಚನೆ ಮಾಡುತ್ತೇನೆ. ಕೊನೆಯದಾಗಿ ಮಾನ್ಯ ಮಂತ್ರಿಗಳಲ್ಲಿ ಮನವಿ ಏನೆಂದರೆ ಈ ಒಂದು ಅಭಾವ ಪರಿಸ್ಥಿತಿಯನ್ನು ತಡೆಗಟ್ಟುವುದಕ್ಕೆ ಸರ್ವ ಪ್ರಯತ್ನವನ್ನೂ ಸರ್ಕಾರ ದವರು ಮಾಡಬೇಕು. ನಮ್ಮ ತಾಲ್ಲೂಕಿನಲ್ಲಿ ಸಣ್ಣ ಸಣ್ಣ ಕೆರೆಕಟ್ಟೆಗಳು ಬೇಕಾದಷ್ಟು ಇವೆ, ಅವುಗಳಲ್ಲಿ ತುಂಬಿರತಕ್ಕ ಹೂಳನ್ನು ತೆಗೆಸುವುದಕ್ಕೆ ತಕ್ಷಣ ವ್ಯವಸ್ಥೆ ಮಾಡಬೇಕು ಇದರಿಂದ ಕೆರೆಗಳಲ್ಲಿ ನೀರು ಹೆಚ್ಚಿಗೆ ನಿಲ್ಲುವುದು ಮಾತ್ರವಲ್ಲದೆ ಈ ಅಭಾವ ಪರಿಸ್ಥಿತಿಯಲ್ಲಿ ಜನರಿಗೆ ಕೂಲಿ ಸಿಕ್ಕುವುದಕ್ಕೂ ಕೂಡ ಅವಕಾಶವಾಗುತ್ತದೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ರುದ್ರಪ್ಪ (ಕಲ್ಗ).—ಮಾನ್ಯ ಅಧ್ಯಕ್ಷರೇ, ಈಗಾಗಲೇ ರಾಜ್ಯದಲ್ಲಿ ಉದ್ಭವಿಸಿದಂತಹ ಈ ಅಭಾವ ಪರಿಸ್ಥಿತಿಯ ಬಗ್ಗೆ ಮಾನ್ಯ ಸದಸ್ಯರು ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ, ಗುಲ್ಬರ್ಗ ಜಿಲ್ಲೆಯ ಬಗ್ಗೆ ಹೇಳುವುದಾದರೆ ಇದುವರೆಗೂ ಅಲ್ಲಿ ಮಳೆಯಾಗಿಲ್ಲ, ಅನೇಕ ಜಿಲ್ಲೆಗಳಲ್ಲಿ ಅಭಾವ ಪರಿಸ್ಥಿತಿ ಯಾವ ರೀತಿಯಲ್ಲಿ ಇದೆಯೋ ಅದೇ ರೀತಿ ಗುಲ್ಬರ್ಗ ಜಿಲ್ಲೆಯಲ್ಲೂ ಕೂಡ ಅಭಾವ ಪರಿಸ್ಥಿತಿ ಯಿದೆ. ಕೆಲವು ಭಾಗಗಳಲ್ಲಿ ಮಾತ್ರ ಮಳೆಯಾಗಿದೆ, ಬಿತ್ತನೆ ಮಾಡುವುದಕ್ಕೆ ಸಾಕಾದಷ್ಟು ಮಳೆಯಾಗಿಲ್ಲ. ಇದುವರೆಗೂ ಗುಲ್ಬರ್ಗ ಜಿಲ್ಲೆಯಲ್ಲಿ ಬಿತ್ತನೆಯಾಗಿಲ್ಲ ಕೂಲಿಗಾರರಿಗೆ ಕೆಲಸ ಇಲ್ಲದಂತಾಗಿದೆ ಇದು ಜನರಲ್ಲಿ ಬಹಳ ಕಳವಳವನ್ನುಂಟುಮಾಡಿದೆ ಮತ್ತು ಜನರು ಬಹಳ ಚಿಂತಾಗ್ರಸ್ಥರಾಗಿದ್ದಾರೆ. ಇದನ್ನು ಎದುರಿಸಲು ಕೆಲವು ಸಲಹೆಗಳನ್ನು ಕೊಡಬೇಕೆಂದು ಇದ್ದೇನೆ. ಈಗಾಗಲೇ ಅಲ್ಲಿಯ ಸ್ಥಳೀಕ ಅಧಿಕಾರಿಗಳು ಕೆಲವು ಸಣ್ಣ ನೀರಾವರಿ ಯೋಜನೆಗಳನ್ನು ಸರ್ವೆ ಮಾಡಿಸಿ ಎಸ್ಟಿಮೇಟ್ ಮಾಡಿ ಸರ್ಕಾರದ ಕಡೆಗೆ ಕಳುಹಿಸಿದ್ದಾರೆ, ಅವನ್ನು ಮಂಜೂರು ಮಾಡಿ ಕಾರ್ಯಗತ ಮಾಡಬೇಕು. ಕೂಲಿಗಾರರಿಗೆ ಕೆಲಸ ಸಿಕ್ಕುತ್ತದೆ ಮತ್ತು ಅವರಿಗೆ ಆಹಾರ ಮತ್ತು ಇತರ ಪದಾರ್ಥಗಳನ್ನು ಕೊಂಡುಕೊಳ್ಳತಕ್ಕ ಶಕ್ತಿ ಬರುತ್ತದೆ. ಗುಲ್ಬರ್ಗ ಜಿಲ್ಲೆಯಲ್ಲಿ ಇದುವರೆಗೂ ನೀರಾವರಿ ಬಾವಿಗಳನ್ನು ಮಂಜೂರು ಮಾಡಿಲ್ಲ ಹೆಚ್ಚು ನೀರಾವರಿ ಬಾವಿಗಳನ್ನು ಮಂಜೂರು ಮಾಡಿದ್ದೇ ಪ್ರತಿಯೊಂದು ತಾಲ್ಲೂಕಿನಲ್ಲೂ 10-20 ಬಾವಿಗಳನ್ನು ಮಾಡಿದ್ದರೆ ಒಂದೊಂದು ಬಾವಿ ತೋಡಲಿಕ್ಕೆ 10-15 ಜನ ಕೂಲಿಗಾರರು ಬೇಕಾಗುತ್ತದೆ. ಅಷ್ಟು ಜನಕ್ಕೆ ಉದ್ಯೋಗ ಕೊಡಲಿಕ್ಕೆ ಅವಕಾಶವಾಗುತ್ತದೆ. ಮತ್ತು ರೈತರಿಗೂ ಕೂಡ ಆ ಬಾವಿಗಳಿಂದ ವ್ಯವಸಾಯ ಮಾಡಲಿಕ್ಕೆ ಅನು ಕೂಲವಾಗುತ್ತದೆ. ಆ ದೃಷ್ಟಿಯಿಂದ ಗುಲ್ಬರ್ಗ ಜಿಲ್ಲೆಯಲ್ಲಿ ಹೆಚ್ಚು ನೀರಾವರಿ ಬಾವಿಗಳನ್ನು ತೋಡ ಬೇಕೆಂದು ಸೂಚನೆ ಮಾಡುತ್ತೇನೆ.

ಮೂರನೆಯದಾಗಿ ಡಿವಿಜನಲ್ ಕಮೀಷನರು ಮುಂತಾದವರಿಗೆ ಹಣ ಕೊಟ್ಟಿದೆ ಎಂದು ಹೇಳಿ ದರು. ಅದೇನೋ ಒಳ್ಳೆಯದೇ. ಆದರೆ ಗುಲ್ಬರ್ಗ ಜಿಲ್ಲೆಯಲ್ಲಿ ರೂರಲ್ ಕಮ್ಯೂನಿಕೇಷನ್ ರಸ್ತೆಗ

ಳನ್ನು ಹೊಸದಾಗಿ ತೆಗೆದುಕೊಳ್ಳಬಾರದು, ಈಗ ಸರ್ಕಾರದವರು ಕೆಲವು ರೂರಲ್ ಕಮ್ಯೂನಿಕೇಶನ್ ರಸ್ತೆಗಳನ್ನು ಸ್ಟೇಟ್ ಫಂಡ್ ರಸ್ತೆಗಳಾಗಿ ತೆಗೆದುಕೊಂಡಿದ್ದಾರೆ, ಅವುಗಳ ಕನ್ಸಾಲಿಡೇಷನ್ ಮತ್ತು ಇತರ ಕೆಲಸಗಳನ್ನು ಪ್ರಾರಂಭಿಸಿ ಹಣ ಖರ್ಚುಮಾಡಬೇಕು. ಹೋದಸಲ ರೂರಲ್ ಕಮ್ಯೂನಿಕೇಷನ್ ಬಾಬಿನಲ್ಲಿ ಹೆಚ್ಚು ಹಣ ಖರ್ಚುಮಾಡಿ ಮಾಡಿರುವ ರಸ್ತೆಗಳು ಇಲ್ಲದಂತೆ ಅಳಿಸಿ ಹೋಗಿವೆ. ಹೀಗಾಗಿ ಹಣದ ಸದುಪಯೋಗವಾಗಿಲ್ಲ. ಆದುದರಿಂದ ಹೊಸ ರಸ್ತೆ ತೆಗೆದುಕೊಳ್ಳದೆ ಈಗಿರುವ ಸ್ಟೇಟ್‌ಫಂಡ್ ರಸ್ತೆಗಳನ್ನು ನುದಾರಿಸುವುದಕ್ಕೆ ಹಣ ಖರ್ಚು ಮಾಡಬೇಕು.

ಶ್ರೀ ಟಿ. ಕೆ. ಕಂಬ್ಳಿ (ಕಂದ್ಗೋಳ).—ಸನ್ಮಾನ್ಯ ಅಧ್ಯಕ್ಷರೇ ರಾಜ್ಯದ ಅಭಾವ ಪರಿಸ್ಥಿತಿಯ ಬಗ್ಗೆ ನಾನು ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ನಮ್ಮ ರಾಜ್ಯದಲ್ಲಿ ಈ ಅಭಾವ ಪರಿಸ್ಥಿತಿ ಈಗ ಮೂರು ನಾಲ್ಕು ವರ್ಷಗಳಿಂದಲೂ ಒಂದೇ ಸಮನಾಗಿ ತಲೆದೋರುತ್ತಾ ಇದೆ. ಈಗ ಮೂರು ನಾಲ್ಕು ವರ್ಷಗಳಿಂದ ಇದು ನಮಗೆ ಅಗ್ದಿ ಗಂಟು ಬೀಳುತ್ತಿದೆ ಎಂದು ನಾನು ಹೇಳಬಲ್ಲೆ. ಏತಕ್ಕೆಂದರೆ ಇದು ದೇವರ ಕೃಪೆಯೋ ಅಥವಾ ನಮ್ಮ ದುರದೃಷ್ಟವೋ ಹೇಳಲಿಕ್ಕೆ ಬರುವುದಿಲ್ಲ. ಅಂತೂ ನಾವು ಇದರೊಳಗೆ ಹೇಗೆ ಪಾರಾಗಬೇಕು ಎನ್ನುವ ಒಂದು ವಿಚಾರ ನಾಡುವ ಪರಿಸ್ಥಿತಿ ಇದೆ. ನಮ್ಮ ರಾಜ್ಯದ ದೇಶದಲ್ಲಿ ಸುಮಾರು 100ಕ್ಕೆ 75 ಜನ ವ್ಯವಸಾಯವನ್ನು ಮಾಡಿದರೂ ಸಹ ಅವರ ಹೊಟ್ಟೆಗೆ ಅನ್ನ ಸಾಲುವುದಿಲ್ಲ. ಕೆಲವು ಜನ ಮಾನ್ಯ ಸದಸ್ಯರು ಅಭಾವ ಪರಿಸ್ಥಿತಿ ಉಂಟಾಗಿರತಕ್ಕ ಪ್ರದೇಶದಲ್ಲಿ ಜನಗಳಿಗೆ ಉದ್ಯೋಗವನ್ನು ಒದಗಿಸಬೇಕು ; ಆಹಾರ ಧಾನ್ಯಗಳ ಬೆಲೆಗಳನ್ನು ಇಳಿಸಬೇಕು, ಹಣ ಸಹಾಯವನ್ನು ಒದಗಿಸಬೇಕು ಎಂದು ಹೇಳಿದರು. ಈ ಅಭಾವ ಪರಿಸ್ಥಿತಿಯನ್ನು ಹೋಗಲಾಡಿಸಬೇಕಾದರೆ ಒಂದು ವಿಚಾರವನ್ನು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಅದೇನೆಂದರೆ ಈಗ ನಮ್ಮ ದೇಶದಲ್ಲಿ ಹೆಚ್ಚು ಆಹಾರವನ್ನು ಬೆಳೆಯಬೇಕು ಎಂದು ಎಷ್ಟೋ ವರ್ಷಗಳಿಂದ ಪ್ರಚಾರಮಾಡುತ್ತಿದ್ದಾರೆ. ಆದರೂ ಸಹ ಅದು ನಾವು ನಿರೀಕ್ಷಿಸಿದ ಮಟ್ಟದಲ್ಲಿ ಯಶಸ್ವಿಯಾಗಿಲ್ಲ. ಈ ವಿಷಯದಲ್ಲಿ ನನ್ನ ಅಭಿಪ್ರಾಯ ಏನೇಂದರೆ ಈ ಗ್ರೋಮೋರ್

ಘುಡ್ ಯೋಜನೆಯಲ್ಲಿ ರೈತರಿಗೆ ಸರಿಯಾಗಿ ಸೌಕರ್ಯಗಳು ಒದಗುತ್ತಾ ಇಲ್ಲ. ಹೀಗಿರುವಾಗ ರೈತರನ್ನು ಹೆಚ್ಚು ಆಹಾರವನ್ನು ಬೆಳೆಯಿರಿ ಎಂದು ಹೇಳಿದರೆ ಅವರು ಹೇಗೆ ಹೆಚ್ಚು ಆಹಾರವನ್ನು ಬೆಳೆಯುತ್ತಾರೆ? ಈ ದೃಷ್ಟಿಯಿಂದ ರೈತ ಏನು ಮಾಡುತ್ತಾನೆ ಎಂದರೆ ಹೆಚ್ಚು ದುಡ್ಡು ಯಾವ ಬೆಳೆಯನ್ನು ಬೆಳೆದರೆ ಬರುತ್ತದೆಯೋ ಅಂಥಾದ್ದನ್ನು ನೋಡುತ್ತಾನೆ. ಈ ಆಹಾರ ಧಾನ್ಯವನ್ನು ಬೆಳೆದರೆ ಹೆಚ್ಚು ಲಾಭ ಬರುವುದಿಲ್ಲ ಎಂಬುದನ್ನು ರೈತ ತಿಳಿದುಕೊಂಡಿದ್ದಾನೆ. ಆದ್ದರಿಂದ ರೈತ ತನಗೆ ಹೆಚ್ಚು ರೊಕ್ಕ ಬರುವಂತಹ ಹತ್ತಿ, ಹೊಗೇಸೊಪ್ಪು ಮುಂತಾದ ಬೆಳೆಗಳನ್ನು ಬೆಳೆಯುತ್ತಾನೆ. ಆಹಾರ ಧಾನ್ಯವನ್ನು ಬೆಳೆಯುವ ಕಡೆ ಹೆಚ್ಚು ಗಮನವನ್ನು ಕೊಡುವುದಿಲ್ಲ. ಅದರ ದೆಸೆಯಿಂದ ರೈತ ಯಾವ ಭೂಮಿಯಲ್ಲಿ ಆಹಾರ ಧಾನ್ಯವನ್ನು ಬೆಳೆಯುತ್ತಾನೆಯೋ ಆ ಭೂಮಿಗೆ ಭೂ ಕಂದಾಯವನ್ನು ಸೂಟು ಮಾಡುಬೇಕೆಂದು ನಾನು ಹೇಳುತ್ತೇನೆ. ಆಹಾರ ಧಾನ್ಯ ಎಂದರೆ ಬತ್ತ, ಜೋಳ ಗೋಧಿ, ರಾಗಿ ಮತ್ತು ನವಣೆ ಇಂತಹ ಮುಖ್ಯವಾದ ಆಹಾರ ಧಾನ್ಯವನ್ನು ಬೆಳೆಯತಕ್ಕ ಭೂಮಿಗೆ ತಕ್ಕಮಟ್ಟಿಗೆ ಕಂದಾಯವನ್ನು ಸೂಟು ಬಿಡಬೇಕು. ಮತ್ತು ಆಹಾರಧಾನ್ಯವನ್ನು ಬೆಳೆಯತಕ್ಕ ರೈತನಿಗೆ ಒಳ್ಳೆಯ ಬೀಜ, ಒಳ್ಳೆಯ ಗೊಬ್ಬರ, ಇತ್ಯಾದಿ ವ್ಯವಸಾಯದ ಸಾಮಗ್ರಿಗಳನ್ನು ಫ್ರೀಯಾಗಿ ಒದಗಿಸಬೇಕು. ಆ ರೀತಿ ಮಾಡುವುದಾದರೆ ರೈತ ಹೆಚ್ಚಿಗೆ ಆಹಾರ ಧಾನ್ಯವನ್ನು ಬೆಳೆಯುವುದಕ್ಕೆ ಮನಸ್ಸು ಮಾಡುತ್ತಾನೆ. ಗ್ರೋಮೋರ್ ಘುಡ್ ಯೋಜನೆಯಲ್ಲಿ ಬೆಳೆದಿರತಕ್ಕ ಆಹಾರ ಧಾನ್ಯಗಳ ಮತ್ತು ಕ್ಷೇತ್ರದ ಅಂಕಿ ಅಂಶಗಳನ್ನು ನೋಡಿದರೆ ಹೆಚ್ಚು ಕ್ಷೇತ್ರದಲ್ಲಿ ಹೆಚ್ಚು ಆಹಾರೋತ್ಪಾದನೆಯಾಗಿದೆ ಎಂದು ತೋರುತ್ತದೆ. ಆದರೆ ಗ್ರಾಮಾಂತರ ಪ್ರದೇಶವಲ್ಲಿ ಹೋಗಿ ನೋಡಿದರೆ ಅದಕ್ಕೆ ಸರ್ಕಾರದವರು ಹೆಚ್ಚು ಗಮನವನ್ನು ಕೊಡದೆ ಹೆಚ್ಚು ಆಹಾರ ಧಾನ್ಯವನ್ನು ಬೆಳೆಯತಕ್ಕ ಕ್ಷೇತ್ರ ಕಡಿಮೆಯಾಗಿದೆ ಎಂದು ನನ್ನ ಮತ. ರೈತರಿಗೆ ಹೆಚ್ಚು ಬೆಳೆ ತೆಗೆಯುವುದಕ್ಕೆ ಸೌಕರ್ಯವನು ಒದಗಿಸಲು ಶಕ್ಯವಿದ್ದಷ್ಟು ಸರ್ಕಾರದವರು ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ.

ಧಾರವಾಡ ಜಿಲ್ಲೆಯ ಪೈಕಿ ಅರ್ಧಕ್ಕಿಂತ ಹೆಚ್ಚು ತಾಲ್ಲೂಕುಗಳಲ್ಲಿ ಬರಗಾಲವಿದೆ. ಅದರ ಪೈಕಿ ಕುಂದಗೋಳ ತಾಲ್ಲೂಕೂ ಒಂದು. ಎಲ್ಲ ಕಡೆಗೂ ಬರಗಾಲ ಮಾತ್ರ ಎಂದರೆ ಆಹಾರಾಭಾವ ಇದ್ದರೆ ನಮ್ಮಲ್ಲಿ ಎರಡು ರೀತಿಯಿಂದ ಇದೆ. ಆಹಾರದ ಕೊರತೆಯ ಜೊತೆಗೆ ನೀರಿಗೂ ತೊಂದರೆ ಇದೆ. ಏಳು ಮೈಲಿ ದೂರ ಹೋಗಿ ನೀರು ತರಬೇಕಾದ ಸ್ಥಳಗಳೂ ಇವೆ. ನಮ್ಮ ತಾಲ್ಲೂಕಿನಲ್ಲಿ 21 ಗ್ರಾಮಗಳಲ್ಲಿ ನೀರೇ ಇಲ್ಲ. ಜಮಖಂಡಿ ಸ್ಟೇಟಿನಲ್ಲಿದ್ದಾಗಲೂ ನೀರಿನ ಸೌಕರ್ಯ ಆಗಲಲ್ಲ, ಬೊಂಬಾಯಿನಲ್ಲಿ ಇದ್ದಾಗಲೂ ಏನೂ ಆಗಲಿಲ್ಲ. ಮೈಸೂರು ಸರ್ಕಾರದಲ್ಲಿ ತೆಗೆದುಕೊಂಡ ಕಾರ್ಯದ ಫಲವಾಗಿ ನಮ್ಮಲ್ಲಿ ನೀರಿನ ಬರ ತಪ್ಪಿದೆ. ಈಗ ಕುಂದಗೋಳ ನೀರಿನ ವಿಷಯದಲ್ಲಿ ಸಮೃದ್ಧಿ ಎಂದು ಹೇಳುತ್ತಾರೆ. ಆದರೆ ಗ್ರಾಮಾಂತರ ಪ್ರದೇಶಗಳಲ್ಲಿ ನೀರಿನ ಬರ ಜಾಸ್ತಿ ಇದೆ. ಹಳ್ಳಿಗಳಲ್ಲಿಯೂ ನೀರನ್ನು ಪೂರೈಸುವುದಕ್ಕೆ ಸರ್ಕಾರ ಗಮನ ಕೊಡಬೇಕು. ಬೋರವೆಲ್‌ಗಳನ್ನು ಹಾಕಿದರೆ ಬೇಕಾದಷ್ಟು ನೀರಿನ ಸೌಕರ್ಯವನ್ನು ಕೊಡಬಹುದು. ಕುಡಿಯುವ ನೀರಿನ ವ್ಯವಸ್ಥೆಗೆ ದುಡ್ಡು ಕೊಡಬೇಕು ಎಂದರೆ ನಾವು ಕೊಡುತ್ತೇವೆ. ರಸ್ತೆ ಕೆಲಸಕ್ಕೆ ಹೇಗೆ 80 ಸಾವಿರ ರೂಪಾಯಿ ಕೊಟ್ಟೆವೋ ಹಾಗೆಯೇ ನೀರಿನ ಸೌಕರ್ಯಕ್ಕೂ ಕೂಡ ಕೊಡುವುದಕ್ಕೆ ಸಿದ್ಧರಾಗಿದ್ದೇವೆ. ಆ ಪ್ರಕಾರ ಮಾಡಿಕೊಡಬೇಕು.

ಅಗ್ಗದ ದರದಲ್ಲಿ ಧಾನ್ಯವನ್ನು ಜನರಿಗೆ ಪೂರೈಕೆ ಮಾಡಲು ಕ್ರಮ ತೆಗದುಕೊಳ್ಳಬೇಕು ಏನು ಧಾನ್ಯವಿದೆಯೋ ಅದು ಹೊರಗೆ ಹೋಗದ ಹಾಗೆ ನೋಡಿಕೊಳ್ಳಲು ಸಿಬ್ಬಂದಿಯನ್ನು ಇಟ್ಟು ಕಾಯ್ದು ಬಂದಂಥ ಧಾನ್ಯವನ್ನು ಪೋಲಾಗದಂತೆ ಸರಿಯಾಗಿ ಹಂಚಬೇಕು. ಆ ಧಾನ್ಯಗಳನ್ನು ಸೊಸೈಟಿಗೆ ಕೊಡಿರಿ ಅಥವಾ ಬೇರೆ ರೀತಿಯಲ್ಲಿ ಜನರಿಗೆ ಕೊಡಿರಿ. ಈಗ ಇರುವ ಅಭಾವದಿಂದ ಪಾರಾಗಬೇಕಾದರೆ ಜನರಿಗೆ ಏನಾದರೂ ಕೆಲಸಗಳನ್ನು ಕೊಡಲು ಪುರು ಮಾಡಿದರೆ ಸರಿಯಾಗುತ್ತದೆ. ಆ ರೀತಿಯ ಕೆಲಸಗಳನ್ನು ಪುರು ಮಾಡಬೇಕೆಂದೂ, ಬರಗಾಲ ಪರಿಹಾರ ಕಾರ್ಯಗಳನ್ನು ತೆಗೆದುಕೊಳ್ಳಬೇಕೆಂದೂ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ವಿ. ಕೃಷ್ಣಪ್ಪ (ಕಂದಾಯ ಶಾಖೆಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಮೂರು ದಿವಸಗಳಿಂದ ಸುಮಾರು 55 ಜನ ಮಾನ್ಯ ಸದಸ್ಯರು ಸಂಸ್ಥಾನದಲ್ಲಿರುವ ಅಭಾವ ಪರಿಸ್ಥಿತಿಯ ವಿಷಯವಾಗಿ ಅನೇಕ ಉಪಯುಕ್ತವಾದ ಸಲಹೆಗಳನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ. ಅವರಿಗೆಲ್ಲ ಧನ್ಯವಾದಗಳು ಮತ್ತು ಅವರಿಗೆ ಇಷ್ಟು ಭರವಸೆಯನ್ನು ಕೊಡುತ್ತೇನೆ. ಈ ವಿಚಾರವಾಗಿ ಮಾತನಾಡಿದ 55 ಜನ ಸದಸ್ಯರಲ್ಲವೆ, ಮಾತನಾಡುವುದಕ್ಕೆ ಅವಕಾಶ ಸಿಕ್ಕದೇ ಇರುವ ಸದಸ್ಯರ ಕ್ಷೇತ್ರಗಳನ್ನು ಮುರೆಯುತ್ತೇವೆಂದು ಯಾರೂ ಭಾವಿಸಬಾರದು. ನಭೆಯಲ್ಲಿ ಮಾತನಾಡಿದ ಸದಸ್ಯರ ಭಾಷಣದಿಂದ ಯಾವ ಪರಿಸ್ಥಿತಿ ಇದೆ ಎಂಬುದನ್ನು ತಿಳಿದುಕೊಂಡಿದ್ದೇವೆ. ಇದಲ್ಲದೆ ಎರಡು

(ಶ್ರೀ ಎಂ. ವಿ. ಕೃಷ್ಣಪ್ಪ)

ಜಿಲ್ಲಾಧಿಕಾರಿಗಳನ್ನೂ ಕರೆಸಿ ಎರಡು ದಿವಸ ಅವರ ಕೂಡ ಚರ್ಚೆಸಿ ಅವರಿಂದ ದೇಶದ ಪರಿಸ್ಥಿತಿ ತಿಳಿದುಕೊಂಡಿದ್ದೇವೆ. ಈ ಅಭಾವ ಪರಿಸ್ಥಿತಿಯು ಪರಿಣಾಮವಾಗಿ ಅದರ ಪರಿಹಾರಕ್ಕೋಸ್ಕರ ಎಷ್ಟು ಹಣ ಕೊಡುತ್ತೇವೆ ಎಂಬುದು ಡಿಸ್ಟ್ರಿಕ್ಟ್ ಮಟ್ಟದಲ್ಲಿ ಮಾನ್ಯ ಸದಸ್ಯರು ಆಯಾಯ ಭಾಗಕ್ಕೆ ಹೋದಾಗ್ಗೆ ಅರ್ಥವಾಗುತ್ತದೆ. ಜಿಲ್ಲಾಧಿಕಾರಿಗಳು ಸಲಹೆ ಕೊಟ್ಟಿದ್ದಾರೆ. ತಾಲ್ಲೂಕಿನ ಜನತೆಯ ಪ್ರತಿನಿಧಿಯಾಗಿರುವ ಮಾನ್ಯ ಸದಸ್ಯರು ಸಲಹೆ ಕೊಟ್ಟಿದ್ದಾರೆ. ಒಂದು ತಾಲ್ಲೂಕ್ ಅಥವಾ ಹೋಬಳಿ ಹೆಸರು ಪತ್ರಿಕೆಯಲ್ಲಿ ಬರಲಿಲ್ಲ ಎಂದು ಅದಕ್ಕೆ ಪರಿಹಾರ ಒದಗಿಸಲು ಬಿಟ್ಟಿದ್ದೇವೆ ಎಂದು ಯಾರೂ ತಿಳಿದುಕೊಳ್ಳಬಾರದು. ಪ್ರಜಾಪ್ರಭುತ್ವದಲ್ಲಿ ಎಲ್ಲಾ ಭಾಗಕ್ಕೂ ಪರಿಹಾರ ಒದಗಿಸಲಾಗುತ್ತದೆ. ಮಾನ್ಯ ಸದಸ್ಯರ ಎಲ್ಲ ಸಲಹೆಗಳನ್ನೂ ಗಮನದಲ್ಲಿಟ್ಟುಕೊಂಡು ಕೆಲಸ ಕಾರ್ಯ ಮಾಡುತ್ತೇವೆ. ನಾನು ಮಾತನಾಡಿದ ನಂತರ ಮಾನ್ಯ ಮುಖ್ಯ ಮಂತ್ರಿಗಳು ಮಾತನಾಡುವವರು ಇದ್ದಾರೆ. ಅವರು ಈ ವಿಷಯ ಹೇಳುತ್ತಾರೆ. ಮಾನ್ಯ ಸದಸ್ಯರಾದ ಶಿವಪ್ಪನವರು ಈ ಚರ್ಚೆ ಪ್ರಾರಂಭಮಾಡುತ್ತಾ ಅವರು ಪ್ರತಿಸಲ ಹೇಳುವ ರೀತಿಯಲ್ಲಿ ಮಾತನಾಡಿದರು. ಅಭಾವ ಪರಿಸ್ಥಿತಿ ಬಗ್ಗೆ ಹೇಳುವುದನ್ನು ಬಿಟ್ಟು " ಸರಕಾರಕ್ಕೆ ಒಂದು ಸರಿಯಾದ ಥೋರಣಿ ಇಲ್ಲ, ಮಂತ್ರಿ ಮಂಡಲದಲ್ಲಿ ಮಂತ್ರಿಗಳ ಸಂಖ್ಯೆ ಹೆಚ್ಚಾಗಿದೆ, ಶರಾವತಿ ಯೋಜನೆಯಲ್ಲಿ ಅನ್ಯಾಯವಾಗುತ್ತಿದೆ, ಸ್ವಾತಂತ್ರ್ಯ ಬಂದು 17 ವರ್ಷ ರಾಜ್ಯಭಾರ ಮಾಡಿದರೂ ಕೂಡ ಏನು ಮಾಡಿದ್ದೀರಿ ? ಆಹಾರ ಹೆಚ್ಚಾಗಿ ಬೆಳೆಸಿದ್ದೀರಾ ? ಜನರಿಗೆ ಏನು ಕೊಟ್ಟಿದ್ದೀರಿ ಅಧಿಕಾರದಲ್ಲಿ ಇರಲು ಅರ್ಹತೆ ಇಲ್ಲಾ" ಎಂದು ಪುಂಖಾನುಪುಂಖವಾಗಿ ಅನೇಕ ಸಲ ಹೇಳಿದ್ದನ್ನೇ ಪುನಃ ಹೇಳಿದ್ದಾರೆ. ನಾವು ಅವರಿಗೆ ಅಧಿಕಾರ ಕೊಟ್ಟು ಹೋಗೋಣ ಅಂದರೆ ಅವರ ಪಕ್ಷ ದಿನದಿನಕ್ಕೆ ದೊಡ್ಡದಾಗುವುದರ ಬದಲು ಚಿಕ್ಕದಾಗುತ್ತಾ ಇದೆ. ಯಾರ ಕೈಯಲ್ಲಿ ಅಧಿಕಾರ ಕೊಟ್ಟು ಹೋಗಬೇಕಾಗುವುದೋ ಅನುಮಾನ ಇದೆ. ಕಳೆದ 17 ವರ್ಷ ಕಾಂಗ್ರೆಸ್ ಸರಕಾರ ಅಧಿಕಾರದಲ್ಲಿದ್ದು ದೇಶಕ್ಕಾಗಿ ಏನೇನು ಮಾಡಬೇಕೋ ಅದನ್ನು ಸರಿಯಾಗಿ ಮಾಡಿದೆ. ಮೊಟ್ಟಮೊದಲನೆಯದಾಗಿ ಆಹಾರ ಬಹಳ ಮುಖ್ಯವಾದ ವಿಷಯ. ಈ ವಿಷಯದಲ್ಲಿ ಕಾಂಗ್ರೆಸ್ ಸರಕಾರವು ಒಂದು ನಿರ್ದಿಷ್ಟ ಕಾರ್ಯಕ್ರಮ ಹಾಕಿಕೊಂಡು ಸತತ ಕೆಲಸ ಮಾಡುತ್ತಾ ಬಂದಿದೆ. ಮಹಾತ್ಮಾ ಗಾಂಧೀಜಿಯವರು ಆಹಾರಕ್ಕೆ ಪ್ರಾಧಾನ್ಯತೆ ಕೊಟ್ಟಿದ್ದರು. ಬಡವನಿಗೆ ದೇವರು ಆಹಾರದ ರೂಪದಲ್ಲಿ ಬರುತ್ತಾನೆ ಎಂದು ಅವರು ಹೇಳಿದ್ದಾರೆ. ಮಹಾ ವ್ಯಕ್ತಿಗಳಾದ ಮಹಾತ್ಮಾಜಿಯವರು ಇಂಥ ಮಹತ್ವದ ಮಾತನ್ನು ಹೇಳಿದ್ದಾರೆ. ನಾಗರೀಕತೆಗೂ ಅನಾಗರೀಕತೆಗೂ ವ್ಯತ್ಯಾಸ ಏನು ಅಂದರೆ ಊಟ. ನಾಲ್ಕು ಊಟ ಸಿಕ್ಕಿದ್ದೇ ಇದ್ದರೆ ಮನುಷ್ಯನು ನುಳ್ಳು ಹೇಳುವುದಕ್ಕೆ ಪ್ರಯತ್ನ ಮಾಡುತ್ತಾನೆ. ನಾಲ್ಕು ಊಟ ಇಲ್ಲವೆಂದರೆ ಎರಡು ದಿನ ಉಪವಾಸ ಮಾಡಿದವನು ನುಳ್ಳು ಹೇಳುತ್ತಾನೆ. ಎಂಟು ಊಟ ಇಲ್ಲದಿದ್ದರೆ, ಅಂದರೆ ನಾಲ್ಕು ದಿವಸ ಊಟವಿಲ್ಲದೆ ಉಪವಾಸ ಮಾಡಿದವನು ಕಳ್ಳತನ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾನೆ, ಹನ್ನೆರಡು ಊಟ ಇಲ್ಲದಿದ್ದರೆ ಅಂದರೆ, ಆರು ದಿವಸ ಉಪವಾಸವಿದ್ದವನು ದರೋಡೆ ಮಾಡುವುದಕ್ಕೆ ಶುರು ಮಾಡುತ್ತಾನೆ ಎಂದು ಹೇಳಿದ್ದಾರೆ. ಊಟವಿಲ್ಲದಿದ್ದರೆ ನಾಗರೀಕನಾದವನು ಅನಾಗರೀಕನಾಗುತ್ತಾನೆ. ನಾಗರೀಕ ಮತ್ತು ಅನಾಗರೀಕ ಇದರಲ್ಲಿ ವ್ಯತ್ಯಾಸವೇನೆಂದರೆ, 12 ಊಟ ಮಾತ್ರ. ಇಂದುದೇಶದಲ್ಲಿ ಏನೇನು ಮಾಡಬೇಕಾಗಿದೆಯೋ ಅದನ್ನು ನಮ್ಮ ಕಾಂಗ್ರೆಸ್ ಮಹಾ ನಾಯಕರು ಭಾರೀ ಕಾರ್ಯಕ್ರಮ ಹಾಕಿಕೊಂಡು ಮಾಡಿದ್ದಾರೆ. ಕಾಂಗ್ರೆಸ್ಸಿನವರಾದ ನಾವು ಏನೇನೂ ಮಾಡಲಿಲ್ಲ ಎಂದು ಶ್ರೀ ಶಿವಪ್ಪನವರು ಹೇಳಿದರು. ಶ್ರೀಮಾನ್ ಏಕಲ ಅವರು ಮಾತನಾಡುತ್ತಾ ಅಮೇರಿಕಾ ದೇಶ ಹೆಚ್ಚು ಧಾನ್ಯ ಬೆಳೆಯುತ್ತಾ ಇದೆ, ಅಮೇರಿಕಾ ಹಾಗೆ ಮಾಡಿದೆ, ಹೀಗೆ ಮಾಡಿದೆ, ಎಫ್. ಎ. ಓ ನಲ್ಲಿ ಹಾಗೆ ಹೇಳಿದ್ದಾರೆ, ಹೀಗೆ ಹೇಳಿದ್ದಾರೆ ಎಂದು ಕೆಲವು ವಿಷಯ ಹೇಳಿದರು. ಅಂತರ ರಾಷ್ಟ್ರೀಯ ವಸ್ತು ದೊಡ್ಡ ರಾಷ್ಟ್ರಗಳ ವಿಷಯ ಮಾತನಾಡಬೇಕಾದರೆ, ಅಮೇರಿಕಾ ಎಫ್. ಎ. ಓ. ವಿಷಯ ಮಾತನಾಡಬೇಕಾದರೆ, ಆ ದೇಶದ ವಿಷಯ ಸರಿಯಾಗಿ ತಿಳಿದುಕೊಂಡಿರಬೇಕು. ನಮ್ಮನೇ ಹೇಳಿಕೊಂಡರೆ ಅದು ಒಳ್ಳೆಯದಲ್ಲ. ನಾನು ಪ್ರಪಂಚವನ್ನು ಸಾರ್ಕೈದು ಸಲ ಸುತ್ತಾಡಿಕೊಂಡು ಬಂದಿದ್ದೇನೆ. ಅಂತರ ರಾಷ್ಟ್ರೀಯ ವಿಷಯ ತಿಳಿದುಕೊಂಡಿದ್ದೇನೆ. ಅದನ್ನು ತಮಗೆ ತಿಳಿಸುತ್ತೇನೆ. ಇಂಡಿಯಾ ದೇಶದ ಹಾಗೆ ಪ್ರಪಂಚದಲ್ಲಿ ನಾಲ್ಕು ದೊಡ್ಡ ರಾಷ್ಟ್ರಗಳಿವೆ. ಮೊದಲನೇಯದು ಚೈನಾ ದೇಶ. ಇಂಡಿಯಾಕ್ಕಿಂತ ಇದು ದೊಡ್ಡದು. ಚೀನಾ ದೇಶದ ಜನಸಂಖ್ಯೆ 60 ಕೋಟಿ ಇದೆ. ಎರಡನೇಯದು ಇಂಡಿಯಾ ದೇಶ, 46 ಕೋಟಿ ಜನ ಸಂಖ್ಯೆ ಇದೆ. ಮೂರನೇಯದು ರಷ್ಯಾ ದೇಶ. ನಾಲ್ಕನೇಯದು ಅಮೇರಿಕಾ ದೇಶ. ಇವುಗಳ ಜನ ಸಂಖ್ಯೆ 18 ರಿಂದ 20 ಕೋಟಿವರೆಗೆ ಇದೆ. ದೊಡ್ಡ ರಾಷ್ಟ್ರಗಳಲ್ಲಿ ಜನ ಸಂಖ್ಯೆಯ ಪ್ರಮಾಣದಲ್ಲಿ ಚೈನಾ ದೊಡ್ಡದಾಗಿದ್ದರೂ ಕೂಡ ಆಹಾರದ ವಿಷಯ ಚೈನಾಕ್ಕೆ ಬಹಳ ಮುಖ್ಯ. ಜನ ಸಂಖ್ಯೆ

ಜಾಸ್ತಿ ಇದ್ದಷ್ಟೂ ಆಹಾರ ಹೆಚ್ಚು ಬೇಕಾಗುತ್ತದೆ. ನಾಲ್ಕು ಮಹಾ ರಾಷ್ಟ್ರಗಳಲ್ಲಿ ಚೈನಾ ದೇಶಕ್ಕೆ ನಮಗಿಂತ ಕಡಿಮೆ ಸಾಗುವಳಿ ಭೂಮಿ ಇದೆ. ಅದಕ್ಕೆ 60 ಕೋಟಿ ಜನಸಂಖ್ಯೆಗೆ 30 ಕೋಟಿ ಎಕರೆ ಭೂಮಿ ಇದೆ. ಈ ನಾಲ್ಕು ರಾಷ್ಟ್ರಗಳನ್ನು ನಾನು ನೋಡಿಕೊಂಡು ಬಂದು ಅಗ್ರಿಕಲ್ಚರಲ್ ಎಕಾನಮೀ ಸ್ಟಡೀ ಮಾಡಿಕೊಂಡು ಇದನ್ನು ನಾನು ಹೇಳುತ್ತಿದ್ದೇನೆ. ಇಂಡಿಯಾದಲ್ಲಿ 46 ಕೋಟಿ ಜನಸಂಖ್ಯೆಗೆ 36 ಕೋಟಿ ಎಕರೆ ಭೂಮಿ ಉಳುತ್ತಾ ಇದ್ದಾರೆ. ಇಂಡಿಯಾ ದೇಶದಲ್ಲಿ ಒಬ್ಬ ಮನುಷ್ಯನಿಗೆ ಮುಕ್ಕಾಲು ಎಕರೆ ಭೂಮಿ ಇದೆ. ಅಮೇರಿಕಾದಲ್ಲಿ ಪರ್ ಕ್ಯಾಪಿಟಾ 6 ಎಕರೆ ಭೂಮಿ ಇದೆ. ರಷ್ಯಾ ದೇಶದಲ್ಲಿ ನಹ ಒಬ್ಬ ಮನುಷ್ಯನಿಗೆ ಉತ್ತಿ ಬಿತ್ತಿ ಬೆಳೆಯುವುದಕ್ಕೆ ಐದೂವರೆ ಎಕರೆಯಿಂದ ಆರು ಎಕರೆ ಭೂಮಿ ಇದೆ. ಅಲ್ಲಿ ಉಳಿದ ದೇಶಕ್ಕಿಂತ ಜನಸಂಖ್ಯೆ ಪ್ರಮಾಣ ಕಡಮೆ ಇದ್ದು ಭೂಮಿ ಜಾಸ್ತಿ ಇದೆ. ಶೇಕಡ 80 ರಷ್ಟು ಇರಿಗೇಟೆಡ್ ಲ್ಯಾಂಡ್ ಇದೆ. ಚೈನಾ ದೇಶದಲ್ಲಿ ನದಿ ವ್ಯಾಲಿಗಳಲ್ಲಿ ಕಲ್ಟಿವೇಶನ್ ಮಾಡುತ್ತಾರೆ. ಗುಡ್ಡ ಪ್ರದೇಶ ಸಹ ಇದೆ. ಅಲ್ಲಿ ನೂರಕ್ಕೆ ತೊಂಭತ್ತು ಭಾಗ ಅಕ್ಕಿ ಬೆಳೆಯುತ್ತಾರೆ. ಶೇಕಡ 90 ರಷ್ಟು ಇರಿಗೇಶನ್ ಇದೆ. ಅಲ್ಲಿ ಅಕ್ಕಿಯನ್ನು ನಾಲ್ಕು ಸಲ ಬೆಳೆಯುತ್ತಾರೆ. ಚೈನಾ ದೇಶದಲ್ಲಿ ಭೂಮಿ ಕಡಿಮೆ ಇದ್ದರೂ ಕೂಡ ಜಾಸ್ತಿ ಬೆಳೆಯುತ್ತಾರೆ. ನಮ್ಮ ಇಂಡಿಯಾ ದೇಶದಲ್ಲಿ ಒಂದು ವರ್ಷಕ್ಕೆ ಒಂದು ಕೋಟಿ ಜನಸಂಖ್ಯೆ ಜಾಸ್ತಿಯಾಗುತ್ತಿದೆ. ನಮ್ಮ ದೇಶದಲ್ಲಿ ಇರಿಗೇಟೆಡ್ ಲ್ಯಾಂಡ್ ಇರುವುದು ಕೇವಲ 22 ಪರ್ಸೆಂಟು.

China has less land than India, but they have more irrigation. Irrigation is more important. Russia is also importing foodgrains, so also is China. ಎಷ್ಟೆಷ್ಟು ಸಿಕ್ಕುತ್ತದೆಯೋ ಅಷ್ಟನ್ನು ನಾವು ಕೊಂಡುಕೊಳ್ಳುತ್ತಿದ್ದೇವೆ.

Russia is importing 300 to 400 crores worth of foodgrains from America. From the last six-seven years, China is importing all the available surplus food from all over the world. India, the third country, with a huge population, with less irrigation and more of land, depending upon the vagaries of monsoon, my India, is doing well, and India is exporting. We have got to earn foreign exchange for building up our country, to get machinery and other things. We have exported nearly 750 crores of agricultural produce to earn the foreign exchange necessary to build up our country. We have exported 140 crores of jute alone. Jute is grown where rice can be grown. If you stop export of jute, India might be self-sufficient in rice, because 140 crores of jute is grown in areas where rice could have been grown. We export 80 crores worth of oil seeds, where jawar could have been grown. We are exporting vegetables, fish and cashewnuts. Even onions we are exporting. ಇಂಡಿಯಾ ದೇಶದಲ್ಲಿ ಇಂದು ಸಕ್ಕರೆ ಶಾರ್ಟೇಜ್ ಇದೆ, ಬೆಲೆ ಜಾಸ್ತಿಯಾಗಿದೆ. ಆದರೂ ಕೂಡ ದೇಶದ ಹಿತ ದೃಷ್ಟಿಯಿಂದ ಎಕ್ಸ್‌ಪೋರ್ಟ್ ಮಾಡಬೇಕಾಗಿದೆ. ಮುಂದಿನ ಜನಾಂಗದ ಸಲುವಾಗಿ ನಮ್ಮ ಮಕ್ಕಳು ಮೊಮ್ಮಕ್ಕಳ ಸಲುವಾಗಿ ಇಂದು ನಾವು ಹೆವ್ವಿಪ್ರೆಸಿಸ್ ಕೂಡ ಬೇಕಾಗಿದೆ. We have exported 40 crores worth of sugar Why can't you bring down is the question asked. We can bring down the prices, provided we stop exports. For an under-developed country like India, we have to tighten our belts, pay any price internally and try to build industry so that the future generations may have plenty. This is just replying to our Opposition who said yesterday that Congress has done nothing in these seventeen years.

We have beautiful soil ನಮ್ಮ ದೇಶದಲ್ಲಿ 2 ಕೋಟಿ 75 ಲಕ್ಷ ಎಕರೆ ನರ್ಪ್ಲಸ್ ಭೂಮಿ ಇದೆ. ನಮ್ಮ ರೈತರು ಧೃಢಕಾಯರಾಗಿದ್ದು ಮೀಸೆ ಇಟ್ಟುಕೊಂಡ ಗಂಡನರು ಆಗಿದ್ದಾರೆ. ವಿಜಾಪೂರ, ಗುಲಬುರ್ಗಾ ಪ್ರದೇಶದ ಕಡೆಗೆ ಹೋಗಿ ನಮ್ಮ ರೈತರನ್ನು ನೋಡಿದರೆ ಗೊತ್ತಾಗುತ್ತದೆ. ಧೃಢಕಾಯರಾಗಿ ಮೀಸೆ ಇಟ್ಟುಕೊಂಡು ತಲೆಗೆ ರುಮಾಲು ಸುತ್ತಿ ಕಚ್ಚೆ ಪಂಚೆ ಉಟ್ಟುಕೊಂಡು ಬರುವ ನಮ್ಮ ರೈತರನ್ನು ನೋಡಿದರೆ ಸಂತೋಷವಾಗುತ್ತದೆ. ಅಲ್ಲಿ ಒಳ್ಳೇ ಎರೆ ಭೂಮಿ

(ಶ್ರೀ ಎಂ. ವಿ. ಕೃಷ್ಣಪ್ಪ)

ಇದೆ. ನದಿಯಲ್ಲಿ ನೀರು ಹರಿಯುತ್ತದೆ. ಆದರೆ ಅಲ್ಲಿ ಇರಿಗೇಶನ್ ಇಲ್ಲ. ಶೇಕಡ 7 ರಷ್ಟು ಇರಿಗೇಟೆಡ್ ಭೂಮಿ ಇದೆ. ಎಲ್ಲ ಭೂಮಿ ನೀರಾವರಿಯಾದರೆ ಬೇಕಾದಷ್ಟು ಬೆಳೆ ಬೆಳೆಯುವುದಕ್ಕೆ ಸಾಕಷ್ಟು ಅವಕಾಶವಿದೆ. Don't think for a moment that Mysore is lagging behind in food production. We may require to import 20,000 tons of rice every year. That is very very meagre compared to the influx of people from the surrounding areas.

ಒಂದು ವರ್ಷಕ್ಕೆ ಸಾಧಾರಣವಾಗಿ ಎರಡು ಲಕ್ಷ ಜನ ನಮ್ಮ ಸುತ್ತಮುತ್ತಿನ ರಾಜ್ಯಗಳಿಂದ ತಮಿಳು ನಾಡಿನಿಂದ, ಕೇರಳದಿಂದ ಆಂಧ್ರದಿಂದ ನಮ್ಮ ಮೈಸೂರು ರಾಜ್ಯಕ್ಕೆ ಬರುತ್ತಿದ್ದಾರೆ. ಹೆಚ್ಚು ಜನ ಬರುತ್ತಿರುವುದರಿಂದ ಹೆಚ್ಚು ಅಕ್ಕಿ ಬೇಕಾಗಿದೆ. ಆದರೂ ಕೂಡ we are in a happy position ನಾವು ಯಾರಿಗೂ ತಲೆ ಬಾಗಿಸಬೇಕಾಗಿಲ್ಲ. 15-20 ಕೋಟಿ ರೂಪಾಯಿ ಬೆಲೆ ಬಾಳುವ ಒಳ್ಳೆಯ ರೇಷ್ಮೆ ನಮ್ಮ ಮೈಸೂರು ರಾಜ್ಯದಲ್ಲಿ ಬೆಳೆಯುತ್ತಿದ್ದೇವೆ. Mysore is in a very very happy position. If we are not growing food, we are growing beautiful silk—15 to 20 crores worth of silk. Eighty percent of the Indian silk is grown in Mysore. Fifty per cent of spices are grown here.

ನಾವು ಆಹಾರ ಬೆಳೆಯುವುದರಲ್ಲಿ ಹತ್ತು ಸಾವಿರ ಟನ್ ಕಡಿಮೆ ಇದ್ದರೂ ಕೂಡ ಹೊರಗಡೆಯಿಂದ ಬರುವ ಜನ ನಿಂತರೆ ಅದನ್ನು ನಾವು ನಿರೀಪಡಿಸಬಹುದು. ಶ್ರೇಷ್ಠ ಹತ್ತಿ, ಶೇಂಗಾ, ಸಿಲ್ಕ್, ಕಾಫಿ, ಆಡಿಕೆ, ಬೆಳೆದು ಬೇರೆ ದೇಶಕ್ಕೆ ಕಳಿಸಿ ಹಣ ಸಂಪಾದನೆ ಮಾಡುತ್ತಿದ್ದೇವೆ. ಇದರಿಂದ ಫಾರೇನ್ ಎಸ್ಚೇಂಜ್ ದೊರೆಯುತ್ತಿದೆ. ಆದುದರಿಂದ ಭಯಪಡುವ ಕಾರಣವಿಲ್ಲ. ಕೇವಲ ಸಿಲ್ಕ್‌ಗೋಸ್ಕರ ಎರಡು ಲಕ್ಷ ಎಕರೆ ಭೂಮಿಯಲ್ಲಿ ಮಲ್‌ಬೆರಿ ಬೆಳೆಯಲಾಗುತ್ತಿದೆ. ಸಿಲ್ಕ್ ಪ್ರೊಡಕ್ಷನ್ ನಿಲ್ಲಿಸಿದರೆ ಈ ಎರಡು ಲಕ್ಷ ಒಳ್ಳೇ ಭೂಮಿಯಲ್ಲಿ ಆಹಾರ ಧಾನ್ಯ ಬೆಳೆಯಬಹುದು. ಇದರಿಂದ ನಮ್ಮ ರಾಜ್ಯ Self Sufficient ಆಗುತ್ತದೆ. ಆದರೆ ಸಿಲ್ಕ್ ಬೇರೆ ಕಡೆ ಬೆಳೆಯಬಹುದೇ ?

Silk cannot be grown everywhere in India. The soil, climate and the culture of Mysore can alone grow the sericulture industry. If we stop growing silk, we can utilise that land for growing rice. Let not Hon'ble Mr. Sivappa think that Mysore is lagging behind. If it is not growing rice, it is growing coffee. What have you done for irrigation that was the question asked. Mysore has big projects.

ಮೈಸೂರಿನಲ್ಲಿ ನಮ್ಮ ಮುಖ್ಯವಾದ ಪ್ರಶ್ನೆ ಇರಿಗೇಷನ್ ನಮ್ಮ ರೈತರು ಧೃಢ ಕಾಯರಾಗಿದ್ದಾರೆ. ಶ್ರೇಷ್ಠವಾದಂಥ ಎರೆ ಭೂಮಿ ಇದೆ. ತುಂಬ ಹರಿಯುವ ನದಿಗಳಿವೆ. ನಮ್ಮ ರೈತರಿಗೆ ನಾವು ಹೆಚ್ಚಾಗಿ ನೀರು ಒದಗಿಸಿದ್ದೇ ಆದರೆ, ಹೆಚ್ಚು ಬೆಳೆ ಬೆಳೆಯುತ್ತಾರೆ. ಆದರೆ ಕಾರಣಾಂತರದಿಂದ ಕನ್ನಡ ದೇಶದಲ್ಲಿ ಇರಿಗೇಶನ್ ಹೆಚ್ಚಾಗಿ ಬೆಳೆದು ಬಂದಿಲ್ಲ. ಅದಕ್ಕೋಸ್ಕರ ಕನ್ನಡ ದೇಶದಲ್ಲ ಏನು ಮಾಡುತ್ತಿದ್ದೀರಿ ಎಂದು ಕೇಳುತ್ತಿದ್ದಾರೆ. ತಮಗೆ ಗೊತ್ತಿದ್ದ ಹಾಗೆ ನಮ್ಮ ಮೂರನೆ ಪ್ಲಾನಿನ ಔಟ್‌ಲೆ 250 ಕೋಟಿ ರೂಪಾಯಿ ಆ 250 ಕೋಟಿಯಲ್ಲಿ 80 ಕೋಟಿ ಶರಾವತಿ ಒಂದು ಪ್ರಾಜೆಕ್ಟಿಗೆ ಹೋಗುತ್ತದೆ. ಅದು ಇಂಡಿಯಾ ದೇಶದಲ್ಲಿಯೇ ದೊಡ್ಡದಾದಂಥ ಹೈಡ್ರೋ ಎಲೆಕ್ಟ್ರಿಕ್ ಪ್ರಾಜೆಕ್ಟ್ ಅದಕ್ಕೆ 70-80 ಕೋಟಿ ರೂಪಾಯಿ ಹೋಗುತ್ತಾ ಇದೆ. ಈ 250 ಕೋಟಿಯಲ್ಲಿ 80 ಕೋಟಿ ಒಂದು ಪ್ರಾಜೆಕ್ಟಿಗೆ ಹೋಗುವಾಗ ನಮ್ಮ ರಾಜ್ಯದಲ್ಲಿ ನೀರಾವರಿ ಹೆಚ್ಚಿಗೆ ಮಾಡುವ ಅವಕಾಶ ಕಡಿಮೆಯಾಗಿದೆ. ಬಹುಶಃ ಮುಂದಿನ ಪ್ಲಾನಿನಲ್ಲಿ ಅದಕ್ಕೆ ದೊಡ್ಡದಾದ ಚಾರ್ಜೆಟ್ ಇಟ್ಟುಕೊಂಡು, ನಾವು ಕೃಷ್ಣಾ ಗೋದಾವರಿ ನೀರಿಗಾಗಿ ಏನು ಪ್ರಯತ್ನ ಮಾಡುತ್ತಿದ್ದೇವೆ, ಅದಕ್ಕೆ ಭಾರಿ ಯೋಜನೆಗಳನ್ನು ಮಾಡುತ್ತೇವೆ. ತಮಗೆ ಗೊತ್ತಿದೆ. ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದು ಈ 280 ಕೋಟಿ ರೂಪಾಯಿಯ ಭಾರಿ ನೀರಾವರಿ ಯೋಜನೆಗಳ, 15 ವರ್ಷದ ಒಂದು ಫೇಸ್ಡ್ ಪ್ರೋಗ್ರಾಂ ಗವರ್ನ್‌ಮೆಂಟ್ ಆಫ್ ಇಂಡಿಯ ಮುಂದೆ ಇಟ್ಟಿದ್ದೇವೆ. ಅದೇ ರೀತಿ 40 ಕೋಟಿ ಮೈನರ್ ಇರಿಗೇಷನ್ನಿಗೆ ಇಂಟಿಗ್ರೇಟಿಡ್ ಪ್ಲಾನಿನಲ್ಲಿಟ್ಟು, ನಾಲ್ಕನೆ ಪ್ಲಾನಿನಲ್ಲಿ ಕೊಟ್ಟಿದ್ದೇವೆ. ಯಾವಾಗ ನೀರು ಜಾಸ್ತಿಯಾಗುತ್ತದೆ. ಆಗ ದೇಶದಲ್ಲಿ ಬೆಳೆ ಜಾಸ್ತಿ ಬೆಳೆಯುತ್ತಾರೆ. ಆದರೆ ಅದುವರೆಗೆ ಕಾಯುವುದಕ್ಕೆ ಅನೇಕರಿಗೆ ತಾಳ್ಮೆ ಇಲ್ಲ. ನಮ್ಮನ್ನೆ ಟೀಕೆ ಮಾಡಿದರೆ ನಾವು ಏನು ಮಾಡಬಹುದು ? ಈ ಅಭಾವ ಪರಿಸ್ಥಿತಿ ಪ್ರದೇಶಗಳ ಎಷ್ಟೆಷ್ಟು ಕೊರತೆ 50-60 ವರ್ಷಗಳಿಂದ ಇದೆ ಎಂಬ ಬಗ್ಗೆ

ಅಂಕಿ ಅಂಶಗಳನ್ನು ಶೇಖರ ಮಾಡಿ, ಅದನ್ನು ಹೋಗರಾಡಿಸಲು 60 ಕೋಟಿ ರೂಪಾಯಿನ ಒಂದು ಇಂಟಿಗ್ರೇಟೆಡ್ ಪ್ಲಾನನ್ನು ಮಾಡಿದ್ದೇವೆ ; ಆ ಪ್ಲಾನಿನಲ್ಲಿ ಮೈನರ್ ಇರಿಗೇಷನ್, ಸಾಯಿಲ್ ಕನ್ ಸರ್ವೇಶನ್, ಅಫಾರೆಸ್ಟೇಶನ್, ಕಾಂಟೂರ್ ಬಂಡಿಗ್, ಅನಿಮಲ್ ಹಸ್‌ಬೆಂಡರಿ, ಕಾಟೇಜ್ ಇಂಡ ಸ್ಟ್ರೀಸ್ ಎಲ್ಲಾ ಸೇರಿಕೊಂಡಿವೆ. ಆ ಪ್ಲಾನನ್ನು ಕೇಂದ್ರ ಸರಕಾರಕ್ಕೆ ಕೊಟ್ಟಿದ್ದೇವೆ. ಅದರ ಮೇಲೆ ಈ ಎರಡು ವರ್ಷಗಳಲ್ಲಿ ಕೇಂದ್ರ ಸರಕಾರದವರು ನಮಗೆ 6-7 ಕೋಟಿ ರೂಪಾಯಿಗಳ ಅಡಿಶನಲ್ ಫೈನಾನ್ಸಿಯಲ್ ಅಸಿಸ್ಟೆನ್ಸ್ ಕೊಟ್ಟಿದ್ದಾರೆ. ನಮ್ಮ ಮುಖ್ಯ ಮಂತ್ರಿಗಳು ದೆಹಲಿಗೆ ಹೋದಾಗ ಲೆಲ್ಲಾ, ಆಹಾರ ಬೆಳೆಯುವುದಕ್ಕೆ ಇರಿಗೇಶನ್ ವೆಲ್ಲುಗಳು, ಪಂಪು ಸೆಟ್ಟುಗಳು ಸಪ್ಲೈ, ಕಾಂಟೂರ್ ಬಂಡಿಂಗ್, ಅಫಾರೆಸ್ಟೇಶನ್ ಇವೆಲ್ಲಾ ಬಹಳ ಮುಖ್ಯ, ಅದ್ದರಿಂದ ನಮ್ಮ 40 ಕೋಟಿ ಪ್ಲಾನ್ ಏನಿದೆ. ಅದನ್ನು ಬೇಗ ಸ್ಯಾಕ್ಷನ್ ಮಾಡಬೇಕೆಂದು ಪ್ಲಾನಿಂಗ್ ಕಮಿಷನ್ನನ್ನು ಪ್ರೆಸ್ ಮಾಡುತ್ತಿದ್ದಾರೆ. ನಾವು ಈ ಪ್ಲಾನು ಕೊಟ್ಟಿದ್ದರಿಂದಲೇ ಕೇಂದ್ರ ನಮಗೆ 6-7 ಕೋಟಿ ರೂಪಾಯಿಯ ಅಡಿಷನ್‌ಲ್ ಫಂಡನ್ನು ಎರಡು ವರ್ಷದಿಂದಲೂ ಕೊಟ್ಟಿರುವುದು. ಕಳೆದ ತಿಂಗಳು 3½ ಕೋಟಿ ರೂಪಾಯಿ ಅದೇ ಪ್ಲಾನಿಗೆ ಖರ್ಚು ಮಾತುವುದಕ್ಕೋಸ್ಕರ ಕೊಟ್ಟಿದ್ದಾರೆ. ಈಗ ಬಂದಿದೆ ; ಅದನ್ನು ಖರ್ಚು ಮಾಡುತ್ತಾ ಇದ್ದೇವೆ. ಏನು ಮಾಡಿದ್ದೀರಿ, ಏನು ಮಾಡಿದ್ದೀರಿ ಎಂದು ಕೆಲವರು ಪದೇ ಪದೇ ಕೇಳುತ್ತಾರೆ. ಸಣ್ಣ ನೀರಾವರಿ ಕಾರ್ಯಗಳ ಬಗ್ಗೆ ಈ ಸರ್ಕಾರ, 40 ಕೋಟಿ ರೂಪಾಯಿ ಯೋಜನೆಯನ್ನು ತಯಾರು ಮಾಡಿ ಕಳುಹಿಸಿರುವುದರ ಪರಿಣಾಮವಾಗಿಯೇ ನಾವು ಇಲ್ಲಿಯವರೆಗೆ ಇಷ್ಟು ವಿಶೇಷ ಸಹಾಯ ಪಡೆಯಲು ಸಾಧ್ಯವಾಗಿದೆ. ಈ 40 ಕೋಟಿ ರೂಪಾಯಿ ಪ್ಲಾನ್ ಬಗ್ಗೆ ಬಂದ ಹಣವನ್ನು ಅಭಾವ ಪರಿಸ್ಥಿತಿ ಇರುವ ಪ್ರದೇಶಗಳಲ್ಲಿ ಖರ್ಚು ಮಾಡುತ್ತಿದ್ದೇವೆ. ದುರ್ದೈವ ವಶಾತ್ತೋ, ದೈವ ವಶಾತ್ತೋ, ರಾಜ್ಯದಲ್ಲಿ ಮಳೆ ಬೆಳೆ ಹೋದುದರಿಂದ, ತಕ್ಷಣ ಹಣ ಬಂದಿದೆ. ಕಳೆದ ತಿಂಗಳು 3 ಕೋಟಿ 60 ಲಕ್ಷ ರೂಪಾಯಿಯನ್ನು ಕೇಂದ್ರ ಸರಕಾರದವರು ಗ್ರೋ ಮೋರ್ ಫುಡ್‌ಗೋಸ್ಕರ ಕಳುಹಿಸಿ ಕೊಟ್ಟಿದ್ದಾರೆ. ಅದನ್ನು ನಾವು ರಿಲೀಸ್ ಮಾಡುತ್ತೇವೆ. ಯಾವ ಯಾವ ಐಟಮ್ಮಿಗೆ ಅದರಲ್ಲಿ ಎಷ್ಟೆಷ್ಟು ಅಂತ ಹೇಳುತ್ತೇನೆ. ನಾವು ಈ ಪ್ಲಾನನ್ನು ಕಳುಹಿಸದೆ ಇದ್ದರೆ, ಈ ಅಡಿಷನಲ್ ಫಂಡ್ಸ್ ಬರುತ್ತಿರಲಿಲ್ಲ. ಈ 3½ ಕೋಟಿ ರೂಪಾಯಿ ಸಹಾಯ ಒಳ್ಳೆಯ ಸಮಯದಲ್ಲಲ್ಲ, ಸಕಾಲದಲ್ಲಿ ಸಿಕ್ಕಿದೆ ; ಈ ಹಣ ಸಕಾಲದಲ್ಲೋದಗಿದ ಸಹಾಯ. ಅಭಾವ ಪರಿಸ್ಥಿತಿ ಇರುವ ಪ್ರದೇಶ ಗಳಲ್ಲಿ ಸೀರಾವರಿ ಬಾವಿಗಳಿಗೋಸ್ಕರ ಈ ಹಣದಿಂದ, ಒಂದು ಕೋಟಿ 8 ಲಕ್ಷ ರೂಪಾಯಿಗಳನ್ನು ಕಳುಹಿಸುತ್ತೇವೆ. We have nearly 17 thousand irrigation wells which are not completed ಈ ಕನ್ನಡ ದೇಶದಲ್ಲಿ ಕಳೆದ ಮೂರು ವರ್ಷಗಳಲ್ಲಿ 36 ಸಾವಿರ ಬಾವಿಗಳ ಕೆಲಸವನ್ನು ಪ್ರಾರಂಭಮಾಡಿದ್ದೇವೆ. ಅದರಲ್ಲಿ ಸುಮಾರು ಅರ್ಧ ಬಾವಿಗಳು ಕಂಪ್ಲೀಟ್ ಆಗಿಲ್ಲ. ಆ ಬಾವಿ ಗಳನ್ನು ಕಂಪ್ಲೀಟ್ ಮಾಡುವುದಕ್ಕೋಸ್ಕರ 1 ಕೋಟಿ 8 ಲಕ್ಷ ರೂಪಾಯಿಗಳನ್ನು ತಕ್ಷಣ ಸ್ಯಾಂಕ್ಷನ್ ಮಾಡುತ್ತಾ ಇದ್ದೇವೆ. ಈ ಹಣವನ್ನು ಡಿವಿಜನ್‌ಲ್ಸ್ ಹಂಚುತ್ತೇವೆ. ಈ ಬಾವಿಗಳನ್ನು ಬೇಗ ಪೂರ್ಣಗೊಳಿಸಬೇಕೆಂದು ಆದೇಶ ಕೊಡುತ್ತೇವೆ. ಮಾನ್ಯ ಮುಖ್ಯ ಮಂತ್ರಿಗಳು ದೆಹಲಿಗೆ ಹೋದಾಗ ಗವರ್ನ್‌ಮೆಂಟ್ ಆಫ್ ಇಂಡಿಯಾದವರು ಕರೆದಿದ್ದ ಸಭೆಯಲ್ಲಿ. Mysore is doing very well in minor irrigation but it has to complete and then start new works ಎಂದು ಹೇಳಿದರು. ಜಾಸ್ತಿ ಕೆಲಸ ಶುರು ಮಾಡಿದರೆ, ಸ್ವಲ್ಪ ಜಾಸ್ತಿ ಹಣ ಕೊಡಿ ಅಂತ ಕೇಳಬಹುದು, ಅವರೂ ಕೊಡುತ್ತಾರೆ. ಈ ನೀರಾವರಿ ಬಾವಿಗಳದ್ದು ದೊಡ್ಡ ಸಮಸ್ಯೆ. 36 ಸಾವಿರ ಬಾವಿಗಳ ಕೆಲಸವನ್ನು ಶುರು ಮಾಡಿಸಿದ್ದೇವೆ. ಅವುಗಳಲ್ಲಿ, ಅರ್ಧಕ್ಕೂ ಹೆಚ್ಚಿಗೆ ಇನ್ ಕಂಪ್ಲೀಟಾಗಿ ಇರುತ್ತವೆ. ಈ 1 ಕೋಟಿ 8 ಲಕ್ಷ ರೂಪಾಯಿಗಳನ್ನು ಎಲ್ಲಾ ಜಿಲ್ಲಾ ಅಧಿಕಾರಿಗಳಿಗೂ ಕಳುಹಿಸಿ, ಆ ಹಣದಲ್ಲಿ 17 ಸಾವಿರ incomplete wells ಪೂರ್ಣಗೊಳಿಸಿ, ಆ ಮೇಲೆ ಮಿಕ್ಕ ಹಣದಲ್ಲಿ ಕೆಲವು ಹೊಸ ಬಾವಿಗಳ ನಿರ್ಮಾಣ ಕೆಲಸವನ್ನು ತೆಗೆದುಕೊಳ್ಳಿ ಎಂದು ಆದೇಶ ಕೊಡುತ್ತ ಇದ್ದೇವೆ.

ಅದೇ ಹಣದಲ್ಲಿ ಅಗ್ರಿಕಲ್ಚರಲ್ ಪ್ರೋಗ್ರಾಮಿಗೋಸ್ಕರ 25 ಲಕ್ಷ ರೂಪಾಯಿಯನ್ನು ವಿನಿ ಯೋಗಿಸುತ್ತೇವೆ. ಆ ಹಣವನ್ನು ಫರ್ಟಿಲೈಸರ್ಸು, ಇನ್‌ಸೆಕ್ಟಿ ಸೈಡ್ಸಿಗೂ ಹಾಕುತ್ತೇವೆ.

ಇರಿಗೇಶನ್ ಪಂಪು ಸೆಟ್ಟುಗಳಿಗಾಗಿ 40 ಲಕ್ಷ ರೂಪಾಯಿಯನ್ನು ಉಪಯೋಗಿಸುತ್ತೇವೆ. ಬಾವಿಗಳಿಗೆ ಹೆಚ್ಚಿಗೆ ಪಂಪು ಸೆಟ್ಟುಗಳನ್ನು ಕೊಟ್ಟಿಲ್ಲ. ಅನೇಕರು ಹೆಚ್ಚಿಗೆ ಕೇಳುತ್ತಿದ್ದಾರೆ. ಆದ ರಿಂದ ಅಪವಾದ ಬಂದಿದೆ.

ಈ ಎಲ್ಲಾ ಐಟಮ್ಮುಗಳಿಗೆ year beginning ನಲ್ಲಿ 1 ಕೋಟಿ ರೂಪಾಯಿ ಹಣ ಕೊಟ್ಟಿದ್ದೇವೆ. This is in addition to what we have already given.

ಮಾನ್ಯ ಸದಸ್ಯರು ಮಾತನಾಡುತ್ತಾ ಇರಿಗೇಷನ್ ಪಂಪ್ ಸೆಟ್ಸ್ ಕೊಡುತ್ತಾ ಇಲ್ಲ ಎಂದು ಅಪಾದನೆ ಮಾಡಿದರು. 40 ಲಕ್ಷ ರೂಪಾಯಿಗಳನ್ನು ಇರಿಗೇಷನ್ ಪಂಪ್‌ಸೆಟ್ಸ್‌ಗೆ ಕೊಟ್ಟಿದ್ದೇವೆ. ಕೋಲಾರ ಜಿಲ್ಲೆಯ ಉದಾಹರಣೆಯನ್ನು ಹೇಳುವುದಾದರೆ, ಅವರು ಬಹಳ ವರ್ಷಗಳಿಂದ ಅದನ್ನು

(ಶ್ರೀ ಎಂ. ವಿ. ಕೃಷ್ಣಪ್ಪ)

ಅಲ್ಲಿ ಉಪಯೋಗ ಮಾಡುತ್ತಾ ಇದ್ದಾರೆ. ಮೈಸೂರು ಸಂಸ್ಥಾನದಲ್ಲಿ ಮೊದಲು ಇಲ್ಲಿರುವ ಲಾರ್ ಬಾಗಿನಲ್ಲಿ ಹಾಕಿಕೊಂಡಿದ್ದರಂತೆ. ಆ ಕಾಲದಲ್ಲಿ ಇದನ್ನು ಯಾರೂ ಕೇಳುವವರೇ ಇರಲಿಲ್ಲ. ಕಪಿಲೇ ಹೊಡೆಯುವುದಕ್ಕೆ ಬೇಕಾದಷ್ಟು ಜನ ಇದ್ದರು, ಇದು ಬಂದು ಆ ಜನರು ಹಾಳಾಗಿ ಹೋದರು ಎಂದು ಬಯ್ಯುತ್ತಾ ಇದ್ದುದ್ದನ್ನು ನಾನು ಕೇಳಿದ್ದೇನೆ. ಆಗ ಅಗ್ಗದಲ್ಲಿ ಲೇಬರ್ ಸಿಕ್ಕುತ್ತಾ ಇತ್ತು, ಆದ್ದರಿಂದ ಇದನ್ನು ಕೇಳುವವರೇ ಇರಲಿಲ್ಲ. ಅಂಥಾದ್ದರಲ್ಲೂ ಕೂಡ ಪಂಪ್‌ಸೆಟ್ಸ್ ತೆಗೆದುಕೊಳ್ಳುವುದಕ್ಕೆ ಪ್ರಯತ್ನಪಟ್ಟು ಈ 40 ವರ್ಷದಲ್ಲಿ 6ಸಾವಿರ ಪಂಪ್‌ಸೆಟ್ಸ್‌ಗಳನ್ನು ಅವರು ಹಾಕಿಕೊಂಡಿದ್ದಾರೆ. ಅಷ್ಟೇ ವಿನಹ ನಾರಾಯಣ ಗೌಡರು ಕೃಷ್ಣಪ್ಪನವರು ಅವರಿಗೆ ಕೊಟ್ಟಿದ್ದಾರೆ ಎಂದು ತಿಳಿದುಕೊಳ್ಳಬೇಡಿ. ಗೌರೀಬಿದನೂರಿನಲ್ಲಿ 1200 ಪಂಪ್‌ಸೆಟ್ಸ್ ಇವೆ. ಚಿಕ್ಕಬಳ್ಳಾಪುರ ಒಂದರಲ್ಲೇ 1400 ಇವೆ. ಈ ಬೆಂಗಳೂರಿನಲ್ಲಿ ಜನ ತಿನ್ನುವ ತರಕಾರಿಯನ್ನು ಆ ಪಂಪ್‌ಸೆಟ್‌ಗಳಿಂದಲೇ ಬೆಳೆಯುವುದು. ಆಲೂಗಡ್ಡೆ ಬೆಳೆಯುತ್ತಾರೆ, ಕೋಸುಗೆಡ್ಡೆ ಬೆಳೆಯುತ್ತಾರೆ. ವಿಶಿಷ್ಟ ತರಕಾರಿಯನ್ನೂ ಕೋಲಾರ ಜಿಲ್ಲೆಯವರು ಬೆಳೆದು ಅದನ್ನು ಇಲ್ಲಿಗೆ ಕಳುಹಿಸುತ್ತಾರೆ. ಈ ಪಂಪ್‌ಸೆಟ್ಟುಗಳ ಜೊತೆಗೆ 8 ಲಕ್ಷ ರೂಪಾಯಿಗಳನ್ನು ಬೋರ್‌ವೆಲ್ಸ್‌ಗೆ ಬೇಕಾದ ಮೆಷಿನರಿಗೆ ಕೊಟ್ಟಿದ್ದೇವೆ. ನಿನ್ನೆ ಮೊನ್ನೆ ಮಾನ್ಯ ಸದಸ್ಯರು ಹೇಳಿದ್ದಾರೆ ಬಾವಿ ತೆಗೆದು ಅಲ್ಲಲ್ಲಿ ಬಂಡೆ ಸಿಕ್ಕಿದೆ, 3 ಸಾವಿರ ರೂಪಾಯಿ ಸಾಲ ತೆಗೆದು ಕೊಂಡು ತಾನೂ ಇನ್ನಷ್ಟು ಸಾಲ ಮಾಡಿ ತೆಗೆದಿರುವ ಬಾವಿಯಲ್ಲಿ ಬಂಡೆ ಬಂದಿರುವ ನಿದರ್ಶನ ಇದೆ. ಅದನ್ನು ಬೋರ್ ಮಾಡಿದರೆ ನೀರು ಬರುತ್ತದೆ. ಅದಕ್ಕೆ ಮೆಷಿನರಿ ಬೇಕೆಂದು ಕೇಳುತ್ತಾ ಇದ್ದಾರೆ ಎಂದು. ಅದ್ದರಿಂದ 8 ಲಕ್ಷ ರೂಪಾಯಿನ ಬೋರಿಂಗ್ ಮೆಷಿನ್ಸ್‌ನ್ನು ತರಿಸುತ್ತಾ ಇದ್ದೇವೆ. ಒಂದೊಂದು ಮೆಷಿನ್ 12-14 ಸಾವಿರ ರೂಪಾಯಿ ಆಗುತ್ತದೆ, ಅವುಗಳನ್ನು ತಾಲ್ಲೂಕು ಬೋರ್ಡುಗಳಿಗೆ, ಸೊಸೈಟಿಗಳಿಗೆ ಕೊಟ್ಟು ಆ ಮೂಲಕ ಅವುಗಳನ್ನು ಉಪಯೋಗ ಮಾಡಿಕೊಳ್ಳಲಿಕ್ಕೆ ಕೊಡ ಬೇಕೆಂದು ಇದ್ದೇವೆ. ಮೈನರ್ ಇರಿಗೇಷನ್‌ಗೆ 90 ಲಕ್ಷ ರೂಪಾಯಿ ಹೋಗುತ್ತದೆ. ತಕಾವಿ ಲೋನು ಮತ್ತು ಲ್ಯಾಂಡ್ ಇಂಪ್ರೂವ್‌ಮೆಂಟ್ ಲೋನುಗಳನ್ನು ಹೆಚ್ಚಾಗಿ ಕೊಡಬೇಕೆಂದು ಎಲ್ಲಾ ಅಧಿಕಾರಿಗಳಿಗೂ ಹೇಳಿದ್ದೇವೆ. ಅದನ್ನು ಕೊಡುವುದಕ್ಕೆ ಪ್ರಯತ್ನ ಪಡುತ್ತೇವೆ. 1964ರ ಫ್ಯಾಮಿನ್‌ಗೆ ಅಂತ ಹೇಳಿ 36 ಲಕ್ಷ ರೂಪಾಯಿಗಳನ್ನು ಪ್ರೊವೈಡ್ ಮಾಡಿದ್ದೆವು ಇನ್ನೂ 15 ಲಕ್ಷ ರೂಪಾಯಿಗಳು ಬೇಕೆಂದು ಅಧಿಕಾರಿಗಳು ಬೇಳಿವ್ವಾರೆ, ಅದನ್ನು ಮಾನ್ಯ ಮುಖ್ಯಮಂತ್ರಿಗಳು ಮತ್ತು ಹಣಕಾಸಿನ ಮಂತ್ರಿಗಳು ಗಮನಕ್ಕೆ ತೆಗೆದುಕೊಂಡು ಸಾಧ್ಯವಾದಷ್ಟೂ ಕೊಡುವುದಕ್ಕೆ ಪ್ರಯತ್ನ ಮಾಡುತ್ತಾರೆ.

ಇನ್ನು ಆಹಾರದ ವಿಚಾರದಲ್ಲಿ ನಾಲ್ಕು ಮಾತುಗಳನ್ನು ಹೇಳಿ ಮುಗಿಸುತ್ತೇನೆ. ನಾವು ಈಗಾಗಲೇ ಹೇಳಿರುವ ಹಾಗೆ ನಮ್ಮಾರು 3 ಲಕ್ಷ ಪಲ್ಲ ಆಹಾರ ಬರುತ್ತದೆ, ಮದರಾಸ್‌ನಿಂದ ರೋಡ್ ಮುಖಾಂತರ ಬೆಂಗಳೂರಿಗೆ ಗೋಧಿ ಬರುತ್ತಾ ಇದೆ, ನಿನ್ನೆ ಡಿಸ್ಪ್ಯಾಚ್ ಆಗಿದೆ. ಅವಡಿ ಡಿಪೋನಿಂದ ಹಾಲಿ 3 ಲಕ್ಷ ಪಲ್ಲ ಬರುತ್ತವೆ, ರೈಲಿನಲ್ಲಿ ತರುವುದಕ್ಕೂ ಮತ್ತು ರೋಡ್ ಮುಖಾಂತರ ಬರುವುದಕ್ಕೂ ಒಂದು ಪಲ್ಲಾಕ್ಕೆ 20 ರೂಪಾಯಿ ವ್ಯತ್ಯಾಸ ಬರುತ್ತದೆ, ಬೊಂಬಾಯಿ, ಮಹಾರಾಷ್ಟ್ರ ಮತ್ತು ಬಿಹಾರ್ ಕಡೆಗೆ ಗೋಧಿ ಹೋಗಬೇಕಾಗಿ ಬಂದದ್ದರಿಂದ ರೈಲ್ ಮುಖಾಂತರ ಬೆಂಗಳೂರಿನ ಕಡೆಗೆ ಡಿಸ್ಪ್ಯಾಚ್ ಮಾಡುವುದು 5-6 ದಿವಸದಿಂದ ಕಡಿಮೆಯಾಗಿದೆ. ಇಂತಹ ಸಂದರ್ಭದಲ್ಲಿ ಹಿಂದೇಟು ಹೊಡೆಯಬಾರದು ಎಂದು ಹೇಳಿ ಲಾರಿಗಳಲ್ಲಿ ತರಿಸುವುದಕ್ಕೆ ಏರ್ಪಾಡು ಮಾಡಿದ್ದೇವೆ. ಅವಡಿಯಿಂದ ಬರುತ್ತದೆ. ಮೈಸೂರು, ಗುಲ್ಬರ್ಗ, ಬಿಜಾಪುರ, ಬೆಳಗಾಂ, ರಾಯಚೂರು ಈ ಎಲ್ಲಾ ಕಡೆಗಳಿಗೂ ಕಳುಹಿಸಲು ಇನ್‌ಸ್ಟ್ರಕ್ಷನ್ಸ್ ಹೋಗಿದೆ. ಇದರ ಜೊತೆಗೆ ಒಂದು ಲಕ್ಷ ಪಲ್ಲ ನಾರ್ಮಲ್ ಕೋಟಾ ಕೂಡ ಡಿಸ್ಪ್ಯಾಚ್ ಮಾಡಿದ್ದಾರೆ, ಕ್ಯಾಲಿಕಟ್‌ನಿಂದ 10 ಸಾವಿರ ಪಲ್ಲ ಅಕ್ಕಿ ಮಂಗಳೂರಿಗೆ ರಿಲೀಸ್ ಆಗಿದೆ, ಅದನ್ನು ಲಾರಿಗಳಲ್ಲಿ ತರಿಸಿಕೊಳ್ಳುವುದಕ್ಕೆ ಸಾಧ್ಯವಾದರೆ ತರಿಸಿಕೊಳ್ಳಿ ಎಂದು ಹೇಳಿದ್ದೇವೆ. 2 ಲಕ್ಷ ಪಲ್ಲ ಗೋಧಿ ಆಡ್‌ಹಾಕ್ ಕೋಟಾ ಮತ್ತು ಮೊದಲಿನಿಂದಲೂ ಕೊಡುತ್ತಾ ಇದ್ದುದ್ದು 1 ಲಕ್ಷ ಪಲ್ಲಾ ಮತ್ತು 1 ಲಕ್ಷ ಪಲ್ಲಾ ಅಕ್ಕಿ ಈರೀತಿ 4 ಲಕ್ಷ ಪಲ್ಲಾ ಆಹಾರ ಧಾನ್ಯ ಬರುತ್ತದೆ, 15 ದಿವಸದಲ್ಲಿ ಸಂಸ್ಥಾನಮಳೆ ಅದು ಹಂಚಿಕೆಯಾಗುತ್ತದೆ. ಆಂಧ್ರದಲ್ಲಿ ಲೆವಿ ರಿಲ್ಯಾಕ್ಸ್ ಮಾಡುವುದರಿಂದ ಆಲ್ಲಿಂದ ಬೆಂಗಳೂರಿಗೆ ಬರತಕ್ಕ ಆಹಾರ ಇರುವುದರಿಂದ ಬೆಂಗಳೂರಿನಲ್ಲಿ ಒಂದು ಕ್ವಿಂಟಾಲ್‌ಗೆ 5-6 ರೂಪಾಯಿ ಕಡಿಮೆಯಾಗುತ್ತದೆ. ಈ ಸಭೆ ಪ್ರಾರಂಭವಾಗಿ ಇದರ ಚರ್ಚೆ ಶುರುವಾದ ಮೇಲೆ ಅನೇಕ ಕಡೆ ಮಳೆ ಬಂದಿದೆ ಎಂಬ ವಿಷಯವನ್ನು ಮಾನ್ಯ ಸದಸ್ಯರ ಗಮನಕ್ಕೆ ತರಬೇಕಾಗಿದೆ. ಧಾರವಾಡದಲ್ಲಿ 5-6 ಇಂಚು ಮಳೆಯಾಗಿದೆ ಎಂದು ಸಮಾಚಾರ ಬಂದಿದೆ. ಕೊಡಗಿನಲ್ಲಿ 6 ಇಂಚು ಮಳೆಯಾಗಿದೆ, ಬಿದರ್‌ನಲ್ಲಿ ಮಳೆ ಬಂದಿದೆ. ಈ ಪ್ರಕಾರ ಸಂಸ್ಥಾನಮಳೆ ಅನೇಕ ಕಡೆಗಳಲ್ಲಿ ಮಳೆ ಪ್ರಾರಂಭವಾಗಿದೆ, ಮಾನ್ಯ ಸದಸ್ಯರು ತಮ್ಮ ಊರುಗಳಿಗೆ ಹೋಗುವುದ

ರೊಳಗೆ ಅಲ್ಲಿನ ಪರಿಸ್ಥಿತಿಯೇ ಬೇರೆ ಇರುತ್ತದೆ; ಆರೀತಿ ಆಗುವಂತೆ ಮಾಡಲು ಎಂದು ದೇವರಲ್ಲಿ ಪ್ರಾರ್ಥನೆ ಮಾಡಿಕೊಂಡು ನನ್ನ ಭಾಷಣವನ್ನು ಮುಗಿಸುತ್ತೇನೆ.

†Sri S. NIJALINGAPPA.—Sir, we have been listening to a very useful debate. I must thank you and I am grateful to you, on behalf of the House, for the way in which you have conducted this Debate. I am glad that no district and no area has been left out and every part of it has been spot-lighted by the representatives of both sides of the House regarding the problems which are facing their respective areas. This year, Mysore is really facing a crisis. This sort of situation is an annual occurrence and we know it. So long as Mysore remains as what it is, without its area under cultivation increasing, we have to face these problems always. It is true we produce the largest quantity of Coffee, the finest variety of silk and all that. We also produce large quantities of cotton and oil seeds, and possibly, we are second or third in India so far as production of commercial crops are concerned. But, the grave problem to-day is the production of food. Our agricultural production cannot go up unless the area under irrigation is increased, and Mysore, along with Gujarat and Maharashtra are the three States, which has possibly got the lowest ratio of irrigated area and Mysore, possibly, is at the bottom, with only about 5 per cent about five or six years ago and now rising up to 7 to 7½ per cent. It is possible to increase this area to 24 per cent, provided the big irrigation schemes, the medium irrigation schemes and the minor irrigation schem s are taken up and worked out. The sooner we do it the better. I have already submitted quite often in this House and also outside that the Central Government should come to our help so far as these schemes are concerned, which cost more than Rs. 10 crores, and it is likely that the Planning Commission will accept and recommend to the Central Government; and it is very likely that they may accept it. Unless they do so, it is impossible for us to carry on with either the overall construc tion of the medium irrigation schemes or the minor irrigation schemes and dig more irrigation wells. These are the problems which face Mysore and certain other dry areas. Unfortunately the major portion of Mysore towards the east is a scareity area and ominous situations bordering on famine occur. We have to avoid it. It is only by these means. We are doing everything possible and I am glad to say that we are complimented by the Planning Commission in the way in which we are carrying on the minor irrigation works and digging of wells. We have got the necessary tempo, we have the necessary staff to carry on these things and we have got the necessary experience, but the only thing that is holding up is finances. I am glad to say, as my colleague pointed out, that the Central Government have accepted in part our recommendations, and we have been getting last year about two crores and this year about 6½ crores. I have again stressed that this must be increased and unless that is done, we would not be able to increase the area under irrigation. Unfortunately for us, last year production of food grains was less than usual. That was to the extent of a lakh and odd tons and that has resulted in this short-fall. Added to that, this year rains are held out, even up to this day,

(SRI S. NIJALINGAPPA)

we have not had sufficient amount of rains in most parts of the State except that during the last two or three days we have been receiving very glad news of rain-fall here and there. We should not choose to become complacent because there has been a rain-fall and thus stop our attempts to push through our programme. Therefore, without just entering into the details of the many points that have been made out, I want just to say what we propose to do. It is true that there are some stocks of food-grains in certain places. Prices have risen because the merchants know that from Andhra we would not be able to get rice. The policy of procurement by levy is an unscientific process and we have declared that it should on all account be abandoned. I am glad to say that the Central Food Minister at the Conference of Chief Ministers, has accepted this policy. It is not going to be shifted, possibly, it will be discontinued for ever, it hits the producer hard and what usually happens is, the producer sells it at a particular rate comparatively low at the time of the harvest because he has many demands to satisfy, and as time goes on, within four or five months. the lean period begins and the 'merchant who has stock makes use of the situation for his own betterment. The result is, while the producer gets fairly good price-they will sometimes lose-the consumer on the other hand suffers. The point is, both the producer and the consumer are not having a fair deal and most of the profit is going to the middle-man, and the fact that there was procurement by levy and as a consequence price of rice in Andhra went up, was responsible for our not receiving sufficient amount of rice from Andhra. And as usual, what we grow goes to Kerala because our people are not accustomed to rough varieties or coarse varieties of rice. As usual, it has gone up to two lakh tons or even a little bit more. On the other hand, what we had to make up has not been received because of the rise in prices and people who profit by such a situation have been making profits and so, prices have gone up. The only way it could be done is to see that food-grains are received in fairly large quantities. That is what we have got to do. I have spoken to merchants and they have expressed all sympathy for us. They say: "the price of paddy is Rs. 53 per palla and how can we sell it for less". I told them: "you have purchased at Rs. 40 to Rs. 42 and now you sell it for Rs. 70, which gives large amount of profit." I am sure that they will listen. Some amount of loss may come in from the services. Andhra Pradesh is certainly going to see that the profits go down, and here it may happen very soon. But, this is a problem which we have to face, and I am glad that the Central Government has appreciated the existing deficit in Mysore and they have promised both wheat and rice to us; it is being rushed up and very soon we will be receiving certain quantities of food-stuffs. It is also true that certain other varieties of food-grains, *viz.*, Dhall is going up very high. That again, is because the areas which were supplying Dhall have put an embargo. The Chief

Ministers' Conference have taken a decision that there should not be any objection by the States to the movement of food-grains and Dhall. I think, we will be getting more Tur Dhall from Maharashtra and the price will go down. Mere price going down is not sufficient. Because of the late rains, agricultural operations have not begun. What happens when rains fail or are late in coming is that the agriculturist cannot continue or begin his operation either of growing or sowing. The result is that a large percentage of labour in the village suffers. That is exactly what has happened to-day. The only way we can do it, is that we must create opportunities for labour, to those poor people. That is a problem that we have to face. Even if we rush foodgrains and even if the rates are reasonably lower, unless we find work for them, it is not possible for them to purchase. It is, therefore, that we have decided upon taking up certain works. It is true that because of the late rains and part failure of rains last year, many agriculturists are not able to pay the land revenue, surcharge and also discharge the Takavi loans. We have been watching the situation fairly carefully and we have decided that from to-day onwards there will be no recovery either of land revenue or surcharge or of loans due under Takavi.

6-00 P.M.

That will give them some relief. It very often happens that the poor man out of fear will have given it. It is some rich people that will have withheld payment because they think they can give at any time and even possibly poor revenue officials will be afraid to take coercive steps against them. Now that this step is taken by Government, I appeal to those well-to-do farmers not to withhold payment. It is only suspended. Therefore, it is good for them to pay off what is due by them. It is a personal appeal ; it is an appeal on behalf of the Government that they must pay it up. I hope the richer classes will do so. No coercive steps will be taken to recover the dues and collections of land revenue, surcharge and taccavi loans are postponed. This alone will not be sufficient. We have to give to them. We have taken up a scheme of repairing minor tanks and putting up minor irrigation projects and of giving more help for the digging of irrigation wells. What is being done and we will do everything possible to hasten up that process and see that these works are taken up more in the scarcity areas. There are some minor irrigation projects which have been estimated, surveyed and are ready to be taken up. We have carefully considered the areas where scarcity conditions are prevailing and even though these minor irrigation projects are not budgeted items we have decided to take up those schemes and work them up so that people may get work. They may not be budgeted. Even then we are going to take those schemes in those areas. This is going to help them quite a lot and the Revenue Minister has given all the details of the way we are going to expend Rs. 3 and odd crores which we received and which was very sympathetically sanctioned by the Central Government to see that those schemes are taken up and worked. These are the things which we are

(SRI S. NIJALINGAPPA)

going to have. The agricultural labour and the poor man in the rural areas may get necessary work to do. These are things that we have decided upon. But the worst sufferers in such scarcity conditions are the animals. Somehow, man finds food, but animals find it very hard and I am sorry that they suffer most because they are dumb, they are helpless. Therefore, we are making efforts to see if any fodder is available. I am glad that an offer comes Mr. Allam Karibasappa who says that even if it is 500 or more truck-loads of hay, he is going to get it from Hubli and other areas, but he wants us to take the responsibility of carrying it to needy areas. I contacted the Deputy Commissioner of Mandya. He says he will do his level best. I am going to appeal to the farmers in the areas where fodder is available that they may make it available for these poor animals. We have been thinking of getting it wherever it is available and if possible, use our own lorries owned mostly by the Public Works Department and carry it tothe areas wherever the animals are suffering for want of food or fodder. I think that will ease the situation. We are going to take immediate steps in this behalf.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ರೈಲ್ವೆಯಲ್ಲಿ ರಿಯಾಯಿತಿ ಕೇಳುವುದು ಏನಾಯಿತು ಸ್ವಾಮಿ ?

Sri S. NIJALINGAPPA.—I am not sure if carrying in the railways will pay at all. We will make enquiries. If it is good, we will pay. This is what we propose to do. Honourable Members here have made a large number of proposals which have already been taken up by the Government themselves. Three-day discussion is an attempt to convert the faithful. Because, what we have decided, what we are doing is the same thing that members have proposed. That is a point which shows that the whole House is intent upon doing these things and it is a compliment to Government that they have gone further than what the Members themselves have suggested. Therefore, I take it as a compliment, though a lot of pepper and ginger have to be added when the Opposition has its say. I quite sympathise with them. They must add some amount of salt or pepper; otherwise, it will not be made tasty. I accept it. If there is criticism I accept it. If it is constructive I am grateful to them; but if it is unnecessarily critical I simply take notice of it, smile at it, have tolerance at human weakness.

Sri B. P. KADAM (Karwar).—You ignore it.

Sri S. NIJALINGAPPA.—I won't do that, because you are the representatives of the people. To that extent you are entitled to highest respect, unless it is mala fide.

As a long term measure suggestions are also made about our food habits. Though I am not going to change my food habit, I don't mind if others change their food habit. Both the Central Government and he State Government are now intent upon what are known as food rash programmes; that is, improvement in various subsidiary foods,

namely fish, meat, eggs and milk. I would like to add fruit and vegetables. If one is a vegetarian, he might have more milk and more vegetables. If he is a non-vegetarian, he might have more meat, more fish and more what-not. Therefore, it is very necessary. I am saying this beeause in the whole world we are the greatest consumers of cereals. We take in such a lot that find it difficult to grow them to meet our requirements. Therefore, we have to change our food habits. We must be satisfied with half the cereals but more subsidiary foods. We will be healthy, have a balanced diet and be fit for more work. Therefore, I appeal to those who are in charge of department and the people that they must interest themselves in having more fisheries and developing it, more poultry, more piggery, more sheep breeding and more dairies and more fruits and more vegetables. Government is ready to foot the bill to see that these crash programmes wherever they are undertaken are sufficiently financed. We are aware of the situation. We have been doing everything possible. We are humble enough to appreciate the situation; we are ready to do it. Any suggestions that may have still to be made by members are welcome. We accept them if they are acceptable and we will work them. Sir, the entire energy of the Government is directed towards the solving of these problems.

Sri V. S. PATIL(Belgaum).—The Hon'ble Chief Minister was pleased to say that the food growers do not get adequate price sometimes, because they are in need at the time of harvest and they have to sell their food products, and the consumers are also hit hard by this middleman. What is the remedy that is found out by the Government? There is a trend in the whole of the country to suggest that this food-grain dealing must be taken up by the Government in order to save the cultivator, the producer and to give food to the consumer at a less price. What is the view of the Government in this regard?

Sri S. NIJALINGAPPA.—I am sorry, for want of time, I did not deal specifically with this problem. It is true that the consumer and the producer are not having a fair deal. In fact, we have made an experiment, we are still making it and I am sure we will be successful. Last year, we made use of the machinery of purchase and sale through co-operatives. I may say that last year when prices of pady were falling below Rs. 21 or 22, we asked the Co-operative Socities to get in and purchase so that the price went up to Rs. 24 or Rs. 25 per bag, and in the lean year, towards October and November when the prices began to rise high, we asked them to sell at Rs. 2 less than the market price. It helped the trade quite a lot. But, this year, even at the commencement, the rates were very high. We have asked the co-operatives to purchase and stock some foodstuffs. We have now stocked about one lakh bags, i. e,, about hundred thousand quintals. They are ready in the Co-operative Societies and we are going to release them. But, I think, we have to take greater steps and intensify this campaign of purchase by the co-operative societies or make them our Commission Agents and purchase. This is being very seriously considered, and I think, by next

(SRI S. NIJALINGAPPA)

time, we are going to take it up more seriously. Now when the crops come in at the harvest time, it would be very good for us to purchase, stock it and discharge it, so that without affecting the private sector we can manage to keep a balance, which will be both serving the producer and the consumer.

Sri V. S. PATIL.—As an incentive to the producer, is Government prepared to fix up the floor prices of these foodgrains? Otherwise, those people have to fall a pray to their necessity and that is one of the reasons why food grains are not grown in sufficient quantities.

Sri S. NIJALINGAPPA.—That is very much in the consideration of Government and very soon we are going to take a decision about it because it is an All-India policy and we have to meet very often about this, and possibly we will take a decision and fix up prices.

ಶ್ರೀ ವಿ. ಎಸ್. ಪಾಟೀಲ್.—ಕಂದಾಯ ವಸೂಲ್ಮಾಡಬೇಕೆಂಬ ಆದೇಶದ ಪ್ರಕಾರ ಜೂನ್ 25 ನೇ ತಾರೀಖಿನೊಳಗಾಗಿ ಕೋಆಪರೇಟಿವ್ ಸ್ಟೆಪ್ಸ್ ಉಪಯೋಗಿಸಿ ಲ್ಯಾಂಡ್ ರೆವಿನ್ಯೂ ನರ್ಚಾರ್ಜ್ ವಸೂಲ್ಮಾಡಿಬಿಟ್ಟಿದ್ದಾರೆ. ರೈತರು ತಮ್ಮ ಹತ್ತಿರವಿದ್ದ ಜೋಳವಾರಿ ಹಣಕೊಟ್ಟಿದ್ದಾರೆ. ಈಗ ಅವರಿಗೆ ತಿನ್ನುವುದಕ್ಕೆ ಜೋಳ ಇಲ್ಲ. ಹಣವೂ ಇಲ್ಲ. ಅಂಥವರು ಏನುಮಾಡಬೇಕು ? ಅವರಿಗೆ ಏನು ಪರಿಹಾರ ಕೊಡುತ್ತೀರಿ?

ಶ್ರೀ ಎಸ್. ನಿಜಲಿಂಗಪ್ಪ.—ಅದಕ್ಕೆ ಏನೂ ಪರಿಹಾರವಿಲ್ಲ. ಕೆಲಸಮಾಡಿ ಹೊಟ್ಟೆತುಂಬಿಕೊಳ್ಳಬೇಕು. ಕೊಟ್ಟಿರತಕ್ಕಂಥ ಕಂದಾಯ ಹಿಂತಿರುಗಿ ಕೊಡುವುದಕ್ಕಾಗುವುದಿಲ್ಲ. ಆಹಾರಧಾನ್ಯ ಒದಗಿಸುತ್ತೇವೆ. ಕೆಲಸ ಕೊಡುತ್ತೇವೆ.

Sri H. R. KESHAVA MURTHY (Gandasi).—What steps the Government is going to take for the poor, who have no means to purchase foodgrains and who have no strength to work?

Sri S. NIJALINGAPPA.—I think, that question has been already answered.

ಶ್ರೀ ಆರ್. ಎನ್. ಲಕ್ಷ್ಮೀಪತಿ (ಗೌರಿಬಿದನೂರು).—ಈಗ ಇರಿಗೇಶನ್ ಪಂಪ್‌ಸೆಟ್‌ಗಳಿಗೆ ವಿದ್ಯುತ್‌ಶಕ್ತಿ ಒಂದು ಯೂನಿಟ್ಟಿಗೆ 6ನಯೇ ಪೈಸೇ ಇದ್ದುದನ್ನು ಕಳೆದ 3 ತಿಂಗಳಿನಿಂದ 8 ನಯೇ ಪೈಸೇ ಮಾಡಿ ಒಂದುಪೈಸಾ ಟ್ಯಾಕ್ಸ್ ಹಾಕಿ ವಸೂಲ್ಮಾಡುತ್ತಿದ್ದಾರೆ. ಇದು ಶೇಕಡಾ 50ರಷ್ಟು ಜಾಸ್ತಿಯಾಗಿದೆ. ರೇಟ್ ಕಡಿಮೆಮಾಡುವ ಬಗ್ಗೆ ಏನು ಹೇಳುತ್ತೀರಿ?

ಶ್ರೀ ಎಸ್. ನಿಜಲಿಂಗಪ್ಪ.—ಇದು ಉತ್ಪ್ರೇಕ್ಷೆಮಾಡಿ ಹೇಳಿದಂತೆ ಇದೆ. ಕಡಿಮೆರೇಟಿನಲ್ಲಿ ಲೂಕ್ಸಾನ ಮಾಡಿಕೊಂಡು ಕೊಡುವುದಕ್ಕಾಗುವುದಿಲ್ಲ. 8ಪೈಸೆ ರೇಟಿನಲ್ಲಿ ಸಹ ನರಕಾರಕ್ಕೆ ಲೂಕ್ಸಾನವಾಗುತ್ತದೆ. ನರಿಯಾಗಿ ಯೋಚನೆಮಾಡಿ ನೋಡಿದರೆ ಇದು ಜಾಸ್ತಿ ಎಂದು ಕಾಣುವುದಿಲ್ಲ.

ಶ್ರೀ ಎಸ್. ನಂಜೇಗೌಡ (ಕೃಷ್ಣರಾಜಪೇಟೆ).—ತಗಾಯಿನಾಲ ವಸೂಲ್ಮಾಡುವುದನ್ನು ತಾತ್ಕಾಲಿಕವಾಗಿ ತಪ್ಪೆ ಹಿಡಿಯುತ್ತೀರಾ?

ಶ್ರೀ ಎಸ್. ನಿಜಲಿಂಗಪ್ಪ.—ನಿಮ್ಮ ಸೂಚನೆ ವಿಚಾರ ಮಾಡುತ್ತೇವೆ.

ಶ್ರೀ ಆರ್. ಎಸ್. ಪಾಟೀಲ್.—ದೊಡ್ಡ ನೀರಾವರಿ ಯೋಜನೆ ಸೌಲಭ್ಯ ಬರುವಂಥ ಹಳ್ಳಿಗಳಲ್ಲಿ ಚಿಕ್ಕನೀರಾವರಿ ಯೋಜನೆ ಮಾಡಬಾರದು ಎಂದು ನರಕಾರದ ನೀತಿ ಇದೆ. ಆದುದರಿಂದ ನಮ್ಮ ಪ್ರದೇಶದಲ್ಲಿ ಚಿಕ್ಕ ನೀರಾವರಿಯಾಗುವುದಕ್ಕೆ ಬರುವುದಿಲ್ಲ. ಇದಕ್ಕೆ ಏನು ಉತ್ತರ ಹೇಳುತ್ತೀರಿ?

ಶ್ರೀ ಎಸ್. ನಿಜಲಿಂಗಪ್ಪ.—ನರ್ವೇ ಸಾಧಾರಣವಾಗಿ ಹಾಗೆ ಮಾಡುವುದು ನರಿಯಲ್ಲ. ಅದನ್ನು ಮಾಡಬಾರದು. ಅದರೆ ಬೆಳಗಾಂ ಜಿಲ್ಲೆಯಲ್ಲಿ ಇರತಕ್ಕಂಥ ಕೆಲವು ಸ್ನೇಹಿತರಿಗೆ ತೊಂದರೆ ಇದೆ. ಅದನ್ನು ತೀವ್ರ ಆಲೋಚನೆ ಮಾಡುತ್ತಾ ಇದ್ದೇವೆ.

Mr SPEAKER.—The House will now adjourn to meet at 12 NOON tomorrow.

The House adjourned at Twenty Minutes past Six of the Clock to meet again at Twelve of the Clock on Friday, the 3rd July 1964.

WD 3304—GPB—900—9-10-1964